ಶ್ರೀ ಕೆ.ಆರ್. ರಮೇಶ್‌ಕುಮಾರ್: Art of possibility is with regard to Napoleon. It was referred to as the earlier one with reference to Hitler.

ಶ್ರೀ ಎಂ.ಪಿ. ಪ್ರಕಾಶ್:- Again Napoleon also knew that nobody was hero to his wallet.

ಶ್ರೀ.ಎಂ.ಮಲ್ಲಿಕಾರ್ಜುನ ಖರ್ಗೆ: ಇವರಿಬ್ಬರೇ ಮಾತನಾಡಿಕೊಂಡರೆ ನಮಗೆ ಅರ್ಥವಾಗುತ್ತಿಲ್ಲ, ಆದುದರಿಂದ ನಾನು ಸ್ಪಷ್ಟವಾಗಿ ಕೇಳುತ್ತಿದ್ದೇನೆ, ಸ್ಕ್ಯಾಂಡ್ರಲ್ ಯಾರು, ಹಿಟ್ಲರ್ ಯಾರು ಆಮೇಲೆ ನೆಪೋಲಿಯನ್ ಯಾರು? ನಮಗೆ ಇದೆಲ್ಲಾ ಅರ್ಥವಾಗಬೇಕಲ್ಲ, ಇವರು [ಮಾನ್ಯ ರಮೇಶ್ ಕುಮಾರು] ಹೇಳಿ ಹೊರಗೆ ಹೋಗುತ್ತಾರೆ, ಅವರು [ಮಾನ್ಯ ಎಂ.ಪಿ. ಪ್ರಕಾಶ್] ಹೇಳಿ ನಗುತ್ತಾ ಕುಳಿತುಕೊಳ್ಳುತ್ತಾರೆ, ಈ ಸದನದ ಸಮಯ ವೇಸ್ಟ್ ಆಗಲಿಲ್ಲವೇ ಅಧ್ಯಕ್ಷರೆ?

ಶ್ರೀ ಎಂ.ಪಿ. ಪ್ರಕಾಶ್: ಸಾರಿ ಸರ್.

ಶ್ರೀ ಮಹಿಮಾ ಜೆ. ಪಟೇಲ್: ಮಾನ್ಯ ರಮೇಶ್ ಕುಮಾರ್‌ರವರು, ನೀವು ಸರಿಯಾಗಿ ಕೆಲಸ ಮಾಡದೇ ಇದ್ದರೆ ಕಾಂಗ್ರೆಸ್ ಪವರ್‌ಗೆ ಬರುತ್ತದೆ ಎನ್ನುವುದನ್ನು ಆ ರೀತಿಯಾಗಿ ಹೇಳಿದರೆಂದು ಕಾಣಿಸುತ್ತದೆ.

ಅಧ್ಯಕ್ಷರು: ಈಗ ಮಾನ್ಯ ವಿರೋಧಪಕ್ಷದ ನಾಯಕರು ಒಂದು ನಿರ್ಣಯವನ್ನು ಓದಿ ಹೇಳಿದರು, ನಿರ್ಣಯವನ್ನು ಕಳುಹಿಸಿದ್ದಾರೆ, ನಿಯಮಾವಳಿಗಳ ಪ್ರಕಾರ ತಕ್ಷಣಕ್ಕೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಅದಕ್ಕೆ ಕಾವೇರಿ ಬಗ್ಗೆ ಸರ್ಕಾರ ಹೇಳಬೇಕು.

(ಆ) ಕಾವೇರಿ ನ್ಯಾಯ ಮಂಡಳಿ ತೀರ್ಪಿನ ಬಗ್ಗೆ.

ಶ್ರೀ ಎನ್. ಧರ್ಮ್‌ಸಿಂಗ್ [ವಿರೋಧ ಪಕ್ಷದ ನಾಯಕರು]: ಇಲ್ಲಿಯವರೆಗೆ ನಮ್ಮ ಎಲ್ಲಾ ಹಿರಿಯ ನಾಯಕರು ಪ್ರಸ್ತಾಪ ಮಾಡಿದರು. ಇವತ್ತು 14ನೇ ತಾರೀಖು ಅಧಿವೇಶನವನ್ನು ಕರೆಯುವ ಪ್ರಮೇಯವಿರಲಿಲ್ಲ, ಆದರೂ ಕೂಡ ನೀವು ಕರೆದಿದ್ದೀರೆಂದು ನಿಮಗೆ ಗೌರವವನ್ನು ಕೊಟ್ಟಿದ್ದೇನೆ. ಕಳೆದ ಸಲ ಅಜೆಂಡಾದಲ್ಲಿ ಏನು ಬಿಲ್ಲುಗಳಿದ್ದವೋ ಅವೇ ಬಂದಿವೆ. ವಿಶೇಷವಾದ ಪರಿಸ್ಥಿತಿಯಲ್ಲಿ ಸದನವನ್ನು ಕರೆದಿದ್ದೇನೆ, ಚರ್ಚೆಯಾಗಬೇಕೆನ್ನುವ ರೀತಿಯಲ್ಲಿ, ಇದು ಸಮರ್ಥನೀಯವಾದುದ್ದಲ್ಲ. ಆದರೂ ಕೂಡ ತಾವು ಅಧ್ಯಕ್ಷರಿದ್ದೀರೆಂದು ಗೌರವವನ್ನು ಕೊಡಬೇಕಾಗುತ್ತದೆ,

ಇವತ್ತು ತಾವೇನು ಹೇಳಿದ್ದೀರಿ ಅದಕ್ಕೆ ಒಪ್ಪುತ್ತೇವೆ. ಆದರೆ ಇವತ್ತಿನ ದಿವಸ ಈ ಬಿಲ್‌ಗಳ ಮಧ್ಯದಲ್ಲಿ, ಕಾವೇರಿ ಬಗ್ಗೆ ರಾಜ್ಯದಲ್ಲಿ ಎಲ್ಲಾ ಕಡೆ ಪ್ರತಿಭಟನೆಗಳು ನಡೆಯುತ್ತಿವೆ, ರಾಷ್ಟ್ರಮಟ್ಟದಲ್ಲೂ ಕೂಡ ನಡೆಯುತ್ತಿದೆ. ಅದರ ಬಗ್ಗೆ ಇವತ್ತು ನಾವು ವಿರೋಧಪಕ್ಷದ ಪರವಾಗಿ ನಿರ್ಣಯವನ್ನು ಕೊಟ್ಟಿದ್ದೇವೆ, ತಮಗೂ ಕೂಡ ಬಂದಿದೆ. ಆ ನಿರ್ಣಯದ ಬಗ್ಗೆ ಚರ್ಚೆ ಮಾಡುವ ರೀತಿಯಲ್ಲಿ ಇವತ್ತು ಕಲಾಪ ಪ್ರಾರಂಭವಾಗಬೇಕು, ನಾವು ಚರ್ಚೆಯನ್ನು ಪ್ರಾರಂಭ ಮಾಡುತ್ತೇವೆ.

ಅಧ್ಯಕ್ಷರು: ಕಾವೇರಿ ವಿಚಾರವನ್ನೇನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ಸರ್ಕಾರದಿಂದೇನು ರಿಯಾಕ್ಷನ್ ಎಂಬುದನ್ನು ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಸರ್, ತಮ್ಮ ಮೇಲೆ ಇದು ಅವಲಂಬಿಸಿದೆ. ಏಕೆಂದರೆ, ಕಾವೇರಿ ತೀರ್ಪು ಹೊರಗೆ ಬಂದು ಇವತ್ತಿಗೆ 38 ದಿವಸಗಳಾಯಿತು. 38 ದಿವಸದಲ್ಲಿ ಒಂದು ಸಂದೇಶವೇನು ಹೋಗುತ್ತದೆ ಎಂದರೆ ಅಧಿವೇಶನ 16ನೇ ತಾರೀಖು ಇದ್ದರೂ ಕೂಡ, 14ನೇ ತಾರೀಖು ಅಧಿವೇಶನವನ್ನು ಕರೆಯಿಸಿ, ಈ ಬಗ್ಗೆ ಚರ್ಚೆಯನ್ನು ಕೂಡ ಮಾಡಿಲ್ಲ ಎನ್ನುವುದೊಂದು. ಈಗಾಗಲೇ ನಡೆದ ಸರ್ವಪಕ್ಷ ಸಭೆಯಲ್ಲೂ ಕೂಡ ಕೆಲವು ಸದಸ್ಯರು, ಕೆಲವು Non–political NGOs, ಕೆಲವು Farmers Associations, ಬೇರೆ ಬೇರೆ Associations ಅವರು ಏನು ಕೇಳಿದರೆಂದರೆ, ಇದನ್ನು ಸದನದಲ್ಲಿ ಏತಕ್ಕೆ ಚರ್ಚೆ ಮಾಡಲಿಲ್ಲ ಎನ್ನುವ ಪ್ರಶ್ನೆ ಅಲ್ಲಿ ಬಂತು. ಎರಡು ದಿವಸಗಳ ಮುಂಚೆ ಅಧಿವೇಶನವನ್ನು ಕರೆಯುತ್ತೀರೆಂದರೆ, ನಾವೇನು ತಿಳಿದುಕೊಂಡೆವೆಂದರೆ, ನಿಮ್ಮ top & prioriy agenda ಕಾವೇರಿ ಅವಾರ್ಡ್ ಎಂದು ತಿಳಿದುಕೊಂಡಿದ್ದೇವೆ. ಅದಕ್ಕೆ ಇದರ ಬಗ್ಗೆ ಚರ್ಚೆ ಮಾಡುತ್ತಾರೆಂದು ನಾವು ಕೂಡ ತಲೆಯಲ್ಲಿಟ್ಟುಕೊಂಡು ಬಂದಿದ್ದೇವೆ. ಆದರೆ ನೀವು, ಬಿಲ್ ತೆಗೆದುಕೊಳ್ಳುವ, ಬಿಲ್‌ಗೋಸ್ಕರ ಬಂದಿದ್ದೇವೆಂದರೆ, ನಿಜವಾಗಿಯೂ ಇದರ ಮಹತ್ವ ಹೋಗುತ್ತದೆ. ಮತ್ತೆ ಇವತ್ತು ಅಧಿವೇಶನ ಸೇರಿದ ಮೇಲೆ ಏನು ಚರ್ಚೆಯಾಗುತ್ತದೆ ಎನ್ನುವುದರ ಬಗ್ಗೆ ರಾಜ್ಯದ ಜನರು ಕೂಡ ಈ ಕಡೆ ಗಮನಹರಿಸಿದ್ದಾರೆ. Special Session ಕರೆದಿದ್ದಾರೆ, 16ನೇ ತಾರೀಖು ಬಜೆಟ್ ಇತ್ತು, ಆದರೂ 24ನೇ ತಾರೀಖು ಅಧಿವೇಶನವನ್ನು ಕರೆದು ಇದರ ಬಗ್ಗೆ ಚರ್ಚೆ ಮಾಡಬೇಕೆಂದು ಎಲ್ಲಾ ಶಾಸಕರು ಸೇರಿದ್ದಾರೆ ಎಂಬುದು ನಮ್ಮ ಅಭಿಪ್ರಾಯ. ದಯವಿಟ್ಟು ಆ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ತಾವು ಇವತ್ತು

ಕಾವೇರಿ ಜಲವಿವಾದದ ವಿಷಯದ ಬಗ್ಗೆ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕು, ಮತ್ತೆ ಈಗೇನು Resolution move ಮಾಡಿದ್ದೇವೆ, ಇದು ಕೇವಲ 5 sentence resolution. ಇದನ್ನು ಬೇಕಾದರೆ ಅವರು ನೋಡಿಕೊಳ್ಳಲಿ, ನೋಡಿಕೊಂಡು, ಕೂಡಲೇ ಇದನ್ನು adopt ಮಾಡಿಕೊಂಡರೆ ಚರ್ಚೆಯ ಅವಶ್ಯಕತೆ ಇಲ್ಲ, ಅದಕ್ಕಾಗಿ ಇದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ವವಾದ ವಿಷಯವೆಂಬುದರ ಬಗ್ಗೆ ಎರಡನೇ ಮಾತಿಲ್ಲ. ಈ ತೀರ್ಪಿನಿಂದ ಇಡೀ ರಾಜ್ಯಕ್ಕಾದ ಅನ್ಯಾಯದ ವಿಚಾರದಲ್ಲಿ, ಇಡೀ ಕರ್ನಾಟಕದಾದ್ಯಂತ ಎಲ್ಲಾ ಸಂಘ ಸಂಸ್ಥೆಗಳು, ವ್ಯಕ್ತಿಗಳು ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಎರಡು-ಮೂರು ಸಾರಿ ಸರ್ವಪಕ್ಷಗಳ ಮುಖಂಡರುಗಳ ಜೊತೆಯಲ್ಲಿ ಚರ್ಚೆ ಮಾಡಿದ ನಂತರ, ವಿಧಾನಮಂಡಲದ ಎಲ್ಲಾ ನಾಯಕರುಗಳ ಮತ್ತು ವಿರೋಧಪಕ್ಷಗಳ ನಾಯಕರುಗಳ ಜೊತೆಯಲ್ಲಿ ಸಮಾಲೋಚಿಸಿದ ನಂತರ, ಸಂಪೂರ್ಣವಾದ ಸಹಕಾರವನ್ನು ಎಲ್ಲರೂ ಕೂಡ ಕೊಟ್ಟಿದ್ದಾರೆ. ಅದಕ್ಕೆ ನಾವು, ಎಲ್ಲಾ ವಿರೋಧಪಕ್ಷಗಳ ನಾಯಕರು ಮತ್ತು ಎಲ್ಲಾ ಪಕ್ಷಗಳ ಮುಖಂಡರುಗಳನ್ನು ಕೃತಜ್ಞತೆಯಿಂದ ಅಭಿನಂದಿಸುತ್ತೇವೆ. ಮತ್ತೆ ಇಡೀ ಜನತೆ ಕಾನೂನುಬಾಹಿರವಾದ ಯಾವ ಚಟುವಟಿಕೆಯನ್ನೂ ಮಾಡದೇ ಅತ್ಯಂತ ಶಾಂತಿಯುತವಾಗಿ ತಮ್ಮ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಅವತ್ತು ನಾವು ಸರ್ವಪಕ್ಷಗಳ ಮುಖಂಡರುಗಳ ಸಭೆಯನ್ನು ಕರೆದಾಗ, ಅಲ್ಲಿ ಒಂದು ಗೊತ್ತುವಳಿಯನ್ನು ಮಾಡಬೇಕೆಂದಾಗ ಕೂಡ ಎಲ್ಲರೂ ಸಹಕಾರವನ್ನು ಕೊಟ್ಟು, ಆ ಗೊತ್ತುವಳಿಯನ್ನು ಸರ್ವಾನುಮತದಿಂದ ತೆಗೆದುಕೊಂಡಾಗ, ಕೆಲವು ಸದಸ್ಯರುಗಳು, ಸದನದಲ್ಲಿ ಇಂತಹ ನಿರ್ಣಯ ಮಾಡುವುದು ಉಚಿತ, ಅದಕ್ಕೆ ಹೆಚ್ಚು ಘನತೆ ಬರುತ್ತದೆನ್ನುವ ಅಭಿಪ್ರಾಯವನ್ನು ಕೂಡ ಹೇಳಿದರು. ಅದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪ್ರಸ್ತಾಪ ಮಾಡಿರುವುದು ಕೂಡ ಸರಿ ಇದೆ. ಆ ಸಂದರ್ಭದಲ್ಲಿ ಕೆಲವರು ಇದನ್ನು ಸರ್ಕಾರದವರೇ ಮಂಡಿಸಿದರೆ ಬಹಳ ಒಳ್ಳೆಯದು ಎನ್ನತಕ್ಕಂತಹ ಮಾತನ್ನು ಹೇಳಿದರು. ಆದರೆ ಆ ನಿರ್ಣಯವನ್ನು ಬೇರೆಯವರೂ ಕೂಡ ಮಂಡಿಸಬಹುದು ಎನ್ನತಕ್ಕಂತಹ ಮಾತನ್ನು ಹೇಳಿದೆವು. ಈ ಸಂದರ್ಭದಲ್ಲಿ ನಾನು ಹೇಳಿದೆ, ನಿಯಮಾವಳಿಗಳ ಕೆಳಗೆ

ಯಾವುದೇ ತರಹದ ರಕ್ಷಣೆಯನ್ನು ಪಡೆಯಲಿಕ್ಕೆ ತಯಾರಿಲ್ಲ ಎಂದು. ನಿಯಮಾವಳಿಗಳು ಏನು ಹೇಳುತ್ತವೆ? ಯಾವುದೇ ಈ ತರಹದ ಖಾಸಗಿಯಾದ ಗೊತ್ತುವಳಿಯನ್ನು ಮಂಡಿಸಬೇಕಾದರೆ, ಏಳು ದಿವಸಗಳ ಅವಧಿ ಇರುತ್ತದೆ. ಇದು ಒಂದು ಅಕಾಡೆಮಿಕ್ ಆಗಿ ಎಂದು ತಾವು ಬಾವಿಸಬೇಕು. ನಮ್ಮ ನಿಯಮಾವಳಿಗಳು ಏನು ಹೇಳುತ್ತವೆ ಎನ್ನತಕ್ಕಂತಹ ವಿಚಾರದಲ್ಲಿ, 'A member, other than a Minister, who wishes to move a resolution to that effect shall give at least seven clear days before the date of ballot and shall, together with notice, submit the text of the resolution which he wishes to move' ಎನ್ನತಕ್ಕಂಥದ್ದು ಇದೆ. ಅದಕ್ಕೆ ಖಾಸಗಿ ಸದಸ್ಯರುಗಳ ನಿರ್ಣಯಗಳನ್ನು ಯಾವ ಸಂದರ್ಭದಲ್ಲಿ ಮಂಡಿಸಬೇಕು ಎನ್ನತಕ್ಕಂಥದ್ದು ಮತ್ತೊಂದು ಇದೆ. ಅದು ಎಲ್ಲರಿಗೂ ಕೂಡ ಗೊತ್ತಿರತಕ್ಕಂಥದ್ದು. ಎಲ್ಲ ಹಿರಿಯರಿದ್ದೀರಿ. ಈ ನಿಯಮಾವಳಿಗಳ ಕೆಳಗೆ ನಾನು ಇಂತಹ ಮಹತ್ವವಾದ ವಿಚಾರವನ್ನು ಅಧ್ಯಕ್ಷರಾದ ತಾವು ಅಭಿಪ್ರಾಯ ಪಡುವುದಾದರೆ, ಆ ನಿಯಮಾವಳಿಗಳಲ್ಲಿ ತಾವು ಸೇರಿಸಬಹುದು, ಅವಕಾಶವನ್ನು ಕಲ್ಪಿಸಿಕೊಡಬಹುದು. ಆ ತರಹದ ಅಂತರ್ಗತ ಹಕ್ಕು ತಮಗೆ ಇದೆ. ಈ ಹಿನ್ನೆಲೆಯಲ್ಲಿ ಅವತ್ತು ಪ್ರಶ್ನೆ ಮಾಡಿರತಕ್ಕಂಥದ್ದು ಸರ್ಕಾರ ಮಂಡಿಸಬೇಕೇ ಅಥವಾ ಬೇರೆಯವರು ಮಂಡಿಸಬೇಕೇ ಎನ್ನತಕ್ಕಂಥದ್ದು. ಸರ್ಕಾರ ಈಗಾಗಲೇ ನಿರ್ಣಯ ತೆಗೆದುಕೊಂಡಿರತಕ್ಕಂಥದ್ದು, ಕಾನೂನು ತಜ್ಞರ ಮತ್ತು ನೀರಾವರಿ ತಜ್ಞರ ಅಭಿಪ್ರಾಯದ ಮೇರೆಗೆ ಸಂವಿಧಾನದ 131ನೇ ಕಲಂ ಮತ್ತು 136ನೇ ಕಲಂ ಹಾಗೂ ಈ ತೀರ್ಪಿನ ಸ್ಪಷ್ಟೀಕರಣ ಮತ್ತು ಮಾರ್ಗದರ್ಶನಕ್ಕೆ ಸಂಬಂಧಪಟ್ಟಂತೆ ಅಂತರ್‌ರಾಜ್ಯ ಜಲವಿವಾದ ಕಾಯಿದೆ 5(3) ರ ಕೆಳಗೆ ನಾವು ಅಲ್ಲಿ ವಿವಾದವನ್ನು ತೆಗೆದುಕೊಂಡು ಹೋಗಬೇಕು ಎನ್ನತಕ್ಕಂದ್ದರ ಬಗ್ಗೆ ನಿರ್ಣಯ ಮಾಡಿದ್ದೇವೆ. ಸರ್ಕಾರದ ನಿರ್ಣಯವನ್ನು ಈಗಾಗಲೇ ತಿಳಿಸಿದ್ದೇವೆ. ಕಳೆದ ಹದಿನಾರು ವರ್ಷಗಳಿಂದ ಇಲ್ಲಿಯವರೆಗೆ ಕೂಡ ನಮ್ಮ ವಾದವನ್ನು ಸಮರ್ಥವಾಗಿ ಮಂಡಿಸಿರತಕ್ಕಂತಹ ಕಾನೂನು ತಜ್ಞರು, ಶ್ರೀ ನಾರಿಮನ್‌ರವರ ಅಧ್ಯಕ್ಷತೆಯಲ್ಲಿ ರಚನೆಯಾಗಿರತಕ್ಕಂತಹ ಆ ಒಂದು ಪೇನಲ್‌ನ್ನು ಹಾಗೆಯೇ ಮುಂದುವರೆಸಿಕೊಂಡು ಹೋಗಬೇಕೆಂದು ನಿರ್ಣಯವನ್ನು ಕೂಡ ನಾವು ಮಾಡಿದ್ದೇವೆ. ಇದರ ಮೇಲೆ ಗೊತ್ತುವಳಿ ಆಗಬೇಕು ಎನ್ನತಕ್ಕಂಥದ್ದರ ಬಗ್ಗೆ ತಾವು ಎಲ್ಲ ಸದಸ್ಯರುಗಳು ಒಪ್ಪುವುದಾದರೆ

ನಿಯಮಾವಳಿಗಳನ್ನು ತಾವು ವಿವೇಚನೆ ಮಾಡಿ ತಮಗಿರತಕ್ಕಂತಹ ವಿವೇಚನೆ ಮೇಲೆ ಅದನ್ನು ಮಾಡಬಹುದು. ಅಥವಾ ಇನ್ನು ಸ್ವಲ್ಪ ಕಾಲಾವಕಾಶವನ್ನು ತೆಗೆದುಕೊಂಡು ಅದಕ್ಕೆ ಅವಕಾಶವನ್ನು ಕೊಡಬಹುದು. ಅಥವಾ ಸಮಯವನ್ನು ನಂತರವಾದರೂ ನಿರ್ಧಾರ ಮಾಡಬಹುದು. ಅದು ತಮಗೆ ಬಿಟ್ಟಿರತಕ್ಕಂತಹ ವಿಚಾರ.

ಶ್ರೀ ಜೆ. ಸಿ. ಮಾಧುಸ್ವಾಮಿ: ತಾವೇ decision ತೆಗೆದುಕೊಂಡು introduce ಮಾಡಿಬಿಡಿ ಸರ್. ಬಹಳ ಪ್ರಮುಖವಾದ ವಿಷಯ ಇದೆ. ಇನ್ನು ಯಾವ ಬೇರೆ ವಿಷಯಗಳು ಇಲ್ಲಿ ಚರ್ಚೆಯಾಗುವುದಿಲ್ಲ.

ಅಧ್ಯಕ್ಷರು: ಮಾನ್ಯ ಪ್ರಕಾಶ್‌ರವರೇ, ತಾವು floor leaders ಎಲ್ಲ BAC ಯಲ್ಲಿ ಕುಳಿತು ಚರ್ಚೆ ಮಾಡಿ. ಪ್ರಾಸಂಗಿಕವಾಗಿ ಯಾವ ತರಹ ಇರಬೇಕೆಂಬ ಬಗ್ಗೆ ಮಾತನಾಡಿ ಒಂದು ಸರ್ವಾನುಮತದಿಂದ ನಿರ್ಣಯ ತೆಗೆದುಕೊಳ್ಳುವುದು ಒಳ್ಳೆಯದು.

ಶ್ರೀ ಎಸ್. ಸಿದ್ದರಾಮಯ್ಯ: ನೀವೇ ಮೂವ್ ಮಾಡುತ್ತೀರಾ ಹೇಳಿ.

ಅಧ್ಯಕ್ಷರು: ಅದನ್ನೇ ನಾನು ಸರ್ಕಾರಕ್ಕೆ ಕೇಳುತ್ತಿದ್ದೇನೆ. ಸರ್ಕಾರ ಏನಾದರೂ ಒಂದು ನಿರ್ಧಾರ ತೆಗೆದುಕೊಳ್ಳಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಇದಕ್ಕೆ BAC ಅವಶ್ಯಕತೆ ಇಲ್ಲ. ಸರ್ಕಾರದವರೇ ಮೂವ್ ಮಾಡಲಿ. ಈ ಸಭೆಯಲ್ಲಿ ಯಾರು ಮೂವ್ ಮಾಡುತ್ತಾರೆ ಎನ್ನುವುದು ಪ್ರಶ್ನೆ ಅಲ್ಲ. ನಿರ್ಣಯ ಆಗಬೇಕು.

ಶ್ರೀ ಎಸ್. ಸಿದ್ದರಾಮಯ್ಯ: ನೀವು ನಿಯಮಾವಳಿಗಳನ್ನು ಬದಿಗಿಡಬೇಕಾಗುತ್ತದೆ. ನೀವು ನಿಯಮಾವಳಿಗಳನ್ನು ಕೋಟ್ ಮಾಡಿಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ತಾವು ಈ ಸದನದಲ್ಲಿ ರೂಲ್ಸ್ ಬದಿಗಿಟ್ಟು ನಿರ್ಣಯ ಮಂಡಿಸಬೇಕು. ಬೇಕಾದರೆ ನೀವು ಸದನವನ್ನು 10 ನಿಮಿಷಗಳ ಕಾಲ adjourn ಮಾಡಿ. ಅವರೇ draft ಮಾಡಲಿ. ಇಲ್ಲವೆಂದರೆ ಎಲ್ಲರೂ ಸೇರಿ ಮಾಡೋಣ.

ಅಧ್ಯಕ್ಷರು: ಎಲ್ಲರೂ ಸೇರಿ draft ಮಾಡಿ ಮೂವ್ ಮಾಡುವುದು ಒಳ್ಳೆಯದು.

ಶ್ರೀ ಎಸ್. ಸಿದ್ದರಾಮಯ್ಯ: ಅವರೇ ಮೂವ್ ಮಾಡಲಿ ನಮ್ಮದೇನೂ ತಕರಾರಿಲ್ಲ. ಆದರೆ ಅವರು ರೂಲ್ ಹಿಡಿದುಕೊಂಡು

ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ನೀವು ರೂಲ್ಸ್‌ನ್ನು ಬದಿಗಿಡಬೇಕು. Rules are irrelevant in a matter like this. ಅದನ್ನು ಬದಿಗೊತ್ತಿ ಮಾಡಿಸಿ. You have got all the discretion, all the powers.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ: ನೀವು ಅಷ್ಟು ಮಾಡಿ. ನೀವು K.R. ಪೇಟೆಗೆ ಹೋದಾಗ ಹೋದಾಗ ಜನ ಎಲ್ಲ ನಿಮಗೆ ತೊಂದರೆ ಕೊಡುತ್ತಾರೆ. ಆ ಬರಗಾಲ ಪ್ರದೇಶದವರು ಬಂದು ಒತ್ತಾಯ ಮಾಡಿದರೂ ಕೂಡ ನೀರಾವರಿ ಇರುವವರು ಹೀಗೆ ಮಾಡಿದರು ಎಂದು ನಿಮ್ಮ ಮೇಲೆ ಆರೋಪ ಬರುತ್ತದೆ. ನಿಮ್ಮ drafting ಚೆನ್ನಾಗಿ ಇರುತ್ತದೆ, ನೀವೇ ಮಾಡಿ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಿರತಕ್ಕಂತಹ ಗೊತ್ತುವಳಿಯಲ್ಲಿ ಬಹಳ ಚೆನ್ನಾಗಿ draft ಮಾಡಿದ್ದಾರೆ. ಅದರ ಬಗ್ಗೆ ಯಾರದೇ ಆಕ್ಷೇಪಣೆಗಳು ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಹೋದ ತಿಂಗಳು 5ನೇ ತಾರೀಖು ತೀರ್ಪು ಬಂದಿತು. ಇವತ್ತು 14ನೇ ತಾರೀಖು. ಈ ಸದನದಲ್ಲಿ ಒಂದೇ ಸಮನೆ ಹೇಳುತ್ತಿದ್ದರೂ, ಈ ನಿರ್ಣಯವನ್ನು ಯಾರು ಮಂಡಿಸಬೇಕೆನ್ನುವುದರಲ್ಲಿಯೇ ನಾವು ಇನ್ನು ಚರ್ಚೆ ಮಾಡುತ್ತಿದ್ದೇವೆ.

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರು ಎಲ್ಲಾ ತರಹದ ಚಳುವಳಿಗಳನ್ನು ಮಾಡಿದ ನಂತರ ನಿರ್ಣಯ ಮಾಡೋಣ ಎಂದು ಅವರು.

ಶ್ರೀ ವಾಟಾಳ್ ನಾಗರಾಜ್: ನಾನು ಮತ್ತೊಮ್ಮೆ ತಮ್ಮ ಮೂಲಕ ಹೇಳುತ್ತಿದ್ದೇನೆ. ಈ ನಿರ್ಣಯವನ್ನು ಅಧಿಕೃತವಾಗಿ ಸರ್ಕಾರವೇ ಮಂಡಿಸಲಿ. ನಾವು ಅನುಮೋದಿಸುತ್ತೇವೆ. ಅದನ್ನು ಯಾವ ರೀತಿ ಮಂಡಿಸಬೇಕು, ಏನು ಎನ್ನುವುದರ ಬಗ್ಗೆ ಹೇಳಿ. ನೀವು ಏನೇ ಹೇಳಿ. ನನ್ನ ಸ್ಪಷ್ಟವಾದ ಅಭಿಪ್ರಾಯ `ತಿರಸ್ಕರಿಸಿದ್ದೇವೆ`ಎನ್ನುವ ಪದವನ್ನು ಹಾಕಲೇ ಬೇಕು. "ನ್ಯಾಯ ಮಂಡಲಿಯ ತೀರ್ಪನ್ನು ತಿರಸ್ಕರಿಸಿದ್ದೇವೆ", ಎನ್ನುವುದು ಸ್ಪಷ್ಟ ಮತ್ತು ನೇರವಾಗಿ ಇರಲೇಬೇಕು. ಆದ್ದರಿಂದ ಸರ್ಕಾರವೇ ಮಂಡಿಸಲಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸರ್ಕಾರ ನಿರ್ಣಯ ಮಂಡಿಸಲಿ. ನಂತರ ನಾವು ಏನು ಮಾತನಾಡಬೇಕೋ ಮಾತನಾಡೋಣ. ಸರ್ಕಾರ ನಿರ್ಣಯ ಮಂಡಿಸಲಿ ಎಂದು ಹೇಳಿ ಹೀಗೇ ಮಂಡಿಸಿ ಎಂದು ಹೇಳಿದರೆ ಸರ್ಕಾರದ ನಿರ್ಣಯವಾಗುವುದಿಲ್ಲ. ತಾವು ನಿರ್ಣಯ ಮಂಡಿಸಿ.

ಶ್ರೀ ವಾಟಾಳ್ ನಾಗರಾಜ್: ನಿರ್ಣಯ ಹೀಗೆಯೇ ಇರಬೇಕೆಂದು ನಾವು ಹೇಳಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ: ತಾವು ಏನು ನಿರ್ಣಯ ಮಂಡಿಸುತ್ತೀರೋ ಮಂಡಿಸಿ, ನಂತರ ನಾವು ನಮ್ಮ ಅಭಿಪ್ರಾಯಗಳನ್ನು ಹೇಳುತ್ತೇವೆ. ತಿರಸ್ಕರಿಸುತ್ತೇವೆ ಎನ್ನುವುದು ನಾವು ವೈಯಕ್ತಿಕವಾಗಿ ಒಪ್ಪುವುದಿಲ್ಲ. ನೀವು ಹೇಗೆ ಮಂಡಿಸುತ್ತೀರೋ ಮಂಡಿಸಿ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ನಿರ್ಣಯವನ್ನು ಮಂಡಿಸಿರತಕ್ಕಂಥದ್ದರ ಬಗ್ಗೆ, ಅಥವಾ ಅದರಲ್ಲಿರುವ ಪದಗಳ ಬಗ್ಗೆ ಯಾವುದೇ ತರಹದ ಆಕ್ಷೇಪಣೆ ತೆಗೆಯುವಂಥದ್ದು ಏನೂ ಇಲ್ಲ. ಸರ್ವ ಪಕ್ಷಗಳ ಸಭೆಯಲ್ಲಿ ಹೇಳಿದಂತಹ ವಿಚಾರಗಳನ್ನೇ ಅವರು ಪ್ರಸ್ತಾಪ ಮಾಡಿದ್ದಾರೆ. ಆದರೆ ಅದು ಸರ್ಕಾರ ಮಾಡಬೇಕೇ ಅಥವಾ ತಾವು ಮಾಡಬೇಕೇ ಎನ್ನುವುದರ ಬಗ್ಗೆ ಅಲ್ಲಿ ಚರ್ಚೆ ಆಯಿತು ಎಂದು ತಮ್ಮಲ್ಲಿ ಅನುಸಂಗಿಕವಾಗಿ ಪ್ರಸ್ತಾಪ ಮಾಡಿದೆ. ತಾವು ಕೂಡ ಇದನ್ನು ಜ್ಞಾಪಕ ಮಾಡಿ, ನೀವು ಮಾಡಿದರೆ ಒಳ್ಳೆಯದು ಎನ್ನತಕ್ಕಂಥದ್ದು ಕೂಡ ನಾನು ಎಲ್ಲರ ಜೊತೆ ಮಾತನಾಡಬೇಕಾಗುತ್ತದೆ. ತಮ್ಮ ಜೊತೆಯಲ್ಲಿ ಮಾತನಾಡಿ ಅದನ್ನು draft ಮಾಡಬೇಕಾದ ಅಗತ್ಯ ಏನೂ ಇಲ್ಲವೆಂದು ನಾನು ಅಂದುಕೊಂಡಿದ್ದೇನೆ. ಆದ್ದರಿಂದ ದಯವಿಟ್ಟು ಒಂದು ಅರ್ಧ ಗಂಟೆಯೋ ಒಂದು ಗಂಟೆಯೋ ಸದನವನ್ನು ಮುಂದೂಡಿ, ಚರ್ಚೆ ಮಾಡಿದ ನಂತರ ಮಾಡಿ. ಅಥವಾ ಊಟದ ವಿರಾಮದ ನಂತರವಾದರೂ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಸದನವನ್ನು 10 ನಿಮಿಷಗಳ ಕಾಲ adjourn ಮಾಡಿ ಮತ್ತೆ ಸೇರೋಣ. ಏನಾಗುತ್ತದೆ, the message will go that the Assembly is for that. That is our concern.

ಅಧ್ಯಕ್ಷರು: ಈ ಸದನವನ್ನು 2.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 12.00 ಗಂಟೆ 26 ನಿಮಿಷಕ್ಕೆ ಮುಕ್ತಾಯವಾಗಿ ಪುನ: 2.00 ಗಂಟೆಗೆ ಸೇರುವಂತೆ ನಿರ್ಧರಿಸಿತು.)

(ಮಧ್ಯಾಹ್ನ 3-00 ಗಂಟೆಗೆ ಸದನವು ಸಮಾವೇಶಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದ್ದರು)

ಅಧ್ಯಕ್ಷರು : ಈಗ ಕಾವೇರಿ ಸಮಸ್ಯೆಯ ಬಗ್ಗೆ ಚರ್ಚೆ. ಮಾನ್ಯ ವಿರೋಧ ಪಕ್ಷದ ನಾಯಕರು.

ಶ್ರೀ ಎನ್.ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ರಾಜ್ಯದ ಅತೀ ಮುಖ್ಯವಾದ ನದಿ ಕಾವೇರಿ. ಕಾವೇರಿ ತೀರ್ಪು ಬಂದ ನಂತರ ಕರ್ನಾಟಕ ರಾಜ್ಯದಲ್ಲಿ 38 ದಿವಸಗಳ ಕಾಲ ಸಾಕಷ್ಟು ಪ್ರತಿಭಟನೆಗಳಾಗಿವೆ. ಈ ನಾಡಿನ ಜನತೆ ಕೂಡ ಮೊಟ್ಟಮೊದಲಿಗೆ ಒಕ್ಕೊರಲಿನಿಂದ ಕಾವೇರಿ ಜಲಾನಯನ ಪ್ರದೇಶಗಳಲ್ಲಿರತಕ್ಕಂಥ ಜನರಿಗೆ ತೀರ್ಪಿನಿಂದ ಏನು ತೊಂದರೆಯಾಗಿದೆ, ಅದರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ. ನಮ್ಮ ಹಿರಿಯ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಕೂಡ ಮೈಸೂರು ಜಿಲ್ಲೆಗೆ ಸಂಬಂಧಪಟ್ಟವರು. ತಾವು ಕೂಡ ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟವರು. ಆ ಭಾಗದಲ್ಲಿರತಕ್ಕಂಥ ಜನರ ಅಳಲು ಏನು ಇದೆ, ಅದರ ಬಗ್ಗೆ ಈ ನಾಡಿನ ರೈತರು ಸಾಕಷ್ಟು ಹೋರಾಟಗಳನ್ನು ಮಾಡಿದ್ದಾರೆ. ವಿಶೇಷವಾಗಿ, ಈ ತೀರ್ಪು ಮರಣಶಾಸನ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಈಗ ಲೋಕಸಭೆ ನಡೆಯುತ್ತಿದೆ. ಅಲ್ಲಿಯೂ ಕೂಡ ಎಲ್ಲಾ ಪಕ್ಷಕ್ಕೆ ಸೇರಿದಂಥ ಸಂಸದರು ಇದಕ್ಕೆ ಯಾವ ರೀತಿ ಪರಿಹಾರ ಕಂಡುಹಿಡಿಯಬೇಕೆಂದು ಮಾತನಾಡಿದ್ದಾರೆ. ನಿನ್ನೆಯೂ ಕೂಡ ಕರ್ನಾಟಕಕ್ಕೆ ಸೇರಿದ ಸಂಸದರು ಮಾನ್ಯ ಪ್ರಧಾನ ಮಂತ್ರಿಗಳಿಗೆ ಮನವಿ ಮಾಡಿಕೊಂಡಿದ್ದಾರೆ. ಒಂದು ಸಂತೋಷದ ವಿಷಯ ಏನೆಂದರೆ, ತೀರ್ಪು ಬಂದ ಮರುದಿವಸ ನೀರಾವರಿ ಇಲಾಖೆಗೆ ಸಂಬಂಧಪಟ್ಟಂತಹ ಕೇಂದ್ರದ ಮಾನ್ಯ ಮಂತ್ರಿಗಳಾದ ಸೋಜ್‌ರವರು ಮದ್ರಾಸ್‌ನಲ್ಲಿದ್ದರು. ಅಲ್ಲಿ ಅವರು ಏನು ಹೇಳಿದರು ಎಂದರೆ, ಇನ್ನು ಒಂದು ವರ್ಷಗಳ ಕಾಲ ನಾವು ಇದರ ಬಗ್ಗೆ Gazette Notification ಮಾಡುವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. This is an emotional issue. 1892, 1924 ರಿಂದ ಮತ್ತು ಸತತವಾಗಿ ನೂರಾರು ವರ್ಷಗಳಿಂದ ಕಾವೇರಿ ನೀರಿನ ಬಗ್ಗೆ ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳ ನಡುವೆ ಏನು ವಿವಾದ ಇದೆ, ಇದರ ಬಗ್ಗೆ ನಮಗೆ ನ್ಯಾಯಬೇಕೆಂದು ಪ್ರತಿಪಾದನೆ ಮಾಡಿದ್ದೇವೆ. ಎಲ್ಲಾ ಹಂತದಲ್ಲೂ ಕೂಡ ನಾವು ಚರ್ಚೆ ಮಾಡಿದ್ದೇವೆ. ಒಂದು ಮಾತು ಹೇಳುವುದಾದರೆ, ನಾನು ಮುಖ್ಯಮಂತ್ರಿಯಾಗಿದ್ದಾಗ ಒಂದು ದಿನ ಪ್ರಧಾನ ಮಂತ್ರಿಗಳು ಫೋನು

ಮಾಡಿದರು. ಅವತ್ತು ತಮಿಳು ನಾಡಿಗೆ ನೀರು ಬಿಡಬೇಕಾಗಿತ್ತು. ಆ ದಿವಸ ನಾನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಸಿದ್ದರಾಮಯ್ಯನವರು ಹಾಗೂ ತಾವು ಕೂಡ ಇದ್ದೀರಿ. ಏನು ಮಾಡಬೇಕೆಂದು ಯೋಚಿಸುತ್ತಿರುವಂಥ ಸಂದರ್ಭದಲ್ಲಿ ಆ ದಿವಸ ಮಳೆ ಬಂತು, ವರುಣನ ಕೃಪೆಯಿಂದ ನಾವು ನೀರು ಬಿಡಲಾರದೇ ಹೋದರೂ ಕೂಡ ಕಬಿನಿಯಿಂದ ಹಾಗೂ ಕೆಆರ್‌ಎಸ್ ನಿಂದ ಸಾಕಷ್ಟು ನೀರು ಹರಿದು ಹೋಯಿತು. ಆದು ಒಂದು ಸಂದರ್ಭದಲ್ಲಿ ಆಗತಕ್ಕಂಥ ವಿಷಯ. ಆಗ ಯಾವ ತರಹದ ಅಹಿತಕರವಾದ ಘಟನೆ ನಡೆದಿಲ್ಲ. ಇವತ್ತು ಏನಾಗಿದೆ, ಮೊನ್ನೆ ನಾನು ಬೇರೆ ಕಾರ್ಯಕ್ರಮ ನಿಮಿತ್ತ ಮದ್ರಾಸ್‌ಗೆ ಹೋಗಿದ್ದೆ. ಆ ಸಂದರ್ಭದಲ್ಲಿ, ತಾವು ವಿರೋಧ ಪಕ್ಷದ ನಾಯಕರಿದ್ದೀರಿ, ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ, ಇದರ ಬಗ್ಗೆ ನಿಮ್ಮ ಅಭಿಪ್ರಾಯ ಏನೆಂದು ಕೇಳಿದಾಗ ನಾನು ಏನು ಹೇಳಿದೆ, "ಅದು verdict ಏನು ಇದೆ, it is against the wishes of the people of the State. In this issue we are one." ಏಕೆಂದರೆ, ಇದರಲ್ಲಿ ನಾವೆಂದು ರಾಜಕಾರಣ ಮಾಡತಕ್ಕಂಥದ್ದು ಕಲಿತಿಲ್ಲ. ಹೀಗಾಗಿ ರಾಜಕಾರಣ ಮಾಡುವುದಕ್ಕೆ ಹೋಗುವುದಿಲ್ಲವೆಂದು ಹೇಳಿದೆ. ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ಹೇಳುತ್ತಿದ್ದೇನೆ. ನಿಮಗೆ ಎಲ್ಲಾ ರಾಜಕೀಯ ಪಕ್ಷಗಳ, ಸಂಘ ಸಂಸ್ಥೆಗಳ, ಕನ್ನಡ ನಾಡಿನ ಬಗ್ಗೆ ಗೌರವವಿರುವ ಸಂಘಟನೆಗಳು ಏನು ಇವೆ ಆ ಎಲ್ಲಾ ಸಂಘಟನೆಗಳು ಜೊತೆಗೆ ಮಾನ್ಯ ವಾಟಾಳ್ ನಾಗರಾಜ್ ರವರು ದೆಹಲಿಗೆ ಹೋಗಿ ಅಲ್ಲಿಯೂ ಕೂಡ ಕರ್ನಾಟಕದ ಕೂಗನ್ನು ತಲುಪಿಸತಕ್ಕಂಥ ಕೆಲಸವನ್ನು ಮಾಡಿ ಬಂದಿದ್ದಾರೆ. ಬಹಳಷ್ಟು ವೇದಿಕೆಗಳು ಕೂಡ ದೆಹಲಿಗೆ ಹೋಗುತ್ತಿವೆ. ನನಗೆ ಅನ್ನಿಸುತ್ತಿದೆ, ಕಾವೇರಿ ಸಮಸ್ಯೆ ಬಗ್ಗೆ ಮೊಟ್ಟಮೊದಲಬಾರಿಗೆ ರಾಷ್ಟ್ರಮಟ್ಟದಲ್ಲಿ ಅನ್ಯಾಯವಾಗಿದೆ ಎನ್ನತಕ್ಕಂಥ ಒಂದು ಅನಿಸಿಕೆ ಎಲ್ಲರ ಬಾಯಲ್ಲಿ ಬರುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಸಾರಿ ಪೂರ್ವಭಾವಿಯಾಗಿ ಒಂದು ಸಭೆಯನ್ನು ಕರೆಸಿದ್ದರು. "ತೀರ್ಪು ಬರುವುದಕ್ಕೆ ಎರಡು ದಿವಸ ಇದೆ ಈಗಲೇ ಏಕೆ ಕರೆಸುತ್ತಿದ್ದೀರಿ, ತಮಗೆ ಏನಾದರೂ ಸುಳಿವು ಸಿಕ್ಕಿದೆಯೇ" ಎಂದು ಕೇಳಿದೆವು. ಈಗ ಅವರು ಮುಖ್ಯಮಂತ್ರಿಗಳು ಇದ್ದಾರೆ. We are all public representatives. ಜನಾಭಿಪ್ರಾಯವನ್ನು ಯಾವಾಗಲೂ ಕೂಡ ಬಹಳ

ಪ್ರಾಮಾಣೀಕತೆಯಿಂದ ಸ್ಪಷ್ಟತೆಯಿಂದ ಮಾಡಬೇಕಾಗುತ್ತದೆ. ಇಲ್ಲಾ, we are anticipating the situation, ಏನಾಗುತ್ತದೆ ನೋಡೋಣ" ಎಂದರು. ತೀರ್ಪು ಬಂದ ನಂತರ ಸಭೆಯಾಯಿತು. ಅಗಲೂ ಕೂಡ ನಾವು ಆ ತೀರ್ಪಿನ ಪ್ರತಿಯನ್ನು ನಮಗೆ ಕೊಡಬೇಕು ಯಾವ್ಯಾವ ಹಂತದಲ್ಲಿ ಏನೇನು ಆಗಿದೆ ಎಂದು ಕೇಳಿದ್ದಕ್ಕೆ ಅವರು ಕೂಡ ಎಲ್ಲಾ, ರಾಜ್ಯದ ವಿರೋಧ ಪಕ್ಷದ ನಾಯಕರುಗಳಿಗೆ ಮತ್ತು ಸದಸ್ಯರುಗಳಿಗೆ, ವಿಶೇಷವಾಗಿ ಕಾವೇರಿ ಜಲಾನಯನ ಪ್ರದೇಶದ ಜನರಿಗೆ ಕೂಡ ತೀರ್ಪಿನ ಪ್ರತಿಗಳನ್ನು ಕೊಟ್ಟಿದ್ದಾರೆ. ಮತ್ತೊಂದು ಸಭೆಯಾಯಿತು. ಅ ಸಭೆಯಲ್ಲೂ ಕೂಡ ನ್ಯಾಯಂಗದವರು ಅಂದರೆ, ಜವಳಿಯವರು ಇದ್ದಾರೆ, ಕಾತರಕಿ ಯವರು ಇದ್ದಾರೆ, ನಾರಿಮನ್ ರವರು ಇದ್ದಾರೆ, ನಮ್ಮ Advocate General ರವರು ಕೂಡ ಇದ್ದಾರೆ, ಒಂದು ಅಭಿಪ್ರಾಯ ಬರುವ ರೀತಿಯಲ್ಲಿ ಮಾತನಾಡಿದ್ದಾರೆ. ಈಗಾಗಲೇ ಒಂದು ಸಭೆಯಾಗಿದೆ. ಅದರ ಬಗ್ಗೆ ನಾನು ಇವತ್ತಿನ ದಿವಸ ಕಾಮೆಂಟ್ ಮಾಡಲಿಕ್ಕೆ ಹೋಗುವುದಿಲ್ಲ. ಇದರ ಆಗು–ಹೋಗುಗಳ ಬಗ್ಗೆ ನಮ್ಮ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. You are the Chief Minister of this State. You are answerable to the people of Karnataka State not the bureancrats. ಅದಕ್ಕೆ, ಅಧಿಕಾರಿಗಳು ಏಕೆ ಈ ರೀತಿಯ ಅಭಿಪ್ರಾಯ ವ್ಯಕ್ತ ಮಾಡುತ್ತಿದ್ದಾರೆ, ಎಂದು ನಾವು ಹೇಳಿದ್ದೇವೆ. ಅದನ್ನು ತಾವು ಮೊದಲು ಹೇಳಬೇಕಾಗಿತ್ತು. ಅದರೆ ಅವರು ತಮಗಿಂತಲೂ ಮೊದಲೇ ಹೇಳಿದ್ದಾರೆ, ಅವರು ಕೂಡ ವಕೀಲರು ಹೇಳಿರಬಹುದೆಂದು ಹೇಳಿದರು. ನಾರಿಮನ್ ರವರು ಒಬ್ಬ international level ನಲ್ಲಿ ಕೆಲಸ ಮಾಡತಕ್ಕಂಥವರು, ಅವರ ಬಗ್ಗೆ ನಮಗೆ ಗೌರವ ಇದೆ. ನಾವು ಕೂಡ ಗಾಂಧಿ ಫೌಂಡೇಷನ್ ನಲ್ಲಾಗಲಿ, ಕಾವೇರಿಯಲ್ಲಾಗಿರುವಂಥ ವಿಷಯಗಳಲ್ಲೇ ಆಗಲಿ, ನಾನು ಅವರನ್ನು ಭೇಟಿಯಾದಾಗ ಅವರು ಸ್ವಲ್ಪ ಸಂತೋಷದಲ್ಲಿದ್ದರು, ಆದರೂ ಕೂಡ I persuaded Nariman, ನೀವು ಇಲ್ಲಿಯವರೆಗೆ ಕರ್ನಾಟಕದ ಬಗ್ಗೆ ವಾದ ಮಾಡಿದ್ದೀರಿ ಎಂದು ಹೇಳಿದೆವು. He is very prominent. ಅದರ ಬಗ್ಗೆ ನನ್ನದು ಏನು ಕಾಮೆಂಟ್ ಇಲ್ಲ. ನನ್ನ ಕಾಮೆಂಟ್ ಏನು ಎಂದರೆ, ಶಾಸನ ಸಭೆ ನಡೆಯತಕ್ಕಂಥ ಕಾಲದಲ್ಲಿ ಇವತ್ತು ಏನೇನು ಅನ್ಯಾಯವಾಗುತ್ತಿದೆನ್ನುವ ಬಗ್ಗೆ ನಾವು ಹೇಳುವುದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳು ಕೂಡ ನಮ್ಮ ರಾಜ್ಯದ ಐದು ಕೋಟಿ ನಲವತ್ತೆಂಟು ಲಕ್ಷ ಜನರ

ಪ್ರತಿನಿಧಿಗಳಾಗಿದ್ದಾರೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಇದು ಮರಣಶಾಸನವಾಗಿದೆ ಎನ್ನುವ ರೀತಿಯಲ್ಲಿ ಅಲ್ಲಿ ಏನು ಪ್ರತಿಭಟನೆಗಳು ನಡೆಯುತ್ತಿವೆ, ಅದು ಬಹಳ ದೊಡ್ಡ ವಿಷಯ. ಇದರಿಂದಾಗಿ ರೈತರಿಗೆ ಬಹಳ ತೊಂದರೆಯಾಗುತ್ತದೆ. ಇದೇ ರೀತಿಯಾದರೆ ರೈತರು ತಮ್ಮ ಜೀವನವನ್ನು ಹೇಗೆ ಸಾಗಿಸಬೇಕೆಂದು ಅವರು ಯೋಚಿಸುತ್ತಿದ್ದಾರೆ. ವಕೀಲರುಗಳು ಕೂಡ ಬೇರೆ ಕಡೆಗೆ ಅದರ ಬಗ್ಗೆ ಅಭಿಪ್ರಾಯ ವ್ಯಕ್ತ ಮಾಡಬಹುದು ಎನ್ನುವ ರೀತಿಯಲ್ಲಿ ಚರ್ಚೆ ಆಯಿತು. ಆಗ ತಾವು ಹೇಳಿದಿರಿ, ಇದು ನಮ್ಮ ರಾಜ್ಯದ ಅಭಿಪ್ರಾಯವಲ್ಲ, ನಮ್ಮ ಸರಕಾರದ ಅಭಿಪ್ರಾಯ ಅಲ್ಲವೆಂದು ಹೇಳಿದ್ದಕ್ಕೆ ನಾವು ಕೂಡ ಆ ವಿಚಾರ ಅಷ್ಟಕ್ಕೆ ಬಿಟ್ಟಿದ್ದೇವೆ. ಆದರೆ ಅವರೆಲ್ಲರಿಗೂ ಕೂಡ ತಿಳಿಯಬೇಕು. ಬೇಕಾದಷ್ಟು ಕಾನೂನು ಪಂಡಿತರು ಇದ್ದರೂ ಕೂಡ democratic setup ನಲ್ಲಿ ಪ್ರಜಾಭುತ್ವದಲ್ಲಿ ಪ್ರಜಾಪ್ರತಿನಿಧಿಗಳ ಅನಿಸಿಕೆ ಏನು ಇದೆ, ನಾವೆಲ್ಲರೂ ಸುಮ್ಮನೆ ಪ್ರಸ್ತಾಪ ಮಾಡಲಿಕ್ಕೆ ನಿಂತಿಲ್ಲ. ನಾವು ಯಾವಾಗಲೂ ಕೂಡ ಗಲಾಟೆಯ ಮೂಲಕ ಏನಾದರೂ ಸಾಧಿಸಬಹುದು ಎನ್ನುವುದರ ಬಗ್ಗೆ ಕೂಡ ನಮಗೆ ವಿಶ್ವಾಸವಿಲ್ಲ. ಎಲ್ಲಿ ನಮಗೆ ಮೂಲಭೂತವಾಗಿ ತೊಂದರೆ ಬರುತ್ತದೆ ಎಲ್ಲಿ ನಮ್ಮ ರಕ್ಷಣೆಗೆ ಬರುವುದಿಲ್ಲ ಅಲ್ಲಿ ನಾವು ವಿರೋಧ ಮಾಡುತ್ತೇವೆ. ನಿನ್ನೆ ಲೋಕಸಭೆಯಲ್ಲಿ ಏನಾಯಿತು? ನಿನ್ನೆ ಲೋಕಸಭೆಯಲ್ಲಿ ಯುಪಿಎ ದಲ್ಲಿ ಬೆಂಗಾಲ್ ಮತ್ತು ಡಿಎಂಕೆ ಯವರು ಯಾವ ರೀತಿಯಾಗಿ ವರ್ತಿಸಿದರು ಎಂಬುದು ಇದೆ. ಅವರು ವರ್ತಿಸಿದ ರೀತಿಯಲ್ಲಿ They are all the stalwarts. ಪಶ್ಚಿಮ ಬಂಗಾಳದಿಂದ ಬಂದಂಥ ಸಾಕಷ್ಟು ಜನರು ಆ ರಾಜ್ಯಕ್ಕೆ ಮನ:ಪೂರ್ವಕವಾಗಿ ಕೆಲಸ ಮಾಡಿದ್ದಾರೆ. ಡಿಎಂಕೆ ಯವರು ಕೂಡ ಕೆಲಸ ಮಾಡಿದ್ದಾರೆ. ಅದರೆ ಯಾವಾಗ ಅವರ ಭಾವನೆಗಳಿಗೆ ವಿರುದ್ಧವಾಗುತ್ತದೆ ಆಗ that will force them to take a decision ಇವೆಲ್ಲಾ ಅಗುತ್ತದೆ. ಏನೋ ಬಂದೆವು ನಿಮಗೆಲ್ಲ ಮಾಡಿದೆವು ಎನ್ನುವ ರೀತಿಯಲ್ಲಿ ಸದನದಲ್ಲಿ ಪ್ರಸ್ತಾಪವಾಗುತ್ತದೆ, ಇಂಥ ಘಟನೆಗಳು ಹಿಂದೆ ಯಾವ ರೀತಿಯಾಗಿದೆ ಅದನ್ನು ಕೂಡ ನಾವು ಹೇಳಿದ್ದೇವೆ. ಈ ದಿನ ನಮಗೆ ಏನಾಗಿದೆ, ವಿಶೇಷ ಆಧಿವೇಶನ. 16ನೇ ತಾರೀಖು ಬಜೆಟ್ ಮಂಡನೆ. ಈಗಾಗಲೇ ಮಾನ್ಯ ಯಡಿಯೂರಪ್ಪನವರು ಪ್ರಿಂಟ್ ಮಾಡಿ ಆ ಪ್ರತಿಗಳನ್ನು ಯಾವಾಗ ಕೊಡಬೇಕೆಂದು ಬಹಳ ಆತುರದಲ್ಲಿದ್ದಾರೆ. ಅವರು ಬರುತ್ತಾರೆ ಹೋಗುತ್ತಾರೆ. ಅವರು ಬರಲಿ 16ನೇ

ತಾರೀಕು ಕೊಡಲಿ. 16ನೇ ತಾರೀಕು ಬಜೆಟ್ ಮಂಡಣೆಯಾದ ಮೇಲೆ, ರಾಜ್ಯದ ಜನತೆಗೆ ಎಷ್ಟು ಕೊಡುತ್ತಾರೆ, ಹೇಗೆ ಅದು ಆಗುತ್ತದೆ ಎನ್ನತಕ್ಕಂಥದ್ದರ, ಬಗ್ಗೆ ನಂತರ ವಿಚಾರ ಮಾಡೋಣ. ಇವತ್ತು ಎರಡು ದಿವಸಗಳ ಕಾಲ ವಿಶೇಷ ಅಧಿವೇಶನ ಕರೆದು, ತಾವು ಬಿಲ್‌ಗಳನ್ನು ಮಂಡಿಸಿ ಅದರ ಮೇಲೆ ಚರ್ಚೆ ಮಾಡತಕ್ಕಂಥದ್ದು ಸರಿಯಲ್ಲ. ಅದಕ್ಕಾಗಿ ಸಂಸದೀಯ ವ್ಯವಹಾರಗಳ ಮಂತ್ರಿಗಳು ಇದ್ದಾರೆ, ನಾವು ಮತ್ತು ಮಾನ್ಯ ಸಿದ್ದರಾಮಯ್ಯನವರು ನಮ್ಮ ಎಲ್ಲಾ ನಾಯಕರುಗಳು ಹೇಳಿದ ಮೇಲೆ ಇವತ್ತು ತಾವು ಸಭೆಯನ್ನು ಕರೆದಿದ್ದೀರಿ, ಸಭೆಯನ್ನು ಕರೆದು ಬಿಲ್ಲುಗಳನ್ನು ತೆಗೆದುಕೊಳ್ಳುವ ಮೊದಲು ಕಾವೇರಿಯ ಬಗ್ಗೆ ಚರ್ಚೆಯಾಗಬೇಕು, ಇದರ ಬಗ್ಗೆ ಒಂದು ತೀರ್ಮಾನವಾಗಬೇಕು. ನರಸಿಂಹರಾವ್‌ರವರು ಭಾರತದ ಪ್ರಧಾನ ಮಂತ್ರಿಗಳಾಗಿದ್ದರು. ಮಾನ್ಯ ಬಂಗಾರಪ್ಪನವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಆಗ ನಾನು ಗೃಹಸಚಿವನಾಗಿದ್ದೆ, ನಮ್ಮ ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಗೊತ್ತಿರಬಹುದು, ಅಂತಹ ದಿವಸಗಳನ್ನು ಅವರು ಜೀವನದಲ್ಲಿ ನೋಡುವುದಕ್ಕಾಗುವುದಿಲ್ಲ. ಇವತ್ತು ಎಲ್ಲರೂ ಒಗ್ಗಟ್ಟಾಗಿ, ಇವತ್ತು ತಮಿಳುನಾಡಿನಲ್ಲಿ ಯಾವ ತರಹ ಪ್ರತಿಭಟನೆಗಳು, ಅಕ್ರೋಶ, ಭಾವನೆಗಳನ್ನು ಯಾವ ರೀತಿಯಾಗಿ ವ್ಯಕ್ತ ಮಾಡುತ್ತಿದ್ದಾರೆ, ಅದೇ ಪ್ರಕಾರವಾಗಿ ಮೊಟ್ಟಮೊದಲನೆಯದಾಗಿ ಆ ಕಾಲದಲ್ಲಿ ನಾವು ಮಾಡಿದ್ದೆವು. ಅಗ ಪ್ರಧಾನ ಮಂತ್ರಿಗಳಾದ ನರಸಿಂಹರಾವ್‌ರವರಿಗೆ ಹೇಳಿದ್ದೆವು, ರಾಜ್ಯದ ಮೇಲೆ ಇವತ್ತು ಅನ್ಯಾಯವಾದಂತಹ ಸಮಯದಲ್ಲಿ ನಾವು ಸುಮ್ಮನೆ ಕೂರುವುದಿಲ್ಲವೆನ್ನುವಂತಹ ಮಾತನ್ನು ಹೇಳಬೇಕಾಗುತ್ತದೆ. ಮಾನ್ಯ ದೇವೇಗೌಡರು ಈ ದೇಶದ ಪ್ರಧಾನಮಂತ್ರಿಗಳು ಹಾಗೂ ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಇವರು ಮುಖ್ಯಮಂತ್ರಿಗಳಾಗಿದ್ದಾಗ ನರಸಿಂಹರಾವ್‌ರವರು ಪ್ರಧಾನಮಂತ್ರಿಗಳಾಗಿದ್ದರು. ಆಗಲೂ ಕೂಡ ನೀರು ಬಿಡುವ ರೀತಿಯಲ್ಲಿ, ಆಗ ಸದನವು ನಡೆಯುತ್ತಿತ್ತು. ಸದನವು ನಡೆಯುವಂತಹ ಕಾಲದಲ್ಲಿ ಇವತ್ತು ನಾವು ನೀರನ್ನು ಬಿಡಬೇಕಾಗಿದೆ, ನೀರನ್ನು ಬಿಟ್ಟಿದ್ದೇವೆಂಬ ಮಾತನ್ನು ಹೇಳಿದರು. ಇದು ಬಹಳಷ್ಟು ವರ್ಷಗಳ ಘಟನೆಗಳನ್ನು ಉದ್ದರಿಸಿ ಹೇಳಿದರೆ ಅದು ಬಹಳಷ್ಟಾಗುತ್ತದೆ. ಇವತ್ತಿನ ತೀರ್ಪಿನಿಂದ ನಮಗೆ ಬಹಳ ಅನ್ಯಾಯವಾಗಿದೆ. ಅನ್ಯಾಯವಾಗುವಂತಹ ತೀರ್ಪಿಗೆ ಸಾರ್ವಜನಿಕವಾಗಿ ಹೊರಗಡೆ ಪ್ರತಿಭಟನೆಯು ನಡೆಯುತ್ತಿರುವುದು. ಇವತ್ತು ಸಂಘ ಸಂಸ್ಥೆಗಳು ಪ್ರತಿಭಟನೆಯನ್ನು ಮಾಡುತ್ತಿರುವುದು, ಅಖಿಲ

ಕರ್ನಾಟಕ ರಕ್ಷಣಾವೇದಿಕೆಯವರು ಮಾಡುತ್ತಿರುವುದು, ಅದು ಬೇರೆಯಾಗಿದೆ. ಈ ಸದನ, ಈ ರಾಜ್ಯದ ಜನರ ಪ್ರತಿನಿಧಿಗಳ ಸಭೆಯಾಗಿದೆ. ಈ ಸದನದಲ್ಲಿ ಇವತ್ತಿನ ದಿವಸ ನಮ್ಮ ಅಭಿಪ್ರಾಯಗಳು ಏನಿದೆ, ನಮಗೆ ಅನ್ಯಾಯವಾಗಿದೆ ಎಂಬ ರೀತಿಯಲ್ಲಿ ಇವತ್ತಿನ ದಿವಸ ನಾವು ಒಂದು ರೆಸ್ಯೂಲ್ಯೂಷನ್ ಆಗಲಿ, ಇದರ ಬಗ್ಗೆ ಅಭಿಪ್ರಾಯಗಳನ್ನು ಸಂಗ್ರಹಿಸಿ ಯಾವ ತರಹವಾಗಿ, ಕೊನೆಯದಾಗಿ ಒಂದು ರೆಸ್ಯೂಲ್ಯೂಷನ್ ಆಗಬೇಕು ಎಂದು ತೀರ್ಮಾನಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಕೂಡ ಸದನದಲ್ಲಿದ್ದಾರೆ, ನಮ್ಮ ಮಾನ್ಯ ಎಂ.ಪಿ.ಪ್ರಕಾಶ್‌ರವರು ಸಂಸದೀಯ ಪಟುಗಳು ಹಾಗೂ ಹಿರಿಯರಾಗಿದ್ದಾರೆ, ಇದು ತಮ್ಮ ಅಧ್ಯಕ್ಷತೆಯಲ್ಲಿ ಆಗಬೇಕು. ಏಕೆ ತಮ್ಮ ಅಧ್ಯಕ್ಷತೆಯಲ್ಲಿ ಆಗಬೇಕೆಂದರೆ, ತಾವು ಆ ಭಾಗದಿಂದ ಆರಿಸಿ ಬಂದಿದ್ದೀರಿ. ಇವತ್ತು ಯಾವ ಭಾಗದಲ್ಲಿ ಉರಿಯುತ್ತಿದೆ, ಯಾವ ಭಾಗದಲ್ಲಿ ಮಾನ್ಯ ಮಾದೇಗೌಡರ ನೇತೃತ್ವದಲ್ಲಿ ಚಡ್ಡಿ ಚಳುವಳಿಯು ಕೂಡ ಆಯಿತು. ಇವೆಲ್ಲವನ್ನು ಕೂಡ ನಾವು ಮಾಜಿ ಮುಖ್ಯಮಂತಿಗಳಾದ ಶ್ರೀ ದೇವರಾಜ ಅರಸರ ಕಾಲದಿಂದಲೂ ಕೂಡ ನಾವು ನೋಡಿಕೊಂಡು ಬಂದಿದ್ದೇವೆ. ಆ ಒಂದು ಭಾಗದಿಂದ ರೈತರಿಗೆ ಏನು ಅನ್ಯಾಯವಾಗಿದೆ, ತಾವು ಆ ಭಾಗದಿಂದ ಬಂದವರಾಗಿದ್ದು ಇವತ್ತು ಅಧ್ಯಕ್ಷ ಪೀಠದಲ್ಲಿ ಕುಳಿತಿದ್ದೀರಿ. ತಾವು ಈ ಸದನದ ಅಧ್ಯಕ್ಷರಾಗಿದ್ದೀರಿ. ಅದಕ್ಕಾಗಿ ಇವತ್ತಿನ ದಿವಸ ಐತಿಹಾಸಿಕವಾದಂತಹ ನಿರ್ಣಯ ಆಗಬೇಕು, ಸರ್ವಪಕ್ಷಗಳ ಸಭೆಯಲ್ಲಿ Irrigation expert opinionಯನ್ನು ತೆಗೆದುಕೊಳ್ಳಬೇಕು. Legal expert opinionನ್ನು ಸಹ ತೆಗೆದುಕೊಳ್ಳಬೇಕು. ಅವರ ಮಾದರಿಯಲ್ಲಿ ಮಾಡಬೇಕೆಂದು ಅವತ್ತು ನಾವು ಎಲ್ಲಾ ಮತಬೇಧಗಳನ್ನು ಮರೆತು ಅಭಿಪ್ರಾಯ ವ್ಯಕ್ತಮಾಡಿದ್ದೇವೆ. ಇವತ್ತಿನ ದಿವಸ ನಮ್ಮ ಮಾನ್ಯ ಎಂ.ಪಿ.ಪ್ರಕಾಶ್ ರವರಿಗೆ ಗೊತ್ತು, ಅವರು ಮತ್ತು ಮುಖ್ಯಮಂತ್ರಿಗಳು ನಾವು ಒಂದಾಗಿ ಇವತ್ತು ನಿರ್ಣಯವನ್ನು ಮಾಡಬೇಕು. ರಾಜ್ಯದ ಮುಖ್ಯಮಂತಿಗಳ ಈ ಒಂದು ವಿಷಯದಲ್ಲಿ ಕೈಬಲಪಡಿಸಬೇಕೆಂಬು ಸರ್ವಪಕ್ಷಗಳ ಸಭೆಯಲ್ಲಿ ತೀರ್ಮಾನವಾಗಿದೆ. ಅದರಲ್ಲಿಯೂ ಕೂಡ ಈ ಮಾತು ಬಂತು, ಸದನದಲ್ಲಿ ಏಕೆ ಚರ್ಚೆಯನ್ನು ಮಾಡಲಿಲ್ಲ, ಸದನದಲ್ಲಿ ಈ ಮಾತುಗಳನ್ನು ಏತಕ್ಕಾಗಿ ಎತ್ತಲಿಲ್ಲ. ಸದನದಲ್ಲಿ ಇವತ್ತು ಒಂದಾಗಿ ನೀವು ಕಾವೇರಿಯ ಬಗ್ಗೆ ಅನ್ಯಾಯವಾಗಿದೆ ಎಂಬುದು, ಇವತ್ತು ಪ್ರಧಾನ ಮಂತ್ರಿಗಳಿಗೆ ತಿಳಿಸುವಂತಹ ರೀತಿಯಲ್ಲಿ This is the resolution of our House. We have

discussed this matter in length. I have taken all the leaders and other parties into confidence ಎನ್ನುವುದನ್ನು ಹೇಳುವುದಕ್ಕೆ ನಿಮಗೆ ಒಂದು ಶಕ್ತಿ ಬರುತ್ತದೆ. ಶಕ್ತಿ ಬರುವಂತಹ ರೀತಿಯಲ್ಲಿ ಇದು ಬಹಳ ಜಟಿಲವಾದಂತಹ ಪ್ರಶ್ನೆಯಾಗಿದೆ. ನಾಳೆ ಇದು ಆಗುತ್ತದೆಂದು ಹೇಳುವುದಕ್ಕಾಗುವುದಿಲ್ಲ, ಇವತ್ತು ಜನಾಭಿಪ್ರಾಯಗಳು ಪ್ರಜಾಪ್ರಭುತ್ವದಲ್ಲಿ ಬಹಳ ಮುಖ್ಯವಾದುದು. ಈ ಒಂದು ರೆಸ್ಯೂಲ್ಯೂಷನನ್ನು ನಾವು ಮೂವ್ ಮಾಡಿದ್ದೇವೆ. ಇದರ ಬಗ್ಗೆ ಚರ್ಚೆಯಾಗುತ್ತದೆ. ಇದರ ಬಗ್ಗೆ ಸಾಕಷ್ಟು ನಮ್ಮ ಹಿರಿಯ ಸದಸ್ಯರುಗಳು ಕೂಡ ಇದರ ಬಗ್ಗೆ ಪ್ರಸ್ತಾಪಮಾಡುತ್ತಾರೆ. ಕೊನೆಯದಾಗಿ ಒಂದು ತರಹದ ಅಭಿಪ್ರಾಯವನ್ನು ಮೂಡಿಸಿ ನಿರ್ಣಯವನ್ನು ಮಾಡಲೇಬೇಕು. ಇದೊಂದು ಐತಿಹಾಸಿಕವಾದಂತಹ ನಿರ್ಣಯ, ಕಾವೇರಿ ತೀರ್ಪು ನಮ್ಮ ಕರ್ನಾಟಕ ಜನತೆಗೆ ಇವತ್ತಿನ ದಿವಸ ಧಕ್ಕೆಯನ್ನು ಕೊಟ್ಟಿದೆ. ಇದು ಆರ್ಥಿಕವಾದಂತಹ ಪರಿಸ್ಥಿತಿ, ರೈತರ ಸಮಸ್ಯೆ, ಜನರ ಸಮಸ್ಯೆ, ಕುಡಿಯುವ ನೀರಿನ ಸಮಸ್ಯೆ. 1940ರಲ್ಲಿ ಬೆಂಗಳೂರು population 3 ಲಕ್ಷ ಇತ್ತು ಇವತ್ತು ಒಂದು ಕೋಟಿಗೆ ಹೋಗಿದೆ. ಇವತ್ತು ಜಪಾನ್‌ನ ನೆರವಿನಿಂದ ರೂ. 3,384 ಕೋಟಿ ಹಣ ಬಂದಿದೆ, ನಾನು ರಾಜ್ಯದ ಮುಖ್ಯಮಂತ್ರಿಯಾದಾಗ ಶ್ರೀ ಗುಲಾಂ ನಬಿ ಅಜಾದ್‌ರವರನ್ನು ಕರೆಸಿ ಜಯನಗರದಲ್ಲಿ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಅದು ಎಲ್ಲಿ ನಡೆಯುತ್ತಿದೆ ಎಂಬುದು ಗೊತ್ತಿಲ್ಲ. ಇವತ್ತಿನ ದಿವಸ ಕುಡಿಯುವ ನೀರಿಗೆ ತೊಂದರೆಯಾಗಿದೆ. ನಮಗೆ 46 ಟಿಎಂಸಿ ನೀರು ಬೇಕಾಗಿದ್ದಲ್ಲಿ, ಇವತ್ತು ನಮಗೆ ಕಡಿಮೆ ನೀರನ್ನು ಕೊಟ್ಟಿದ್ದಾರೆ. ಕಾವೇರಿಯ ಭಾಗದಲ್ಲಿರುವವರು ಕೂಡ ನಮ್ಮನ್ನು ಕೇಳುತ್ತಾರೆ, "ಬೆಂಗಳೂರು ನಗರಕ್ಕೆ ಕುಡಿಯುವುದಕ್ಕೆ ನೀರನ್ನು ಕೊಡಬೇಕೆ"? ಎಂದು ಈಗಾಗಲೇ ಬೇಸಿಗೆ ಬರುತ್ತಿದೆ, ಕರ್ನಾಟಕ ರಾಜ್ಯದಲ್ಲಿ ಹೆಚ್ಚಿನ ಬಿಸಿಲು ಆಗುತ್ತಿದೆ, ಇವತ್ತು water table ಕೆಳಗಡೆ ಹೋಗುತ್ತಿದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಬೆಂಗಳೂರು ನಗರ ಮುಂಬರುವ ದಿವಸಗಳಲ್ಲಿ ಐಟಿ/ಬಿಟಿ ಸೆಂಟರ್‌ಗಳು ಬಂದು ಇವತ್ತು international hub, ಆಗಿದೆ. ಇವತ್ತಿನದಿವಸ ಎಲ್ಲಾಕಡೆಯಿಂದಲೂ ಜನರು ನಗರಕ್ಕೆ ಬರುತ್ತಿದ್ದಾರೆ. ಇಂತಹ ಒಂದು ಪರಿಸ್ಥಿತಿ ಇದ್ದಾಗ ನಮಗೆ ಅನ್ಯಾಯವಾಗಿದೆ. ಇದನ್ನು ಸರಿಯಾದ ರೀತಿಯಲ್ಲಿ ಅಂಕಿಅಂಶಗಳ ಮುಖಾಂತರ ನಾವು ಪ್ರತಿಪಾದನೆಯನ್ನು ಮಾಡಬೇಕಾಗುತ್ತದೆ. ಒಂದು

ಮಾತನ್ನು ನಾವು ಹೇಳಿದರೆ ಯಾರೂ ಕೂಡ ಧಕ್ಕೆಯಾಗಿದೆ ಎಂದು ತಿಳಿದುಕೊಳ್ಳಬಾರದು. ಇವತ್ತಿನ ದಿವಸ ನಾವು ಇಷ್ಟೊಂದು ಹಣವನ್ನು ವಕೀಲರಿಗಾಗಿ ಖರ್ಚು ಮಾಡುತ್ತೇವೆ. ಅವರ ಮೇಲೆ ನಾವು ಜವಾಬ್ದಾರಿಯನ್ನು ಸಹ ಕೊಟ್ಟಿರುತ್ತೇವೆ. ಅವರಿಗೆ ಅವಹೇಳನ ಮಾಡಬೇಕೆಂಬ ರೀತಿಯಲ್ಲಿ ನಾನು ಹೇಳುತ್ತಿಲ್ಲ. ಇದು ನಮಗೆ ಪ್ರಜಾಪ್ರಭುತ್ವದಲ್ಲಿ ಜನರ ಪ್ರತಿನಿಧಿಗಳ ಹಕ್ಕು ಆಗುತ್ತದೆ. ನೀವು ಏನು ಇಲ್ಲಿಯವರೆಗೆ ಪ್ರತಿಪಾದನೆಯನ್ನು ಮಾಡಿದ್ದೀರಿ? What is the result you have given? ಮಾಡಿದ್ದಾರೆನ್ನತಕ್ಕಂತಹದ್ದು ಅಲ್ಲ. ಇವತ್ತು ಆವೇಶಭರಿತವಾಗಿ ಆ ಮಾತುಗಳು ಕೂಡ ನಮ್ಮ ಮನಸ್ಸಿನಲ್ಲಿ ಬರುತ್ತದೆ. ಇಂತಹ ಎಲ್ಲಾ ವಿಷಯಗಳ ಬಗ್ಗೆ ತಾವು ಏನು irrigation expert ಮತ್ತು legal expert ರವರನ್ನು consult ಮಾಡಿ ಯಾವ ರೀತಿಯಾಗಿ ಹೋಗಬೇಕಾಗಿದೆ. ಅದಕ್ಕಾಗಿ ಈ ಒಂದು ಗೊತ್ತುವಳಿಯ ಮುಖಾಂತರ, ಇವತ್ತು ನಿರ್ಣಯವನ್ನು ಪಾಸು ಮಾಡಬೇಕೆಂದು ಕೇಳಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಕಾವೇರಿ ಜಲವಿವಾದದ ನ್ಯಾಯಾಧೀಕರಣದ ಬಗ್ಗೆ, ಈ ಸಭೆಯ ಒಮ್ಮತದ ಸಮ್ಮತಿಯ ಬಗ್ಗೆ ನಿರ್ಣಯವನ್ನು ತಂದು ಇಲ್ಲಿ ಚರ್ಚೆಗೆ ಕರೆದಿದ್ದಾರೆ. ಆ ಚರ್ಚೆಯಲ್ಲಿ ಭಾಗವಹಿಸುವ ಬಗ್ಗೆ, ನನ್ನನ್ನು ಕರೆದಿರುವ ಬಗ್ಗೆ, ನಾನು ತಮಗೆ ಅಭಿನಂದಿಸಿ, ಇದೊಂದು ಬಹಳ ವ್ಯಾಪಕವಾದ ವಿಷಯವಾಗಿದೆ. ಇಡೀ ರಾಜ್ಯದಲ್ಲಿ ಯಾವುದೇ ಪಕ್ಷವಿರಲಿ, ಯಾವುದೇ ರಾಜ್ಯದ ಭಾಗ ಇರಲಿ, ನಮ್ಮ ನಾಡಿನ ಜಲ ಮತ್ತು ನೆಲದ ವ್ಯವಹಾರದಲ್ಲಿ ರಾಜಿ ಮಾಡಿಕೊಳ್ಳುವುದಕ್ಕೆ ತಯಾರಿಲ್ಲವೆಂದು ನಾನು ಭಾವಿಸಿದ್ದೇನೆ. ನಾನು ನಿನ್ನೆ ದಿವಸ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ ಹೇಳಿದೆ. 1974ರಿಂದ ಇಲ್ಲಿಯವರೆವಿಗೆ ಸರ್ಕಾರವನ್ನು ನಡೆಸಿರುವ ಯಾರು ಕೂಡ ಕಾವೇರಿ ಜಲವಿವಾದದ ಬಗ್ಗೆ ಬೇಜವಾಬ್ದಾರಿಯಾಗಿ ವರ್ತಿಸಿದ್ದಾರೆಂದು ಹೇಳಿ ನಾವು ಹೇಳುವುದಕ್ಕಾಗುವುದಿಲ್ಲ. ಅಕಸ್ಮಾತ್ ಆಗಿ ನಮಗೆ ಇವತ್ತು ಅನ್ಯಾಯಗಳು ಆಗಿದ್ದರೆ ಅದು ನಮ್ಮ inevitable loss, ನಾವು ಸ್ವತಂತ್ರ್ಯ ಪೂರ್ವದಲ್ಲಿ

ಏನು, ಕಳೆದುಕೊಂಡಿದ್ದೇವೆ, ಅದಕ್ಕೆ ಇವತ್ತು ನಾವು ಪರಿತಪಿಸುವಂತಹ ಸ್ಥಿತಿ ನಮಗೆ ನಿರ್ಮಾಣವಾಗಿದೆ. ಇದಕ್ಕೋಸ್ಕರ ರಾಜಕಾರಣವನ್ನು ಮಾಡುವುದು, ಪಕ್ಷಗಳನ್ನು ದೂಷಣೆ ಮಾಡುತ್ತಾ ಹೋಗುವುದು, ಅದು ನಮ್ಮ ಕರ್ತವ್ಯವಾಗಬಾರದು. ಇವತ್ತು ಕೂಡ ನಾನು ಈ ಸದನದಲ್ಲಿ ಹೇಳುತ್ತಿದ್ದೇನೆ. ರಾಜ್ಯದ ಹಿತಾಸಕ್ತಿಯನ್ನು ಕಾಪಾಡಬೇಕಾದರೆ ನಾವೆಲ್ಲರೂ ಒಂದೇ. ಇದರಲ್ಲಿ ಎರಡು ಅಭಿಪ್ರಾಯಗಳನ್ನು ಬಹುಶ: ಯಾರು ಇಟ್ಟುಕೊಳ್ಳಬಾರದು, ಇಟ್ಟುಕೊಂಡು ಇಲ್ಲವೆಂದು ಈ ನಾಡಿನ ಜನತೆ ಎಂದು ನಾವು ತಿಳಿದುಕೊಂಡಿದ್ದೇನೆ. ನಮಗೆ ಎಲ್ಲೋ ಒಂದು ಕಡೆ ರಾಷ್ಟ್ರ ಮಟ್ಟದಲ್ಲಿ ನಾಯಕತ್ವದ ಕೊರತೆ ಇದೆಯೇ? ಅಥವಾ ರಾಜ್ಯವನ್ನು ಪ್ರತಿನಿಧಿಸುವ ಬಗ್ಗೆ ನಮಗೆ ನಮ್ಮದೇ ಆದ ತಾಪತ್ರಯಗಳು ಇದೆಯಾ? ಅಥವಾ ನಾವೇ ಬಹಳ dispute ಮಾಡುವವರು, ತಕರಾರು ಮಾಡುವಂತಹ ಜನರು ಎಂದು ಹೇಳಿ, ನಮ್ಮ ಮೇಲೆ ದೊಡ್ಡ ಅಪಪ್ರಚಾರವನ್ನು ನಡೆಯುವುದನ್ನು ನಾವು ಸಮರ್ಥವಾಗಿ ಎದುರಿಸುವ ಕಡೆಯಲ್ಲಿ ನಾವು ವಿಫಲರಾದೆವಾ, ಎಂದು ನಾವು ನೋಡಬೇಕಾಗುತ್ತದೆ. ಗಡಿಯ ಪ್ರಶ್ನೆ ಬರಲಿ, ನೀರಿನ ಬಗ್ಗೆ ಬರಲಿ, ಏನೋ ಕರ್ನಾಟಕದವರು ನಾವು ಯಾವ ತೀರ್ಪನ್ನು ಒಪ್ಪುವುದಿಲ್ಲ, ಯಾವ ತೀರ್ಪಿಗೂ ನಾವು ಸಹಮತಿಯನ್ನು ಸೂಚಿಸುವುದಿಲ್ಲ, ನಮಗೆ ಇವೆಲ್ಲಾ ಇತ್ಯರ್ಥ ಆಗುವುದು ಇಷ್ಟವಿಲ್ಲವೆನ್ನುವಂತಹ ಭಾವನೆ ನಮ್ಮ ರಾಜ್ಯದ ಮೇಲೆ ನಮಗೆ ಹೊರ ರಾಜ್ಯಗಳಲ್ಲಿ ಒಂದು ವ್ಯಾಪಕವಾದ ಪ್ರಚಾರವಾಗುವಂತಹ ಸ್ಥಿತಿಯನ್ನು ನಾವು ನಿರ್ಮಾಣ ಮಾಡಿಕೊಂಡು ಬಿಟ್ಟಿದ್ದೇವೆ. ಇವತ್ತು ನಾವು ಕಾವೇರಿ ಬಗ್ಗೆ ಮಾತನಾಡಬೇಕಾಗಿದೆ. ಕಾವೇರಿಯಿಂದ ನಮಗೆ ಏನಾಗಬೇಕಾಗಿದೆ? ಅದರ ಬಗ್ಗೆ ನಾನು ಬಹಳ ಸಲ ಒತ್ತಿ ಹೇಳುತ್ತಿದ್ದೇನೆ. ಕಾವೇರಿಯಿಂದ ಬಹಳ ತೊಂದರೆಗೆ ಈಡಾಗುವವರಲ್ಲಿ, ಅದರಲ್ಲೂ ಹಳೆ ಮೈಸೂರು ಭಾಗದಲ್ಲಿ ಹೊಸದಾಗಿ ಆಗಿರುವ ಜಿಲ್ಲೆ, ಚಾಮರಾಜನಗರದವರು, ತುಮಕೂರು ಜಿಲ್ಲೆಯವರು ಮತ್ತು ಚಿಕ್ಕಮಗಳೂರು ಜಿಲ್ಲೆಯ ಕೆಲವು ಭಾಗ ಮತ್ತು ನಮ್ಮ ಆಜುಬಾಜಿನ ಕೆಲವು ಜಿಲ್ಲೆಗಳು ನಿಜವಾಗಲೂ ಬಹಳ ತೊಂದರೆಗೆ ಸಿಕ್ಕಿದ್ದೇವೆಂದು ನಾನು ಹೇಳಲೇ ಬೇಕಾಗುತ್ತದೆ. ನಾನು ಸನ್ಮಾನ್ಯ ವಾಟಾಳ್ ನಾಗರಾಜ್‌ರವರನ್ನು ಅಭಿನಂದಿಸುತ್ತೇನೆ. ನನ್ನ ಪಕ್ಕದಲ್ಲಿ ಕುಳಿತಿದ್ದಾರೆ ನಾವು ಯಾವಾಗಲೂ ಜೊತೆಯಲ್ಲಿ ಇರುತ್ತೇವೆಂದು ಅಲ್ಲ. ಈ ಹೋರಾಟದಲ್ಲಿ ಈ ರಾಜ್ಯದಲ್ಲಿ ಬೆಳಕು ಚೆಲ್ಲುವ ಕಡೆ ಪಕ್ಷಾತೀತವಾಗಿ ಸಂಘಟಣೆ ಮಾಡುವ ಕಡೆ

ನಿಜವಾಗಲೂ ಒಂದು ಉತ್ತಮವಾದ ಕೆಲಸವನ್ನು ಅವರು ಮಾಡಿದರು. ನಾವು ಅವರ ಮಟ್ಟಕ್ಕೆ ಮಾಡಲಿಕ್ಕೆ ಆಗಲಿಲ್ಲ ಎನ್ನುವ ನೋವು ನಮಗೆ ಇದೆ, ಅವರ ಜೊತೆಯಾದರೂ ಸೇರಿಕೊಳ್ಳುವುದಕ್ಕೆ ನಮ್ಮಿಂದ ಆಗಲಿಲ್ಲವೇನೋ ಎಂದು ನಾನು ಅಂದುಕೊಂಡಿದ್ದೇನೆ. ಒಂದು ಮಾತು ಸತ್ಯ, ಆವತ್ತು ಆ ಕೆಲಸವನ್ನು ನಾವು ಮಾಡದೇ ಹೋಗಿದ್ದರೆ, ಮಾನ್ಯ ಕರುಣಾನಿಧಿಯವರು 10–15 ದಿವಸವಾದ ಮೇಲೆ ತೆಗೆದುಕೊಂಡ ನಿರ್ಣಯವನ್ನು ಅವರು ಮೊದಲೇ ತೆಗೆದುಕೊಂಡು ಬಿಟ್ಟಿದ್ದರೆ ಬಹುಶ ಇಡೀ ಇಂಡಿಯಾ ದೇಶದಲ್ಲಿ ನಾವು ತಪ್ಪಿತಸ್ಥರು ಎಂದು ಮತ್ತೆ ನಾವು ಪ್ರಚಾರಕ್ಕೆ ಬಂದು ಬಿಡುತ್ತಿದ್ದೆವು. ಏನೋ ಆಗಬಾರದ್ದು ಆಗಿದೆ, ತಮಿಳುನಾಡಿಗೆ ನಾವು ಅನ್ಯಾಯವನ್ನು ಮಾಡಿದ್ದೇವೆಂದು, ನ್ಯಾಯಾಧಿಕರಣವನ್ನು ಟೀಕೆ ಮಾಡುವುದಕ್ಕೆ, ನ್ಯಾಯಾಧೀಶರನ್ನು ಟೀಕೆ ಮಾಡುವುದಕ್ಕೆ, ಇದು ವೇದಿಕೆ ಎಂದು ನಾನು ಭಾವಿಸಿಲ್ಲ. ಆದರೆ ನಮ್ಮ ವಾದಗಳನ್ನು ಈ ರಾಜ್ಯದ ಪರವಾಗಿ ವಾದವನ್ನು ಮಾಡಿದಂಥ ವಕೀಲರುಗಳು ನಾವು ಏನು ಅಲ್ಪಸ್ವಲ್ಪ ಕಾನೂನಿನ ಅರಿವು ಇಟ್ಟುಕೊಂಡು ಸಣ್ಣಪುಟ್ಟ ಏನು ಲಾಯರ್‌ಗಿರಿಯನ್ನು ಮಾಡಿದವರು ಇದ್ದೇವೆ. ಅದರ ಅನುಭವದ ಮೇಲೆ ಆ. ತೀರ್ಮಾನ ಓದಿದಾಗ ನಿಜವಾಗಲೂ ಅವರು ವಾದವನ್ನು ಚೆನ್ನಾಗಿ ಮಾಡಿದ್ದಾರೆಂದು, ಮಾನ್ಯ ಪ್ರಕಾಶ್‌ರವರೆ ನಾನು ಅಂದುಕೊಂಡಿದ್ದೇನೆ. ಇದು ನನ್ನ ವೈಯಕ್ತಿಕ ಅಭಿಪ್ರಾಯ. ನಾರಿಮನ್‌ವರಾಗಲಿ, ಜವಳಿಯವರಾಗಲಿ ಅವರ ಟೀಮ್ ಆಗಲಿ, ಶಕ್ತಿಮೀರಿ ಈ ಕೆಲಸವನ್ನು ಮಾಡಿದ್ದಾರೆ. ಆದರೂ ಎಲ್ಲೋ ಒಂದು ಕಡೆ ನಮಗೆ ನಾವು ನಿರೀಕ್ಷೆ ಮಾಡಿದಷ್ಟು ನ್ಯಾಯ ಸಿಕ್ಕಲಿಲ್ಲ. ಕನಿಷ್ಟ ನಮ್ಮ ಮೂಲಭೂತ ಬೇಡಿಕೆ ಕೂಡ ಈಡೇರಲಿಲ್ಲ. ಅದನ್ನು ಸನ್ಮಾನ್ಯ ಟ್ರಿಬ್ಯುನಲ್‌ನಲ್ಲಿ ಕುಳಿತಂಥ ಅಧ್ಯಕ್ಷರು ಕೆಲವು ಕಡೆ ಪರಾಮರ್ಶೆ ಮಾಡಬೇಕಾಗಿತ್ತು ಎನ್ನುವುದು ನನ್ನ ಅಭಿಪ್ರಾಯ. 740 TMC ಯಲ್ಲಿ ನಮ್ಮ ಭಾಗ ಎಷ್ಟು, ತಮಿಳುನಾಡಿನ ಭಾಗ ಎಷ್ಟು, ಎಂದು ಲೆಕ್ಕವನ್ನು ಮಾಡಿ ಮಾನ್ಯ ಈಶ್ವರಪ್ಪನವರು ನಮಗೆ ಹಂಚಿದ್ದಾರೆ. ಆದರೆ 18 ಲಕ್ಷ ಚಿಲ್ಲರೆ ಎಕರೆಗೆ ನೀವು ಹೋಗಬಹುದು ಎಂದು ಹೇಳಿ, ಅದಕ್ಕೆ ನೀರು ಎಲ್ಲಿ ಇದೆ ಎಂದು ಹೇಳುವ ಸ್ಥಿತಿಯನ್ನು ಅವರು ನಿರ್ಮಾಣ ಮಾಡಲಿಲ್ಲ. ಅದರಲ್ಲಿ ಪ್ರಮುಖವಾಗಿ 6.55 ಲಕ್ಷ ಎಕರೆ ಜಮೀನಿಗೆ ಹೇಮಾವತಿ ಕೆಳಗಡೆ ಅಚ್ಚುಕಟ್ಟು ಬರಬೇಕಾಗಿತ್ತು. ನಾವು ಆ ಪ್ರಾಜೆಕ್ಟ್‌ನ್ನು ಮಾಡಬೇಕಾದರೆ, ಸುಮಾರು 7 ಲಕ್ಷ ಎಕರೆಗೆ ಮಾನ್ಯ ಈಶ್ವರಪ್ಪನವರೆ, drought prone area programme–ಅಡಿಯಲ್ಲಿ ಒಂದು

semi dry crop ಗೆ ನೀರು ಸಿಗುತ್ತದೆ, ಹಾಸನ್, ಕೋಲಾರ್, ಮಂಡ್ಯ ಜಿಲ್ಲೆಗಳಿಗೆ ಎಂದು ಮಾಡಿತ್ತು. 34 TMC ನೀರನ್ನು ನೀವು ಬಳಸಿಕೊಳ್ಳಬಹುದು ಹೇಮಾವತಿ ಡ್ಯಾಂ ನಲ್ಲಿ ಎಂದು ಅವರು ಹೇಳಿದರೂ ಕೂಡ, ಅಲ್ಲಿ ಕುಡಿಯುವ ನೀರಿಗೆ ಉಪಯೋಗಿಸುತ್ತಿರುವುದು. ಅಲ್ಲಿ ಆಗುತ್ತಿರುವ evaporation, ಗೊರೂರಿನಿಂದ ಹಿಡಿದು ಹೆಬ್ಬೂರಿನವರೆಗೆ ನಾಲೆ ಬರುವ ಕಡೆ ನಾವು ಏನು ತೋಟ ಅಥವಾ semi dry crop ಗೆ ಕನಿಷ್ಟ ನೀರನ್ನು ಕೇಳಿದ್ದೆವು, ಆ ನೀರು ಸಾಕಾಗುತ್ತದೊ ಇಲ್ಲವೋ ಎಂದು ಹೇಳಿ, calculation ಮಾಡುವ ಕಡೆ ಸ್ವಲ್ಪ ಹೆಚ್ಚು ಕಡಿಮೆಯಾಗಿದೆ ಎಂದು ನಮ್ಮ ಭಾವನೆ. ಏಕೆಂದರೆ ಟ್ರಿಬ್ಯುನಲ್ ಒಪ್ಪಿಕೊಂಡು appreciate ಮಾಡಿದೆ. ಕರ್ನಾಟಕ ರಾಜ್ಯದವರ cropping pattern ನ್ನು ಒಪ್ಪುತ್ತೇನೆ. ಅವರು distressನಲ್ಲಿ ಬೆಳೆದುಕೊಳ್ಳುವುದಕ್ಕೆ ಒಂದು ಬೆಳೆಗೆ semi dry ಬೆಳೆಗೆ ನೀರನ್ನು ಕೇಳುತ್ತಿರುವುದು ವಾಸ್ತವಾಂಶವಾಗಿದೆ ಎಂದು ಏನು ಒಪ್ಪಿಕೊಂಡಿದೆ, ಉಪವಾಸ ಇರುವವರಿಗೆ ಏನು ಉಪವಾಸ ಇದ್ದಿಯಾ, ಮನೆ ಕಡೆ ಎಲ್ಲರೂ ಚೆನ್ನಾಗಿದ್ದಾರಾ, ಎಂದು ಕೇಳಿದರೆ ಸಾಲದು. ನಮಗೆ ಸ್ವಲ್ಪ ಊಟಕ್ಕೂ ಇಡಬೇಕಾಗಿತ್ತು. ಉಪವಾಸ ಇದ್ದಾರೆ ಪಾಪ ಹೊಟ್ಟೆ ಹಸಿದುಕೊಂಡಿದ್ದಾರೆಂದು ಬಾಯಿತುಂಬಾ ಹೇಳಿ, ಊಟಕ್ಕೆ ನಮಗೆ ಇಡುವುದು ಬಿಟ್ಟು ಪಕ್ಕದವರಿಗೆ ಇಟ್ಟಿದ್ದಾರೆಂದು ನಮ್ಮ ಭಾವನೆ. ಮಾತು ಒಳ್ಳೆಯದು ಆಡಿದ್ದಾರೆ, ನಾನು ಅದನ್ನು ಓದಿದ್ದೇನೆ. ಆ ಭಾಗದವರ ಬಗ್ಗೆ ಎರಡು ಕೆಟ್ಟ ಮಾತನ್ನು ಆಡಲಿಲ್ಲ. ಊಟ ಕೊಡುವಾಗ ಪಾಲು ಸ್ವಲ್ಪ ಹೆಚ್ಚು ಕಡಿಮೆಯಾಗಿದೆ. ಇದನ್ನು ಇಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಏಕೆಂದರೆ, ಇದು ಟೀಕೆ ಮತ್ತು ನ್ಯಾಯಾಧೀಶರು ಕೊಟ್ಟಿರುವ ತೀರ್ಮಾನ ಸರಿ ತಪ್ಪು ಎನ್ನುವ ವಿಮರ್ಶೆಗಿಂತ ಹೆಚ್ಚಾಗಿ, ನಮಗೆ ಎಲ್ಲೆಲ್ಲಿ ಏನು ಆಗಬೇಕು ಎಂದು, ನಮಗೆಲ್ಲಾ ಅರ್ಥವಾಗುತ್ತದೆ. ನಾನು ಮೊನ್ನೆ ಹೇಳುತ್ತಿದ್ದೆ, ಒಂದು ಮನೆಯ ಭಾಗಕ್ಕೆ ಹೋದರೆ, ನಾವೆಲ್ಲಾ ಇದನ್ನು ಎದುರಿಸುತ್ತೇವೆ. ಮನೆಯ ಭಾಗವನ್ನು ಮಾಡಿಬಿಟ್ಟರೆ, ಅಣ್ಣ ಮತ್ತು ತಮ್ಮನಿಗೆ ಸಮಾಧಾನ ಇರುವುದಿಲ್ಲ. ನನಗೂ ಕಡಿಮೆಯಾಯಿತು, ನನಗೂ ಕಡಿಮೆಯಾಯಿತು ಎಂದು ಇಬ್ಬರು ಹೇಳುತ್ತಾರೆ. ನಮ್ಮ ಮನೆಯ ಆಸ್ತಿಯನ್ನು ತೆಗೆದುಕೊಂಡು ಹೋಗಿ ಅವರಿಗೆ ಭಾಗ ಕೊಡುವುದಕ್ಕಾಗುವುದಿಲ್ಲ. ಟ್ರಿಬ್ಯುನಲ್‌ದವರು ಬೇರೆ ಯಾರ ನೀರನ್ನಾದರೂ ತಂದು ನಮಗೆ ಕೊಡುವುದಕ್ಕಾಗುತ್ತಿರಲಿಲ್ಲ. ಅವರು

ಹೇಳುತ್ತಾರೆ, ನಿಮ್ಮ requirements 1200 TMC ಇದೆ. ನಿಮಗೆ 50% dependability ಮೇಲೆ 740 TMC ಮೇಲೆ ನಾವು ಲೆಕ್ಕಾಚಾರವನ್ನು ಕೊಡುವುದಕ್ಕಾಗುವುದಿಲ್ಲ. ಅದನ್ನು ಹೇಳಬೇಕಾದರೆ, ಒಂದು ಕಡೆ ಈಗಾಗಲೇ ಸಮೃದ್ಧಿಯಾಗಿ ಇರುವವರು ಇನ್ನೊಂದು ಕಡೆ ನಾವು ನಷ್ಟದಲ್ಲಿ ಮತ್ತು ಕಷ್ಟದಲ್ಲಿ ಇರುವವರನ್ನು ಪರಿಶೀಲನೆ ಮಾಡಬೇಕಾಗಿತ್ತು ಎಂಬುದು ನಮ್ಮ ಭಾವನೆ. ಟ್ರಿಬ್ಯುನಲ್ ಏನು 3–4 ಅಂಶಗಳ ಬಗ್ಗೆ ತೀರ್ಮಾನವನ್ನು ಕೊಟ್ಟಿದೆ. ನಾವು ಇಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ, ಅದಕ್ಕೆ ಬೆಳಕನ್ನು ಚೆಲ್ಲಬೇಕಾಗಿದೆ. ನಮ್ಮ ವಕೀಲರುಗಳು ಆ ಬಗ್ಗೆ ಮತ್ತೊಮ್ಮೆ ಪುನರ್‌ಪರಿಶೀಲನಾ ಅರ್ಜಿಯನ್ನು ಕೊಡುತ್ತಾರೋ ಅಥವಾ supreme court ಮುಂದೆ appeal ಹೋಗುತ್ತಾರೋ, Schedule IX ಕೆಳಗಡೆ provision ಮಾಡಿ ಕೊಡಿ ಎಂದು ಕೇಳುತ್ತಾರೋ ಅದು ಅವರಿಗೆ ಬಿಟ್ಟಿದ್ದು. ಏಕೆಂದರೆ they are the better judges. ಈ ಕೇಸನ್ನು ಹೇಗೆ ನಡೆಸಬೇಕು, ಯಾವ ಮಿತಿಯಲ್ಲಿ ನಡೆಸಬೇಕು ಎಂದು ನಾವು ಮಾತನಾಡುವುದಕ್ಕಿಂತ ಹೆಚ್ಚಾಗಿ, ಈ ಕೇಸನ್ನು ನಡೆಸಿದಂಥ ಟೀಮ್‌ನವರಿಗೆ ಮಾಹಿತಿ ಜಾಸ್ತಿ ಇರುತ್ತದೆ, ನಮಗಿಂತ ಅವರಿಗೆ ಹೆಚ್ಚಿನ ತಂತ್ರಜ್ಞಾನ ಇರುತ್ತದೆಂದು ಹೇಳುತ್ತಾ, ಒಂದು ಮಾತನ್ನು ಹೇಳುತ್ತೇನೆ. ನಮಗೇನು ಸ್ವತಂತ್ರ್ಯಪೂರ್ವ ಏನು agreement ಆಗಿತ್ತು, ಆ agreement ಅನ್ನು ಅವರು ಒಪ್ಪಿದ್ದಾರೋ ಅಥವಾ ಇಲ್ಲವೋ ಎನ್ನುವುದನ್ನು, ಅವರು ಸ್ಪಷ್ಟವಾಗಿ ಹೇಳಲಿಲ್ಲ. I cannot call this as void. ಒಂದು ಕಡೆ ಹೇಳುತ್ತಾರೆ. Independence ಬಂದ ಮೇಲೆ, Constitution ಹೊಸದಾಗಿ implement ಆದಮೇಲೆ ಹಿಂದೆ ಇದ್ದ agreement valid ಇಲ್ಲವಾ ಎನ್ನುವ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆಂದು ಇನ್ನೊಂದು ಕಡೆ ಹೇಳುತ್ತಾರೆ. ಅವರೂ ಗೊಂದಲದಲ್ಲಿದ್ದಾರೆ. ಆ agreement void ಎಂದು ಕರೆಯುವುದಕ್ಕಾಗುವುದಿಲ್ಲವೆಂದು ಅನ್ನುತ್ತಾರೆ. Perspective right of a State cannot be maintained just because you are enjoying some water, ಕೂಡ ಅವರು ಹೇಳುತ್ತಾರೆ. ಅವರೇ ಹೇಳಿದ್ದು ನಾನು ಹೇಳಲಿಲ್ಲ. Perspective right cannot be treated as the sole right of a State ಎಂದು ಹೇಳುತ್ತಾರೆ. ಹಾಗೆ ಇರುವಾಗ water flow ಎಷ್ಟು ಇತ್ತು, ನಮ್ಮ contribution ಎಷ್ಟು ಇತ್ತು, ನಾವು ಎಷ್ಟು ಕಿ.ಮೀ. ಅನ್ನು contribute

ಮಾಡಿದೆವು, ಇದೆಲ್ಲವನ್ನು ನಾವು ಪರಿಗಣನೆಗೆ ತೆಗೆದುಕೊಳ್ಳುತ್ತೇವೆಂದು ಹೇಳಿ, judgment ಕೊಡಬೇಕಾದರೆ, ಸ್ವಲ್ಪ ಆ ಕಡೆ ಈ ಕಡೆ ಮಾಡಿಬಿಟ್ಟಿದ್ದರೆ ಅನುಕೂಲವಾಗುತ್ತಿತ್ತು ಅದನ್ನು ಮಾಡಲಿಲ್ಲ ಎನ್ನುವ ನೋವು ನಮಗೆ ಇದೆ. ಇವತ್ತು 1924 ಕ್ಕಿಂತ ಹಿಂದೆ ಇದ್ದಂಥ ಆಣೆಕಟ್ಟಿನ ಕೆನಾಲ್ಸ್‌ನಲ್ಲಿ ಏನು ಎರಡು ಬೆಳೆ ಇತ್ತು ಆ ಎರಡು ಬೆಳೆಯನ್ನು ತಮಿಳುನಾಡಿಗೆ protect ಮಾಡಿದ್ದೇವೆಂದು ಹೇಳುತ್ತಾರೆ. ನಮ್ಮ ರಾಜ್ಯಕ್ಕೆ ಬಂದಾಗ ಅವರು restriction ಮಾಡುತ್ತಾರೆ. ಕರ್ನಾಟಕದ ವಿಷಯಕ್ಕೆ ಬಂದಾಗ ಅದನ್ನು 100% ಗ್ಯಾರಂಟಿ ಮಾಡುವುದಿಲ್ಲ. ಅಲ್ಲಿ ಮೂರನೇ ಬೆಳೆ ಬೆಳೆಯಬೇಡಿ ಎಂದು ಹೇಳುತ್ತಾರೆ. ಇಲ್ಲಿ ನಮಗೆ semi dry crop ಗೆ ಹೋಗಿ ಎಂದು ಹೇಳುತ್ತಾರೆ. ನಾವು semi dry crop ನ್ನು ಇಟ್ಟುಕೊಂಡಿದ್ದೇವೆಂದು ಹೇಳಿದ್ದೇವೆ. ಆದರೆ 5 ಸಾವಿರ ಎಕರೆಯನ್ನು ಒಂದು TMC ಯಲ್ಲಿ ಮಾಡಬಹುದೆಂದು ತಮಿಳುನಾಡಿಗೆ ತೆಗೆದುಕೊಳ್ಳುತ್ತಾರೆ, ಆದರೆ ಕರ್ನಾಟಕದಲ್ಲಿ 7 ಸಾವಿರ ಎಕರೆ ಒಂದು TMC ಗೆ ಮಾಡಬಹುದೆಂದು ಲೆಕ್ಕಾಚಾರವನ್ನು ತೆಗೆದುಕೊಳ್ಳುತ್ತಾರೆ. ನಾವು ಭತ್ತವನ್ನು ಬೆಳೆಯುತ್ತಿದ್ದೆವು, ಮಂಡ್ಯ ಜಿಲ್ಲೆಯಲ್ಲಿ ಇವತ್ತು ಕಬ್ಬು ಹೋಗಿಬಿಟ್ಟಿತು. 1.8 ಲಕ್ಷ ಎಕರೆ ಕಬ್ಬನ್ನು ಬೆಳೆಯುತ್ತೇವೆಂದು ಒಪ್ಪಿಕೊಂಡು 40 ಸಾವಿರಕ್ಕೆ ಮಿತಿ ಮಾಡುತ್ತೇವೆಂದು ಹೇಳುತ್ತಾರೆ. 40 ಸಾವಿರಕ್ಕೆ ಮಿತಿ ಮಾಡುವುದು ಈಗ ಸಾಧ್ಯವೇ ಎಂದು ನಾವು ಈಗ ಕೇಳಬೇಕಾಗಿದೆ. 1.8 ಲಕ್ಷಕ್ಕೆ ಬಂದು ಬಿಟ್ಟಿದೆ. After the 1924 agreement, 50 ವರ್ಷವಾದ ಮೇಲೆ entire agreement ಅನ್ನು review ಮಾಡಬಹುದಾ? Or some clauses of the agreement review ಮಾಡಬಹುದಾ? ಅದಕ್ಕಾಗಿ ನಾನು ಒಂದು ಮಾತನ್ನು ಹೇಳಿದೆ. 1974 ರಿಂದ ಈಚೆಗೆ ನಾವು ಯಾರನ್ನೂ ಏನು ಅನ್ನುವಂತಿಲ್ಲ. ಏಕೆಂದರೆ, ದೇವರಾಜ ಅರಸರ ಆದಿಯಾಗಿ, ಆ ನಂತರ ಬಂದ ಎಲ್ಲಾ ಸರ್ಕಾರಗಳು, agreement 50 ವರ್ಷಕ್ಕೆ seize ಆಗಿದೆ, ನಾವು project ಮಾಡಿಕೊಳ್ಳುವುದಕ್ಕೆ ಏನೂ ತೊಂದರೆಯಿಲ್ಲ. ನಾವು projectಗಳನ್ನು ಮಾಡಿಕೊಳ್ಳಬಹುದೆಂದು ನಾವು ಹೊಸ projectಗಳನ್ನು ಆರಂಭ ಮಾಡಿದ್ದರಿಂದ ಕನಿಷ್ಟ ಕರ್ನಾಟಕ ಇವತ್ತು ಒಂದು ಹಂತದಲ್ಲಿ ನಿಂತಿದೆ. ನಾವು ಅವರ agreement valid ಇದೆ ಎಂದು ಅದನ್ನು ಪುಷ್ಟೀಕರಿಸಿ ಹೆದರಿಕೊಂಡು ಕುಳಿತುಕೊಂಡಿದ್ದರೆ, ಬಹುಶ ಜೂನ್ 1990 ರಲ್ಲಿ ಆದ ಟ್ರಿಬ್ಯುನಲ್‌ನಲ್ಲಿ ಇಷ್ಟರ ಮಟ್ಟಿಗೆ ನ್ಯಾಯವನ್ನು ತೆಗೆದುಕೊಳ್ಳುವುದಕ್ಕೆ

ಆಗುತ್ತಿರಲಿಲ್ಲವೇನೋ ಎನ್ನುವುದು ನನ್ನ ಭಾವನೆ. ಆ ಭಾವನೆ ಬರುವಾಗ ನಾನು ಟ್ರಿಬ್ಯುನಲ್ ಬಗ್ಗೆ ಒಂದು ಒಳ್ಳೆಯ ಮಾತನ್ನು ಹೇಳುತ್ತೇನೆ. ನನಗೆ 1990 ರ ನಂತರ ಏನು reference ಬಂತು, ಅಲ್ಲಿಂದ ಮುಂದೆ ನಾನು ಚರ್ಚೆಯನ್ನು ಮಾಡುತ್ತೇನೆ, ಅದರ ಬಗ್ಗೆ ನಾನು ಜವಾಬ್ದಾರಿ ತೆಗೆದುಕೊಳ್ಳುತ್ತೇನೆ ಎನ್ನುವ ಒಂದು ಒಳ್ಳೆಯ ಮಾತನ್ನು ಅವರು ಆಡಿದ್ದಾರೆ. ಆದರೆ ಅವರು ಹಿಂದಿನ agreement void ಎಂದು ಹೇಳಲಿಲ್ಲ. ಅದನ್ನೇನದರೂ ಅವರು null and void ಎಂದು ಹೇಳಿಬಿಟ್ಟಿದ್ದರೆ ನಮಗೆ ನಿಜವಾಗಲೂ ಒಂದು ಒಳ್ಳೆಯ ನ್ಯಾಯ ಸಿಗುತ್ತಿತ್ತು. ಆದರೂ sharing of waters ಬಂದಾಗ ಕೆಲವು ಕಡೆ trans–basin, even if it is extisting, ಅದನ್ನು allow ಮಾಡುವುದಿಲ್ಲ. ಇದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಸನ್ಮಾನ್ಯ ಪ್ರಕಾಶ್‌ರವರೆ, ಕುಡಿಯುವ ನೀರಿನ ಬಗ್ಗೆ ಚಿಕ್ಕನಾಯಕನಹಳ್ಳಿಯು ಸಹ trans-basin ನಲ್ಲಿ ನಾವು ನೀರನ್ನು ತೆಗೆದುಕೊಂಡು ಹೋಗಿದ್ದೇವೆ. ಅದನ್ನು ಕೂಡ ನಿಲ್ಲಿಸಿ ಎಂದು ಹೇಳುವುದು ಸರಿಯಲ್ಲ ಎಂದು ನನ್ನ ಭಾವನೆಯಾಗಿದೆ. ಈಗಾಗಲೇ ನೀರನ್ನು ತೆಗೆದುಕೊಂಡು ಹೋಗಿದ್ದರೂ ಕೂಡ trans–basin water supplyಯನ್ನು allow ಮಾಡುವುದಿಲ್ಲ. trans basin water for any purpose, domestic purpose ಆಗಲಿ, industrial purpose ಆಗಲಿ, irrigationಗೆ ಆಗಲಿ interim award ಆದ ಮೇಲೆ ನಾವು ಈ trans basin water ಅನ್ನು drinking waterಗೆ ತೆಗೆದುಕೊಂಡು ಹೋಗಬೇಕಾದರೆ, ಎಲ್ಲವನ್ನು ಅವರ ಮುಂದೆ ಕನ್‌ವಿನ್ಸ್ ಮಾಡಿಯೇ ತೆಗೆದುಕೊಂಡು ಹೋಗಿದ್ದೇವೆ. ಇದರಲ್ಲಿ ಯಾವುದೇ hide and seek ಇಲ್ಲ. ನಾವೇ projectsನ್ನು ಮಾಡಬೇಕಾದರೆ ಕುಡಿಯುವ ನೀರಿಗೆ ಇದು ಅಡ್ಡಿ ಬರಲಾರದು ಎಂದು ಹೇಳಿ ನಾವು clearanceನ್ನು ತೆಗೆದುಕೊಂಡೇ ಮಾಡಿಕೊಂಡಿದ್ದೇವೆ. ಅದರೆ ಇವತ್ತಿನ ತೀರ್ಮಾನದ ಪ್ರಕಾರ ಏನಾಗುತ್ತದೆಂದರೆ, existing drinking water supply schemeನ್ನು ಕೂಡ ನಾವು ನಿಲ್ಲಿಸಬೇಕಾಗುತ್ತದೆ. ನಾವು ಹೊಸದಾಗಿ ಕೊಡುವುದು ಹೋಗಲಿ, ಈಗಾಗಲೆ ಮಾಡಿರುವ ಸ್ಕೀಮ್‌ನ್ನು ನಿಲ್ಲಿಸಿ ಎಂದು ಹೇಳಿದರೆ, ನಮ್ಮ ಗತಿ ಏನು? ಇನ್ನು ಎರಡನೆಯದಾಗಿ ಹೇಳುವುದಾದರೆ Lift Irrigation, ನಾವು ಮತ್ತು ನೀವು Lift irrigation ಅದನ್ನು ಒಪ್ಪುತ್ತೀರೋ ಅಥವಾ

ಬಿಡುತ್ತೀರೋ tribunal ಅನ್ನು ನಾವು ಕೇಳಲಿಲ್ಲ. Lift irrigation ಆಗಲಿಲ್ಲವೆಂದರೆ, ನಮ್ಮ ನವಿಲೆಯ ಹತ್ತಿರ ಆಗಿರುವಂತಹ Lift irrigation ಅನ್ನು ಏನು ಮಾಡುವುದು. ಕಬಿನಿ ಹತ್ತಿರ ಆಗಿರುವಂತಹ lift irrigation ಅನ್ನು ಏನು ಮಾಡಬೇಕು? We have already established. ಅದನ್ನು ನಾವು ಒಪ್ಪುವುದಿಲ್ಲವೆಂದು ಹೇಳುವುದು, ಸಾರಾಸಗಟಾಗಿ ನಾನು ಯಾವುದೇ ಭಾಗದಲ್ಲಿ Lift irrigation scheme ಅನ್ನು ಒಪ್ಪುವುದಿಲ್ಲವೆಂಬ ನಿಲುವನ್ನು ತೆಗೆದುಕೊಳ್ಳುತ್ತಾರೆ. ದಯಮಾಡಿ ತಾವು ಅದನ್ನು reconsider ಮಾಡಿ ಎಂದು ನಾವು ಅವರನ್ನು ಕೇಳಬೇಕಾಗುತ್ತದೆ. ಏಕೆಂದರೆ ನಾವು ಅಲ್ಲಿ ಬಹಳ ಕಷ್ಟ ಇರುವ ಜಾಗಕ್ಕೆ ನೀರನ್ನು lift ಮಾಡಿಕೊಳ್ಳುತ್ತೇವೆ. ಯಾವ Government ಗಳು ಸುಲಭವಾಗಿ ಅಥವಾ ಅಕಸ್ಮಿಕವಾಗಿ, ದಿಢೀರೆಂದು liftಗಳಿಗೆ ಒಪ್ಪಿಕೊಳ್ಳುವುದಿಲ್ಲ. ಅನಿವಾರ್ಯ ಪ್ರಸಂಗಗಳು ಬಂದು, ಬೇರೆ ಏನು ಮಾಡುವುದಕ್ಕಾಗುವುದಿಲ್ಲವೆಂದಾಗ ಏನೂ ಪರಿಹಾರ ಇಲ್ಲವೆಂದಾಗ ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ, ಅಷ್ಟೊಂದು ಹಣವನ್ನು ಖರ್ಚುಮಾಡಿ ನೀರನ್ನು, ಯಾರದ್ದಾದರೂ ಜಮೀನಿಗೆ ಕೊಡುವುದು ಸರ್ಕಾರ ಒಪ್ಪುವುದಿಲ್ಲ. ನಮ್ಮ ಮುಂದಿರುವಂತಹ ಪ್ರಶ್ನೆ, ಈಗಾಗಲೇ ಜಾರಿಯಲ್ಲಿರುವಂತಹ lift irrigationಗಳ ನೀರನ್ನು ನಾವು ಉಳಿಸಿಕೊಳ್ಳುತ್ತೇವೆಯೇ? ಈಗಾಗಲೇ Transbasinನಲ್ಲಿ drinking waterಗೆ ಕೊಡುತ್ತಿರುವಂತಹ ನೀರನ್ನು ಉಳಿಸಿಕೊಳ್ಳುತ್ತೇವೆಯೇ? ಇದು ಬಹಳ ದುರಂತದ ವಿಷಯವಾಗಿದೆ. ಬೆಂಗಳೂರು ನಗರವನ್ನು 3 ಭಾಗ ಮಾಡಿ, 3:1 ಭಾಗ ಬೆಂಗಳೂರಿಗೆ ಮಾತ್ರ ಕಾವೇರಿ ವ್ಯಾಲಿಯಲ್ಲಿ ಬರುತ್ತವೆಂದು treat ಮಾಡಿ ನೀವು ಏನು 17.6 ಟಿಎಂಸಿ ನೀರನ್ನು ಇವತ್ತಿನ requirement 26 ಟಿಎಂಸಿ ಪ್ರಕಾರ 2025ನೇ ವರ್ಷಕ್ಕೆಂದು ಹೇಳಿದ್ದೀರಿ, ಅದನ್ನು 3:1 ಭಾಗಕ್ಕೆ ಇಳಿಸಿಬಿಟ್ಟು ಆ ಬಗ್ಗೆ ನೀವು ಬಹಳ technical ಆಗಿ ಒಂದು ಮಾತನ್ನು ಅಡಿದ್ದಾರೆ. ಅಲ್ಲಿ ನೀವು domesticಗೆ ಬಳಸುವ ನೀರು, after the use, it will come back to the basin. ನೀವು ಅದನ್ನು ಬಳಸಿ ಆದಮೇಲೆ, ನಿಮ್ಮ riverಗೆ ವಾಪಸ್ಸು ಬರುವುದರಿಂದ ಅದರಲ್ಲಿ 20% ಮಾತ್ರ ನಾವು ನಿಮಗೆ ನೀರನ್ನು ಕೊಡುತ್ತೇವೆ. ಹಾಗಾದರೆ ಕಾವೇರಿಗೆ ನೀವು I ರಿಂದ IVth stageಗೆ ನೀವು ಖರ್ಚು ಮಾಡಿರುವ ಹಣವನ್ನು ಏನು ಮಾಡುತ್ತೀರಿ? ಅದರಲ್ಲಿ ನೀವು

ಈಗಾಗಲೇ ಕೆಲಸವನ್ನು ಮಾಡಿಬಿಟ್ಟು ಬೆಂಗಳೂರು ನಗರಕ್ಕೆ ನೀವು ಶುದ್ಧೀಕರಿಸಿದ ನೀರನ್ನು ಕೊಡುತ್ತಿರುವವರು, ನಾಳೆ ದಿವಸ ನೀವು ಗೆರೆ ಹಾಕಿಕೊಂಡು ಬರುತ್ತೀರಿ, ಬೆಂಗಳೂರಿಗೆ ಕಾವೇರಿ ವ್ಯಾಲಿ ಎಲ್ಲಿ ಬರುತ್ತದೆ, ಬೇರೆ ವ್ಯಾಲಿ ಎಲ್ಲಿ ಬರುತ್ತದೆ ಎಂದು ಹೇಳಿ. ಇದು ನಿಜವಾಗಿ implement ಮಾಡುವುದಕ್ಕೆ ಸಾಧ್ಯವೇ ಇಲ್ಲವೆಂಬ ತೀರ್ಮಾನ ಎಂದು ನಮ್ಮ ಅಭಿಪ್ರಾಯವಾಗಿದೆ. ಇದನ್ನು practical ಅಗಿ ಮಾಡುವುದಕ್ಕೆ ಸಾಧ್ಯವೇ ಇಲ್ಲ. ನಾವು ಜಗಳಕ್ಕೆ ಆಡುವ ಮಾತಲ್ಲ, ಅಮೇಲೆ ನೀವು V stageಗೆ ಹೋಗಬೇಕಾಗುತ್ತದೆ. ಬೆಂಗಳೂರು ನಗರ ಬೆಳೆಯುತ್ತಿರುವುದಕ್ಕೆ ನಾವು ಕರ್ನಾಟಕದವರು ಮಾತ್ರ ಕಾರಣರಲ್ಲ ಸಾರ್. ಇದು ಇಡೀ ಇಂಡಿಯಾ ದೇಶ ಕಾರಣ. ನಮ್ಮದು ಸಿಲಿಕಾನ್ ಸಿಟಿಯಾಗಿದೆ. ಐಟಿ ಸಿಟಿಯಾಗಿದೆ, ಇಡೀ ವಿಶ್ವವೇ ಈ ಕಡೆ ನೋಡುತ್ತಿದೆ. ಅವರಿಗೆ ಏನಾದರೂ ಅಭಿಮಾನವಿದ್ದರೆ, ನಮಗೆ ಜಾಸ್ತಿ ಪುಷ್ ಮಾಡಿ ಬೆಂಗಳೂರನ್ನು ಇವತ್ತು ಬೆಳೆಸಬೇಕಾಗಿದೆ. ಇಡೀ ಪ್ರಪಂಚದಲ್ಲಿ ಬೆಂಗಳೂರು ನಗರ ಇಷ್ಟೊಂದು ಹೆಸರನ್ನು ತೆಗೆದುಕೊಳ್ಳುತ್ತಿದೆ, ನಮಗೆ ಇಷ್ಟೊಂದು publicity ತರುತ್ತಿದೆ ಆದರೆ ಇವತ್ತು 3:1 ಭಾಗ ನಗರವನ್ನು identify ಮಾಡಿ ಅದರಲ್ಲಿ 8.6 ಟಿಎಂಸಿ ಗಣನೆಗೆ ತೆಗೆದುಕೊಳ್ಳುತ್ತೇನೆಂದು ಹೇಳಿ ಅದರಲ್ಲಿ again 1/5th will be allotted to the Bangalore city ಎನ್ನುವುದು ನಿಜವಾಗಿಯೂ ಕನಸಿನ ಮಾತಾಗಿದೆ. ಅದರ ಜೊತೆಗೆ ಹಾಸನಕ್ಕೆ ಕುಡಿಯುವ ನೀರಿನ ಬಗ್ಗೆ ಏನು ಮಾಡುತ್ತೀರಿ? ತುಮಕೂರಿಗೆ ಕುಡಿಯುವ ನೀರಿನ ಬಗ್ಗೆ ಏನು ಮಾಡುತ್ತೀರಿ? ತಿಪಟೂರಿಗೆ ಕುಡಿಯುವ ನೀರಿನ ಬಗ್ಗೆ ಏನು ಮಾಡುತ್ತೀರಿ? ಇಡೀ ಆ ಭಾಗದಲ್ಲಿ ಬರುವಂತಹ ಎಲ್ಲಾ ಪಟ್ಟಣಗಳ ಬಗ್ಗೆ ಹೇಳುವುದಾದರೆ ಮಾನ್ಯ ಈಶ್ವರಪ್ಪನವರೆ, ನಾವು ಹೇಮಾವತಿಯಿಂದಲೇ ಕುಡಿಯುವ ನೀರನ್ನು ತೆಗೆದುಕೊಳ್ಳುತ್ತಿರುವುದು. ಚಿಕ್ಕನಾಯಕನಹಳ್ಳಿ, ತುರುವೇಕೆರೆ, ಕುಣಿಗಲ್ ಎಲ್ಲವೂ ಸೇರಿಕೊಂಡಹಾಗೆ, ಇದು ಯಾವುದನ್ನು ನಾವು considerationನಲ್ಲಿ ತೆಗೆದುಕೊಳ್ಳದೇ ಹೋದರೆ, ನಮಗೆ 34 ಟಿಎಂಸಿ ನೀರು ಎಂದು ಹೇಮಾವತಿಯಲ್ಲಿ ಹೇಳುತ್ತಿದ್ದಾರೆ ಮಾನ್ಯ ಪ್ರಕಾಶ್ ರವರೆ, ಅದರಲ್ಲಿ 22 ರಿಂದ 23 ಟಿಎಂಸಿ ನೀರು ಮಾತ್ರ ಇರಿಗೇಷನ್‌ಗೆ ಸಿಗುತ್ತಿದೆ. ಅದೂ ಕೂಡ ಹೇಮಾವತಿ ಡ್ಯಾಂ ತುಂಬಿದ ಮೇಲೆ. 6,55,000 ನೀವು irrigate ಮಾಡಿಕೊಳ್ಳಬಹುದು, ನಮ್ಮ ತಕರಾರು ಇಲ್ಲವೆಂದು ಎಂದು ಅವರು ವರದಿ

ಸ್ವಲ್ಪ ಕೊಟ್ಟರೆ ಅವೈಜ್ಞಾನಿಕವಾಗಿ ಹೇಳಿದ ಹಾಗೆ ಅನಿಸುತ್ತದೆ. ಇದನ್ನು ನಾವು ಪುನ: ಪುನರ್ ಪರಿಶೀಲನೆಗೆ ತೊಡಗಿಸಿಕೊಳ್ಳಬೇಕಾಗುತ್ತದೆ. ಇದರ ಜೊತೆಗೆ ಇವತ್ತು ಏನಾಗಿದೆ ಎಂದರೆ, ನಾವು ಇವತ್ತು ಬರ, ಬರ ಎಂದು ಒಂದೇ ಸಮನೆ ಬೊಬ್ಬೆ ಇಡುತ್ತಿದ್ದೇವೆ. ಬರೀ ರಾಜ್ಯ ಸರ್ಕಾರಗಳೇ drought–prone area programmeಗಳಿಗೆ ಖರ್ಚುಮಾಡುತ್ತಿಲ್ಲ. ಕೇಂದ್ರ ಸರ್ಕಾರವೂ ಕೂಡ ಸುಮ್ಮನೇ ಹಣವನ್ನು ಖರ್ಚು ಮಾಡುತ್ತಿದೆ. ಅವರೆ ವರದಿಯನ್ನು ಕೊಡುತ್ತಾರೆ, ಚಿಕ್ಕನಾಯಕನಹಳ್ಳಿ, ಶಿರಾ, ಮಧುಗಿರಿಯ ಕೆಲವು ಭಾಗ 2020ನೇ ವರ್ಷಕ್ಕೆ ಮರಳುಗಾಡಾಗುತ್ತದೆ. If surface water is not recharged they are going to be deserts. ನಾವು ಇದನ್ನು ಯಾರಿಗೆ ಹೇಳಲಿ? ನಾವೆಲ್ಲರೂ ಇಲ್ಲಿ ನಿಂತುಕೊಂಡು ಚೆನ್ನಾಗಿ ಮಾತನಾಡುತ್ತೇವೆಂದು ಅನಿಸಬಹುದು. ಚಿಕ್ಕನಾಯಕನಹಳ್ಳಿ 2020ನೇ ಇಸವಿಗೆ ಮರುಳುಗಾಡಾದರೆ ಅದರಿಂದ ಪ್ರಯೋಜನ ಏನಾಗುತ್ತದೆ? ನಾನು ನಿಮಗೆ ಅವತ್ತಿನಿಂದಲೇ ಹೇಳಿಕೊಂಡು ಬಂದಿದ್ದೇನೆ. surface water ಅನ್ನು recharge ಮಾಡದೇಹೋದರೆ Tanks ಏನಾದರೂ ತುಂಬದೇ ಹೋದರೆ, 800 ರಿಂದ 1000 ಅಡಿಗೆ ಏನು ನೀರು ಹೋಗಿದೆ ಅದನ್ನು ಏನಾದರೂ ಮೇಲ್ಮಟ್ಟಕ್ಕೆ ಸ್ವಲ್ಪ ಭೂಮಿಯ ಮೇಲೆ 150 ರಿಂದ 200 ಅಡಿಗೆ ತೆಗೆದುಕೊಳ್ಳುವಂತಹ ಸ್ಥಿತಿಯನ್ನು ನೀವು ನಿರ್ಮಾಣ ಮಾಡದೇಹೋದರೆ ಮುಂದೆ 4–5 ಜಿಲ್ಲೆಗಳು, ಈ ರಾಜ್ಯದಲ್ಲಿ ರಾಜಾಸ್ಥಾನಕ್ಕಿಂತ ಭೀಕರವಾದ ಬರಗಾಡುಗಳು ಆಗುತ್ತದೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಮಾನ್ಯ ಈಶ್ವರಪ್ಪನವರೆ, ಇದರಲ್ಲಿ ಎರಡು ಮಾತಿಲ್ಲ. ನಿಮಗೆ ಒಳ್ಳೆಯ ಅವಕಾಶವನ್ನು ಭಗವಂತನು ಕೊಟ್ಟಿದ್ದಾನೆ. ಇದಕ್ಕೆ ನೀವು ಏನಾದರೂ ಮಾಡಿ ಕೆರೆಯನ್ನು ತುಂಬಿಸಿಬಿಡಿ. ನಾವು ಇರಿಗೇಷನ್‌ಗೆ ನೀರನ್ನು ಕೇಳಿರಲಿಲ್ಲ. ನಾವು ಇರಿಗೇಷನ್‌ಗೆ ನೀರನ್ನು ಕೊಡಿ ಎಂದು ಕೇಳುವುದಿಲ್ಲ. ಕನಿಷ್ಟ Drinking water recharge ಆಗುವಷ್ಟಾದರೂ ಮಾಡಿ, ಹಾಗೂ borewell ಅನ್ನು recharge ಆದರೂ ಮಾಡಿ. ಇದನ್ನು ತಾವು ಮಾಡಬೇಕಾದರೆ tribunal ಎಲ್ಲಿಯಾದರೂ ಒಂದು ಕಡೆ consideration ಕೊಡಬೇಕಾಗುತ್ತದೆ. ನಾವು ಉದಾರವಾಗಿ 5 ಟಿಎಂಸಿ ನೀರನ್ನು ತೆಲುಗು ಗಂಗಾದಿಂದ ಚೆನ್ನೈ ಸಿಟಿಗೆ ಕೊಟ್ಟಿದ್ದೇವೆ. ನಮ್ಮ ಕೃಷ್ಣಭಾಗದಲ್ಲಿ, ಕೃಷ್ಣ ಪಾಲಿನಲ್ಲಿ 5 ಟಿಎಂಸಿ ನೀರನ್ನು ಚೆನ್ನೈ ಸಿಟಿಗೆ ಕೊಟ್ಟಿದ್ದೇವೆ ಏಕೆ? humanitation grounds ಮೇಲೆ

ಕೊಟ್ಟಿದ್ದೇವೆ. ಅಲ್ಲಿ ಕುಡಿಯುವುದಕ್ಕೆ ನೀರಿಲ್ಲವೆಂದಾಗ ನಾವು ಕೊಡುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅದನ್ನು ಏನಾದರೂ ಈ tribunal considerationನಲ್ಲಿ ತೆಗೆದುಕೊಳ್ಳಬೇಕಾಗಿತ್ತು ಎಂದು ನನ್ನ ಭಾವನೆಯಾಗಿದೆ. Judgmentನಲ್ಲಿ ಏನು ಕೊಟ್ಟಿದೆ ಅದನ್ನು ಬಹಳ ವ್ಯಾಪಕವಾಗಿ ನಾನು ಓದಿದ್ದೇನೆ. ಹಾಗಾಗಿ ಹೇಳುತ್ತಿದ್ದೇನೆ. ಅನೇಕ ಕಡೆಗಳಲ್ಲಿ tribunalನವರು ನಮಗೆ ನ್ಯಾಯವನ್ನು ಒದಗಿಸಬಹುದಾಗಿತ್ತು. ಸನ್ಮಾನ್ಯ ಈಶ್ವರಪ್ಪನವರೆ, 129 ಟಿಎಂಸಿ underground water ತಮಿಳುನಾಡಿನಲ್ಲಿ upto the level of 3 to 4 mtrs. availability ಇದೆ ಎಂದು ಹೇಳುತ್ತಿದ್ದಾರೆ. ಅದಕ್ಕಿಂತ ಆಳವಾಗಿ ನಾನು ಮಾತನಾಡುವುದಿಲ್ಲ. 3 ರಿಂದ 4 ಮೀಟರ್ ಬಾವಿಯನ್ನು ಮಾಡಿಕೊಂಡರೆ 129 ಟಿಎಂಸಿ ಸಿಗುತ್ತದೆ ಎಂದು United Nations Organisazation survey ಏನು ಹೇಳಿದೆ, ಅದರ ಮೇಲೆ ತಮಿಳುನಾಡು 47 ಟಿಎಂಸಿಯನ್ನು ತೆಗೆದುಕೊಳ್ಳುತ್ತೇವೆಂದು ಒಪ್ಪಿಕೊಂಡಿದ್ದಾರೆ. ಅದನ್ನು ಅವರು ಎಲ್ಲಿಯಾದರೂ considerationಗೆ ತೆಗೆದುಕೊಳ್ಳಬಹುದಾಗಿತ್ತು. ಬೇಡ 20 ಟಿಎಂಸಿಯನ್ನು ತೆಗೆದುಕೊಳ್ಳಬಹುದು ಎಂದು ಅವರೇ ಏನು ಒಂದು ಕಡೆಯಲ್ಲಿ, ನಮ್ಮ tribunal members ಮಾತನಾಡಿದ್ದಾರೆ. Final decision ಗೆ ಬರಬೇಕಾದಾಗ, orderನ್ನು ಪಾಸ್ ಮಾಡಬೇಕಾದರೆ ಆ 20 ಟಿಎಂಸಿ ನೀರು ಅವರ ಷೇರು ಎಂದು ಒಪ್ಪಿಕೊಳ್ಳಬೇಕಾಗಿತ್ತು. ಇದರ ಬಗ್ಗೆ ಅವರು ಮಾತನಾಡಿದ್ದಾರೆ. Operative portion ಅನ್ನು ನಾನು ಓದಿದ್ದೇನೆ. Tamil Nadu can make use of 20 tmc feet of underground water. ಅದರೆ ಅವರು ಏನು ಹೇಳುವುದು, ನನಗೆ ಎಲ್ಲೂ standard fix ಆಗಿರುವುದು ಗೊತ್ತಿಲ್ಲ. ನನಗೆ ಎಲ್ಲೂ ಲಾಜಿಕ್ ಇಲ್ಲ; underground water ಅನ್ನು mention ಮಾಡಿ ಇಷ್ಟೇ ಸಿಗುತ್ತದೆ, ಅಷ್ಟೆ ಸಿಗುತ್ತದೆಂದು ಎಂದು ಹೇಳಲು ಗೊತ್ತಿಲ್ಲ. ಹಾಗಾಗಿ ನಾವು underground water issue ಅನ್ನು complete ಆಗಿ drop ಮಾಡಿ and we are not going to dig this issue at all ಎಂದು ಹೇಳಿದ್ದಾರೆ. ಇದು ನಮಗೆ ದುರ್ದೈವ. ಅವರು ಏನಾದರೂ underground waterನ್ನು estimate ಮಾಡಿ ನೀರು ತೆಗೆದುಕೊಂಡಿದ್ದರೆ ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ 4 ತಿಂಗಳಲ್ಲಿ ನೀವು ಏನು stagger ಮಾಡಿ ಕೆಆರ್‌ಎಸ್ ನಿಂದ ಅಥವಾ ನಮ್ಮ

ರಾಜ್ಯದಿಂದ ನೀರು ಬಿಡುತ್ತಿದ್ದೆವು, ಅ ತಿಂಗಳಲ್ಲಿ ಪಾಸು ಮಾಡುವುದಕ್ಕೆ ಆಗಿದ್ದರೆ, ನೀವು ಜೂನ್‌ನಲ್ಲಿ ಏನು, 10 ಟಿಎಂಸಿ ಕೊಡಿ, ಜುಲೈನಲ್ಲಿ 15–20 ಟಿಎಂಸಿ ನೀರು ಕೊಡಿ, ಸೆಪ್ಟೆಂಬರ್ ನಲ್ಲಿ 30–33 ಟಿಎಂಸಿ ನೀರನ್ನು ಕೊಡಿ ಎಂದು ಹೇಳಿದ್ದಾರೆ. ಆ ಅವಧಿಯಲ್ಲಿ ನಮಗೆ ನೀವು ದಯಮಾಡಿ ನೀರನ್ನು ಉಳಿಸಿ ಬಿಟ್ಟಿದ್ದರೆ ಕರ್ನಾಟಕ್ಕೆ ಇಷ್ಟು ದೊಡ್ಡ ದುರಂತವಾಗುತ್ತಿರಲಿಲ್ಲ. ಏಕೆ? ಜೂನ್ ತಿಂಗಳಲ್ಲಿ ಅವರು ಬೆಳೆಯನ್ನು ಹಾಕಿರುವುದಿಲ್ಲ. ಅಲ್ಲಿ ಅವರು ನಾಟಿ ಅಥವಾ ಒಟ್ಟಲು ತುಂಬಿಸುತ್ತಿರುತ್ತಾರೆ. ಅವರು actual ಆಗಿ ಅದನ್ನು ಹೊತ್ತುಕೊಂಡು ಬಂದು ಒಂದು ತಿಂಗಳಲ್ಲಿ ನಾಟಿಯನ್ನು ಹಾಕುತ್ತಾರೆ. ಆ ಒಂದು–ಒಂದೂವರೆ ತಿಂಗಳಲ್ಲಿ ನಾವು ಏನು ನೀರನ್ನು ಬಿಡುತ್ತೇವೆ, ಆ ನೀರು ತಮಿಳುನಾಡಿಗೆ ಅಗತ್ಯವೇ ಇರಲಿಲ್ಲ. ಆ underground water ಸಾಕಾಗುತ್ತಿತ್ತು. ಅವರು ಅದನ್ನು ಬಳಸಿಕೊಳ್ಳಬಹುದಾಗಿತ್ತು. ಅದನ್ನು ಅವರು tribunalನಲ್ಲಿ ಹೇಳಬಹುದಾಗಿತ್ತು. ಹಾಗೇನಾದರೂ ಮಾಡಬಹುದಾಗಿತ್ತು. ನಮ್ಮ ಮುಂದಿರುವ ಪ್ರಶ್ನೆ, ಈ ಮೂರು ತಿಂಗಳನ್ನು ಏನು ಫಿಕ್ಸ್ ಮಾಡಿದ್ದರೆ ನಿಮ್ಮದು stagger ಮಾಡಿ releases to Tamil Nadu water ಅನ್ನು, ಆ ಕಡೆ ತಾವು stress ಮಾಡಬೇಕಾಗಿದೆ. ಆ ಕಡೆ ತಾವು ಏನಾದರೂ ಆ 3 ತಿಂಗಳಲ್ಲಿ ಒಂದು ಅರ್ಧಭಾಗ ನೀರನ್ನು ಕರ್ನಾಟಕದ ಡ್ಯಾಂಗಳಲ್ಲಿ ಉಳಿಸಿಕೊಳ್ಳುವಂತಹ ಸ್ಥಿತಿಯನ್ನು ನಿರ್ಮಾಣ ಮಾಡಬೇಕಾಗಿದೆ. ಏಕೆ? ನಮ್ಮ ಮಳೆಗಾಲ ಜೂನ್‌ನಿಂದ ಸೆಪ್ಟೆಂಬರ್ ತಿಂಗಳಲ್ಲಿ ಮುಗಿದುಹೋಗುತ್ತದೆ. ತಮಿಳುನಾಡಿನಲ್ಲಿ ಮಳೆಗಾಲ ಸೆಪ್ಟೆಂಬರ್‌ನಿಂದ ಆರಂಭವಾಗುತ್ತದೆ. ನಮ್ಮ ಮಳೆಗಾಲ ಬಂದು, ನೀರು ತುಂಬಿ ಆದಮೇಲೆ ಏನು ನೀರು ಬರುತ್ತದೆ, ಆ ನೀರನ್ನು ನಾವು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಆ ನೀರು ತಮಿಳುನಾಡಿಗೆ ಹರಿಯಲೇಬೇಕು, ಅದು ಹರಿದುಹೋಗಲೆ, ನಾವೇನು ಅಡ್ಡಿ ಮಾಡುವುದಕ್ಕೆ ಬರುವುದಿಲ್ಲ. August–Septemberನಲ್ಲಿ ನೀರು ಹೋಗುತ್ತದೆ. ಅದನ್ನು ಯಾರೂ ಕೂಡ ತಡೆಯುವುದಕ್ಕಾಗುವುದಿಲ್ಲ. ನಾವು ನೀರನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಆ ನೀರು ಹೋಗಲೇಬೇಕು. ತಾವು ಮಾಡಬೇಕಾಗಿರುವ ಕರ್ತವ್ಯ ಜೂನ್, ಜುಲೈ ತಿಂಗಳಲ್ಲಿ, ಹೇಗಾದರೂ ಮಾಡಿ ನಮ್ಮ ನೀರನ್ನು ಅವರು ಇಷ್ಟೆ ರಿಲೀಸ್ ಮಾಡಿ ಎಂದು ಅದೇಶವನ್ನು ಕೊಟ್ಟಿದ್ದಾರೆ, ಅದನ್ನು ತಾವು ಸ್ವಲ್ಪ ಮಟ್ಟಿಗೆ ಅಮೆಂಡ್ ಮಾಡಿಸಬೇಕಾಗುತ್ತದೆ. ಅದರಲ್ಲಿ ಅರ್ಧವನ್ನಾದರೂ ಕೂಡ

ನಮಗೆ ಉಳಿಸಿಕೊಳ್ಳಬೇಕಾಗುತ್ತದೆ. ಇನ್ನು ಎರಡನೆಯದಾಗಿ 10 ಟಿಎಂಸಿ ನೀರನ್ನು enviornmental & ecological balanceಗೆ ಇಡುತ್ತೇವೆಂದು ಏನು ಹೇಳಿದ್ದಾರೆ. ನಮ್ಮ ನೀರನ್ನು ಸ್ವಲ್ಪ ತಮಿಳುನಾಡು enviornmentನಲ್ಲಿ balance ಮಾಡುತ್ತೇವೆಂದು ಹೇಳುವುದರಲ್ಲಿ ಅರ್ಥವಿಲ್ಲ. ನೀರು ನಾವು ಕೊಡುವುದು, ಅವರ ರಿವರ್‌ನಲ್ಲಿ ನೀರು ಮೆಂಟೇನ್ ಮಾಡಿಬಿಟ್ಟು Ecological and Environmental balance ಮಾಡುತ್ತೇವೆಂದು ಹೇಳುವುದರಲ್ಲಿ ಅರ್ಥವಿಲ್ಲ, ಇಲ್ಲಿಯೂ ಹಕ್ಕಿ ಪಕ್ಷಿಗಳಿವೆ, ಇಲ್ಲಿಯೂ humidity maintain ಆಗಬೇಕಾಗಿದೆ, ಇಲ್ಲಿಯೂ ಸಹ ತಂಪಿರಬೇಕಾಗುತ್ತದೆ, ಅವರು ಭಾರಿ ತಂಪಾಗಿರಬೇಕೆಂದರೆ ಅವರ ಪಾತ್ರದಲ್ಲಿರುವ ಅವರ ಭಾಗದಲ್ಲಿರುವ ನೀರನ್ನು ಬಿಟ್ಟುಕೊಂಡು ಮಾಡಲಿ ಎಂದು ಹೇಳಬಹುದಾಗಿತ್ತು, ಮತ್ತು escapes ನ 4 ಟಿ.ಎಂ.ಸಿ. ನೀರನ್ನು ನೀವು ಒಪ್ಪಿಕೊಂಡಿದ್ದೀರಿ, ಅದು ಸಮುದ್ರಕ್ಕೆ ಹೋಗಬಹುದು, ಆ ಕಡೆ ಈ ಕಡೆ ದಡ ಒಡೆದು ಹೋಗಬಹುದು ಎಂದು ಏನು ನೀವು ಒಪ್ಪಿಕೊಂಡಿದ್ದೀರಿ, ಆ 4 ಟಿ.ಎಂ.ಸಿ. ನೀರನ್ನು ಅವರಿಗೆ ಕೊಟ್ಟುಬಿಟ್ಟು ನಮಗೆ ನೀರಿನ ಜವಾಬ್ದಾರಿಯನ್ನು ಕೊಡುವ ಅಗತ್ಯವಿರಲಿಲ್ಲ. ನಾವೇ 4.ಟಿ.ಎಂ.ಸಿ. ನೀರನ್ನು ಅವರಿಗೆ ಕೊಡಬೇಕು ಎಂದು ಹೇಳುವ ಅಗತ್ಯವಿರಲಿಲ್ಲ. ಈ ಕಡೆ ಹೆಚ್ಚು ಒತ್ತನ್ನು ನಾವು ಕೊಡಬೇಕಾಗಿದೆ ಮತ್ತು ನಮ್ಮ ಮಾನ್ಯ ವಾಟಾಳ್ ನಾಗರಾಜ್‌ರವರ ಕ್ಷೇತ್ರದ ಕಬಿನಿಯದೇನು 21 ಟಿ.ಎಂ.ಸಿ. ನೀರಿದೆ, ತಾವು ಅದಕ್ಕೆ fight ಮಾಡಲೇಬೇಕು. ಕಬಿನಿ ಡ್ಯಾಂ ಕಟ್ಟಿರುವವರು ನಾವು. ನೀರಿಗೆ ಯಜಮಾನರು ಕೇರಳದವರು, ಅವರಿಗೆ infrastructure ಇಲ್ಲ, ಪ್ರಾಜೆಕ್ಟ್‌ಗಳನ್ನಾಗಲಿ, ಗದ್ದೆಗಳನ್ನಾಗಲಿ ಮಾಡುವ ಹಾಗಿಲ್ಲ. ಅಲ್ಲಿಯವರೆಗೆ ತಮಿಳುನಾಡಿನವರು ನೀರನ್ನು ತೆಗೆದುಕೊಳ್ಳಿ ಎನ್ನುವುದು ವೈಜ್ಞಾನಿಕವೆಂದು ನಮಗೆ ಅನ್ನಿಸುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಅದು ಯಾವ ನೀತಿಯೆಂದು ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ:- ಇದು ಮಾತ್ರ ನಮಗೆ ವೈಜ್ಞಾನಿಕ ಎಂದು ಅನ್ನಿಸುವುದಿಲ್ಲ. ಕೇರಳಕ್ಕೆ ನೀರು ಕೊಡಿ ಎಂದು ಹೇಳಲಿ, ಕೇರಳಕ್ಕೆ ಧರ್ಮವಾಗಿ ಕೊಡಬೇಕು. ಏಕೆಂದರೆ ಅವರಿಗೆ ಅಲಾಟ್ ಆಗಿರುವುದೇ 30.

ಟಿ.ಎಂ.ಸಿ. ನೀರು. 21.ಟಿ.ಎಂ.ಸಿ. ಒಂದು ಕಡೆ, 6 ಟಿ.ಎಂ.ಸಿ. ಒಂದು ಕಡೆ. 3.ಟಿ.ಎಂ.ಸಿ. ಒಂದು ಕಡೆ. 21 ಟಿ.ಎಂ.ಸಿ. ಕಬಿನಿಯಿಂದ, 6 ಟಿ.ಎಂ.ಸಿ. ನೀರು ಭವಾನಿಯಿಂದ, 3 ಟಿ.ಎಂ.ಸಿ. ಅಮರಾವತಿ ನದಿಯಿಂದ ಅವರಿಗೆ ಅಲಾಟ್ ಮಾಡಿದ್ದಾರೆ. ಹಾಗಾಗಿ ಕೇರಳಕ್ಕೆ ತಕರಾರು ಮಾಡುವುದು ನಮಗೂ ಸಹ ಸರಿಯೆನ್ನಿಸುವುದಿಲ್ಲ ಆದರೆ ಇವರು ಒಪ್ಪುತ್ತಾರೆ, ಕೇರಳಕ್ಕೆ infrastructure ಇಲ್ಲ, ಕೇರಳದವರು ಡ್ಯಾಮ್ ಮಾಡಲಿಲ್ಲ, ಕೇರಳದಲ್ಲಿ ಇನ್ನೂ ಬಹಳ ವಿಷಯವೆಂದರೆ, ಕೇರಳದವರಿಗೆ ಇವರು ಅಫಿಡವಿಟ್ ಹಾಕಿಸಿಕೊಂಡಿದ್ದಾರೆ. ನಿಮ್ಮ ಟ್ರಿಬ್ಯುನಲ್‌ನವರು ಕೇರಳ ಅಡ್ವೋಕೇಟ್ಸ್‌ಗೆ ಕೌಂಟರ್ ಮಾಡಿದ್ದಾರೆ. ಏನು ಮಾಡಿದ್ದಾರೆಂದರೆ Since 20 years, paddy growing area in Kerala is reduced by 50%. It is on the basis of socio–economic survey report of Kerala State. ಕೇರಳ ರಾಜ್ಯದಲ್ಲಿ ಕಳೆದ 20 ವರ್ಷಗಳಲ್ಲಿ ಭತ್ತ ಬೆಳೆಯಲು ಇದ್ದ ಜಾಗ ಅರ್ಧದಷ್ಟು ಕಡಿಮೆಯಾಗಿದೆ. ಸ್ಪೈಸಸ್ ಬೆಳೆಯುತ್ತಿದ್ದೀರಿ, ಅಡಿಕೆ ಬೆಳೆಯುತ್ತಿದ್ದೀರಿ, ಗಾರ್ಡನ್‌ಗೆ ಹೋಗಿದ್ದೀರಿ, ನಿಮಗೇತಕ್ಕೆ ಇಷ್ಟು ನೀರು ಎಂದು ಕೇಳಿದ್ದಾರೆ. ಅವರು ಮಾತೆಲ್ಲಾ ಚೆನ್ನಾಗಿ ಆಡಿದ್ದಾರೆ. ಅದರಲ್ಲಿ ಏನೂ ಮಾತಿಲ್ಲ, ರಬ್ಬರ್ ಬೆಳೆಯುತ್ತಿದ್ದೀರಿ, you yourself have admitted that Paddy ನಮಗೆ work out ಆಗುವುದಿಲ್ಲವೆಂದು, ಹಾಗಾಗಿ ಈಗ ಏತಕ್ಕೆ ಬಂದಿದ್ದೀರಿ ಎಂದು ಕೇಳಿದ್ದಾರೆ. ಆದರೂ ನೀರನ್ನು allot ಮಾಡುತ್ತಾರೆ ಮತ್ತು ಅವರಿಗೆ ಹೇಳುತ್ತಾರೆ, ನಿಮಗೆ ಗೊತ್ತಿರುವ ಹಾಗೆ west coast flowing water ಅನ್ನು ನಾನು allot ಮಾಡುವುದಿಲ್ಲ. ನಿಮ್ಮ Hydro electric project ಅನ್ನು allow ಮಾಡುವುದಿಲ್ಲವೆಂದು ಹೇಳುತ್ತಾರೆ. ಕಾರಣ ಚೆನ್ನಾಗಿ ಕೊಡುತ್ತಾರೆ, "Electric generation of power can be made by many means, but Irrigation can be done only by water." ಇದೇ ಪದವನ್ನು ಅವರು ಬಳಸುತ್ತಾರೆ. Irrigation can be done only by water. Power generation ಅನ್ನು ನೀವು ಬೇಕು ಬೇಕಾದ ಮೂಲಗಳಿಂದ ಮಾಡಬಹುದು ಎಂದು ಹೇಳಿದ್ದಾರೆ. ಅಷ್ಟೊಂದು ಒಳ್ಳೆಯ ಮಾತನ್ನಾಡಿ, ಕೇರಳಕ್ಕೆ ನೀರುಬಿಡುವುದು, ಡ್ಯಾಮ್ ನಾವು ಕಟ್ಟುವುದು, ಕೇರಳದವರು ಮಾಡುವವರೆಗೆ ತಮಿಳುನಾಡಿನವರು ಅಲ್ಲಿಯವರೆಗೆ ನೀರು ತೆಗೆದುಕೊಳ್ಳುತ್ತಿರಲಿ ಎಂದು ಹೇಳುವುದು ವಾಸ್ತವವಾದ ತೀರ್ಮಾನವಲ್ಲ.

ಮೂರನೆಯದಾಗಿ ಡ್ಯಾಮ್ ಅನ್ನು ನಾವು ಕರ್ನಾಟಕದವರು ಕಟ್ಟಿರುವುದು, ಎಂಥಾ ದುಸ್ಥಿತಿಯಲ್ಲಿ ಕಟ್ಟಿದ್ದೇವೆಂದರೆ ಮಾನ್ಯ ಪ್ರಕಾಶ್‌ರವರೆ, ನಮಗೆ ಪ್ಲಾನಿಂಗ್ ಕಮಿಷನ್‌ನ ಅಪ್ರೂವಲ್ ಇಲ್ಲದಿದ್ದರೂ ಡ್ಯಾಮ್ ಮಾಡಿದ್ದೇವೆ. ನಮ್ಮ ಡ್ಯಾಮ್ ಮೇಲೆ ಅಥಾರಿಟಿ ಮಾಡಿಬಿಟ್ಟು ಇವತ್ತು ನೀವು ಕುಳಿತುಕೊಳ್ಳಿ ಎಂದು ಹೇಳಲಿಕ್ಕೆ ಬಹುಶ: ಯಾವುದೇ ರಾಜ್ಯಾಂಗ ದಲ್ಲಿ ಇವರಿಗೆ ಅವಕಾಶ ಇರಲಿಲ್ಲ. Dams are built by Karnataka alone. ನಮಗೆ ಯಾವುದೇ Central assistance ಸಿಗಲಿಲ್ಲ. ಡ್ಯಾಮ್ ಮಾಡಲಿಕ್ಕೆ ಕ್ಲಿಯರೆನ್ಸ್ ಇರಲಿಲ್ಲ ಒರಟು ಆಟ ಆಡಿಕೊಂಡು ಕಟ್ಟಿ ಇವತ್ತು ನಾವು ಉಳಿಸಿಕೊಂಡಿದ್ದೇವೆ. ಆ ಡ್ಯಾಮ್ ಮೇಲೆ ಇವತ್ತು ಅಥಾರಿಟಿ ಮಾಡುವುದಂತೆ. ಆ ಅಥಾರಿಟಿಯಲ್ಲಿ ನಿಂತುಕೊಂಡು ರೆಗ್ಯುಲೇಟ್ ಮಾಡುವುದಂತೆ. ಇದು ಸಾಧ್ಯವಿಲ್ಲದ ಮಾತು, ಇದನ್ನು ನಾವು ಒಪ್ಪಲಿಕ್ಕಾಗುವುದಿಲ್ಲ. ಇದನ್ನು ನೀವು ನಿಮ್ಮ ವಕೀಲರ ಕಡೆಯಿಂದ ಹೇಳಿಸಬೇಕು. ಈ ಬಿಳಿಗುಂಡ್ಲು, ಮೆಟ್ಟೂರು, ಇದರಲ್ಲಿ ನಮ್ಮ ಟ್ರಿಬ್ಯುನಲ್‌ನವರನ್ನು ದೂರಬೇಕೆಂದಿಲ್ಲ. Of course, ನಮ್ಮ ಅಡ್ವೋಕೇಟ್ಸ್ ನಾವು ಮೆಟ್ಟೂರಿನಲ್ಲಿ water ಅನ್ನು measure ಮಾಡಿ ಕೊಡಲಿಕ್ಕೆ ಆಗುವುದಿಲ್ಲ. ಬಿಳಿಗುಂಡ್ಲೂವಿನಲ್ಲಿ fix ಮಾಡಿ ಅಥವಾ ನಮ್ಮ border ನಲ್ಲಿ fix ಮಾಡಿ ಎಂದು ಮಾನ್ಯ ಈಶ್ವರಪ್ಪನವರು ಕೇಳಿಕೊಂಡು ಬಿಟ್ಟಿದ್ದಾರೆ. So, on that case, ನಿಮಗೆ ಇಲ್ಲೇ fix ಮಾಡಿ ಎಂದು ಕೊಟ್ಟರು. 205 ಟಿ.ಎಂ.ಸಿ. ನೀರು ಏನು ಹೋಗುತ್ತಿತ್ತು, ಅದು ಇಡೀ ಟ್ರಿಬ್ಯುನಲ್‌ಗೆ, assessors ಗೆ ಗೊತ್ತಿತ್ತು. ಎಲ್ಲರಿಗೂ ಗೊತ್ತಿತ್ತು, ಬಿಳಿಗುಂಡ್ಲುವಿನಿಂದ ಆಚೆ 19 ಕಿ.ಮೀ. ನಲ್ಲಿ 25 ಟಿ.ಎಂ.ಸಿ. ನೀರು ತಮಿಳುನಾಡಿಗೆ ಅಲ್ಲಿಂದ ಹರಿದು ಹೋಗುವುದು ನಮಗೆ ಗೊತ್ತಿತ್ತು. Another 25 T.M.C is added ಎಂದು ನಮಗೆ ಗೊತ್ತಿತ್ತು. ವಾಸ್ತವವಾಗಿ ನಾವು 180 ಟಿ.ಎಂ.ಸಿ. ನೀರನ್ನು ಮಾತ್ರ ಬಿಡುತ್ತಿದ್ದುದು ಕರ್ನಾಟಕದವರು ಬಿಳಿಗುಂಡ್ಲುವಿನ ಹತ್ತಿರ measure ಮಾಡಿ ಬಿಟ್ಟಿರುವುದು 180 ಟಿ.ಎಂ.ಸಿ.ನೀರು ಮಾತ. ಆ 180 ಟಿ.ಎಂ.ಸಿ.ನೀರನ್ನು ಇವತ್ತು 192 + 10=212 ಟಿ.ಎಂ.ಸಿ.ಗೆ ತೆಗೆದುಕೊಂಡು ಹೋಗಿರುವುದು ಅವೈಜ್ಞಾನಿಕ. Assessors ಹೇಳಿರುವುದಕ್ಕಿಂತ ಕಡಿಮೆ ಆಗಬಹುದು ಎಂದು ನಾವು ಆಸೆ ಇಟ್ಟುಕೊಂಡು, ಟ್ರಿಬ್ಯುನಲ್ ಒಳ್ಳೆಯ ಜಡ್ಜ್‌ಮೆಂಟ್ ಕೊಡುತ್ತದೆಂದರೆ ಅದಕ್ಕಿಂತ 12–13 ಟಿ.ಎಂ.ಸಿ. ಜಾಸ್ತಿ ಕೊಡುವ ಸ್ಥಿತಿಯೇನು ನಿರ್ಮಾಣವಾಗಿದೆ, ಇದನ್ನು ತಾವು ಎಲ್ಲಾದರೂ ನಮ್ಮ ಲಾಯರ್‌ಗಳ

ಮೂಲಕ ಪ್ರತಿಭಟಿಸಲೇಬೇಕು. ನನಗೆ ಅನ್ನಿಸುತ್ತದೆ ಅಧ್ಯಕ್ಷರೇ, We have a case for clarification and seeking guidance for implementation. ಇದರಲ್ಲಿ ಅನುಮಾನವೇ ಇಲ್ಲ ಮಾನ್ಯ ಪ್ರಕಾಶ್‌ರವರೇ. ನೀವು ಸೆಕ್ಷನ್ 5(3)ರ ಕೆಳಗೆ ಹೋಗುತ್ತೀರಾ? IXth ಷೆಡ್ಯೂಲ್‌ನಲ್ಲಿ ರೆವ್ಯೂ ಕೇಳುವಿರಾ? ನಮಗಂತೂ ಅವಕಾಶವಿದೆ, ನಾವು ಅಂದು ಮಾತನಾಡುವಾಗ ಹೇಳಿದಿರಲ್ಲ, ನಿಮ್ಮ "Cauvery tribunal has taken a decision. The clarification is nothing but a review" ಎಂದು ಆ Tribunal decision ಕೂಡ ಇವತ್ತು ಆಗಿಬಿಟ್ಟಿದೆ. ನಾವೇನು ರಿವ್ಯೂ ಮಾಡಲಿಕ್ಕಾಗುವುದಿಲ್ಲ. ಕೇಳುವುದಕ್ಕಾಗುವುದಿಲ್ಲವೆಂದು ಅಂದುಕೊಂಡಿದ್ದೇವೆ, Krishna Tribunal has taken a decision that it can be reviewed ಎಂದು. ಇಲ್ಲದಿದ್ದರೆ ಅಲ್ಲಿ ಕರ್ನಾಟಕಕ್ಕೆ 750 ಟಿ.ಎಂ.ಸಿ. ನೀರು ಸಿಗುತ್ತಿರಲಿಲ್ಲ. 500 ಚಿಲ್ಲರೆ ಟಿ.ಎಂ.ಸಿ. ನೀರಿನಲ್ಲಿ ನಾವು ಕುಳಿತಿರಬೇಕಾಗಿತ್ತು. ಕೃಷ್ಣಾದಲ್ಲೇನು ನಮಗೆ ನ್ಯಾಯಾಧಿಕರಣ ಮಾಡಿದವರು ನೀವು ರೆವ್ಯೂ ಮಾಡಬಹುದೆಂದು ಒಪ್ಪಿಕೊಂಡಿದ್ದಾರೆ, ಆ ಆಧಾರದ ಕೆಳಗೆ ತಾವು ಅಲ್ಲಿ ಇವತ್ತು ಹೋಗಬೇಕಾಗಿದೆ. ನೀವು ನೀರನ್ನು ಕೇಳಬೇಕಾಗಿದೆ, ಇದರೊಂದಿಗೆ ನಮಗೆ ಇನ್ನೊಂದು 40, 50, 60 ಟಿ.ಎಂ.ಸಿ. ನೀರನ್ನು ಹೆಚ್ಚಿಗೆ ಕೇಳಲಿಕ್ಕೆ ಎಲ್ಲಾ ರೀತಿಯ ಅರ್ಹತೆಯಿದೆ. ನಾವು ಒಂದೇ ಬೆಳೆಗೆ ನೀರು ಕೇಳುತ್ತಿದ್ದೇವೆ, ನಾವು production of garden cropsಗಾಗಿ ನೀರು ಕೇಳುತ್ತಿದ್ದೇವೆ. ನಾವು semi dry cropsಗಾಗಿ ನೀರು ಕೇಳುತ್ತಿದ್ದೇವೆ. ಇಡೀ ಇಂಡಿಯಾ ದೇಶ federal set upನಲ್ಲಿ ಒಂದು ಎಂದು ತಿಳಿದುಕೊಂಡಾಗ, ಇಡೀ ಇಂಡಿಯಾ ದೇಶದ ರೈತರಿಗೆ ರಕ್ಷಣೆ ಕೊಡಲಿಕ್ಕೆ ಕೇಂದ್ರ ಸರ್ಕಾರ ಮತ್ತು ಅದರ ಕೆಳಗೆ ರಚಿತವಾದ ಟ್ರಿಬ್ಯುನಲ್, ಕೋರ್ಟ್ ಸಹಾಯ ಮಾಡಬೇಕಾಗುತ್ತದೆ. ಕರ್ನಾಟಕಕ್ಕೆ ಇವತ್ತು protection ಕೊಡಿ ಎಂದರೆ, ಕನಿಷ್ಠ ಒಂದು ಬೆಳೆಯನ್ನು ನಾವು drought prone areaದಲ್ಲಿ ಬೆಳೆಯಲಿಕ್ಕೆ ಅವಕಾಶ ಕೊಡಬೇಕೆಂದಾಗ, ಅವರೇನು 18 ಚಿಲ್ಲರೆ ಲಕ್ಷದಷ್ಟು ಎಕರೆಯಷ್ಟು ಮಾಡಿಕೊಳ್ಳಬಹುದೆಂದು ಹೇಳಿದ್ದಾರೆ ಅದರ ಮೇಲೆ ಒಂದು ಮೂರ್ನಾಲ್ಕು ಲಕ್ಷ ಎಕರೆಯಷ್ಟು ಮಾಡಬಹುದಾಗಿತ್ತು ಅಷ್ಟೇ. Maximum Karnataka can go up to 23 to 24 lakh acres. ಅದಕ್ಕಿಂತ ಹೆಚ್ಚಿಗೆ ಮಾಡಲಿಕ್ಕೆ ನಮಗೆ ಕಾವೇರಿಯಲ್ಲಿ ಅವಕಾಶವಿರಲಿಲ್ಲ, ನಾವು ಎರಡನೇ ಬೆಳೆ, ಮೂರನೇ

ಬೆಳೆ ಕೇಳಲಿಕ್ಕೆ ಹೋದವರು ಅಲ್ಲ, ಎರಡನೇ ಬೆಳೆಯನ್ನು 1924ಕ್ಕಿಂತ ಹಿಂದುಗಡೆ ಅಚ್ಚುಕಟ್ಟನ್ನು ಡಿಸೈಡ್ ಮಾಡಿದಾಗ, ಬಹುಶ: ನಮ್ಮದು ಒಂದು ಲಕ್ಷ ಅಥವಾ ಒಂದು ಲಕ್ಷ ಐದು ಸಾವಿರ ಎಕರೆ ನಮ್ಮದಿತ್ತು ಎಂದು ನಾವು ಒಪ್ಪಿಕೊಂಡಿರುತ್ತಿದ್ದೆವು. ಕರ್ನಾಟಕ ಒಂದು ಲಕ್ಷ ಐದು ಸಾವಿರ ಎಕರೆಯಲ್ಲಿದೆ, ತಮಿಳುನಾಡು 15.50 ಲಕ್ಷ ಎಕರೆಯಲ್ಲಿದೆಯೆಂದು ವಿಶ್ವೇಶ್ವರಯ್ಯನವರು ಅವತ್ತು ಅಫಿಡವಿಟ್ ಹಾಕಿದ್ದಾರೆ, ಅದರ ಮೇಲೆ ಏನು 30% enhancement ಕೊಟ್ಟಿರಿ, ಅಲ್ಲಿಂದಲೇ ನಮಗೆ ಅನ್ಯಾಯವಾಗಿದೆ. ಇವತ್ತು ನೀವು ಮಾಡಬೇಕಾಗಿರುವುದು, ಒಂದು, 21 ಟಿ.ಎಂ.ಸಿ.ನೀರು ಕಬಿನಿಯಿಂದ ಬಿಡುವುದು. ತಮಿಳುನಾಡಿನ underground water capability ಮತ್ತೆ 10+4 ಟಿ.ಎಂ.ಸಿ. 10 ಟಿ.ಎಂ.ಸಿ. Ecological and Environmental balanceಗೆ ಇಟ್ಟಿರುವುದು, 4 ಟಿ.ಎಂ.ಸಿ. escapes ಎಂದು ಇಟ್ಟಿರುವುದು. ಇದರ ಬಗ್ಗೆ ತಾವು ಮೊದಲೇ ಅಪೀಲ್ ಹಾಕಿ ಆ ನೀರು ನಮ್ಮದು, ಆ ನೀರಿನ ಮೇಲಿನ ಹಕ್ಕು ನಮ್ಮದು, ಆ ನೀರು ನಮಗೆ ಕೊಡಿ ಎಂದು ಕೇಳಬೇಕಾಗಿತ್ತು. ಎರಡನೆಯದು, ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, staggering ಅನ್ನು change ಮಾಡಿಸಬೇಕಾಗುತ್ತದೆ, ಜೂನ್, ಜುಲೈ, ಆಗಸ್ಟ್‌ನಲ್ಲಿ ನೀರು ಬಿಡಿ ಎಂದು ಅವರು ಹೇಳಿದ್ದಾರೆ, ಅದನ್ನು ಒಂದು, ಎರಡು ತಿಂಗಳು ಮುಂದಕ್ಕೆ ಹಾಕಿಸಿಕೊಂಡು ಹೋದರೆ Karnataka will be having some advantage. ಮೂರನೆಯದು, ಚಾಮರಾಜನಗರ ಮತ್ತು ತುಮಕೂರು ಏನಿದೆ, ವರುಣಾ ನಾಲೆಯಿಂದ ಹಿಡಿದು ಕಬಿನಿ ನಾಲೆಯವರೆಗೆ ಆ ಭಾಗ, ಹೇಮಾವತಿ ನಾಲೆಯಿರುವ ಈ ಭಾಗ, ಇವು development ಮಾಡಬೇಕಾಗಿರುವ ಅಚ್ಚುಕಟ್ಟನ್ನು 100% ಟ್ರಿಬ್ಯುನಲ್ ಮುಂದೆ ಹೇಳಬೇಕಾಗಿದೆ. 18 ಲಕ್ಷ ಚಿಲ್ಲರೆಯಲ್ಲಿ ನಮ್ಮ ತುಮಕೂರು ಜಿಲ್ಲೆಯ ಹೇಮಾವತಿಯದು 7 ಲಕ್ಷ, ಕಬಿನಿಯದು 1 ಚಿಲ್ಲರೆ ಲಕ್ಷ, ಎಕರೆ ಪ್ರಮುಖವಾಗಿ ಹಿಟ್ ಆಗುತ್ತಿರುವಂಥ ಏರಿಯಾ. ಈ ಟ್ರಿಬ್ಯುನಲ್‌ನ ತೀರ್ಮಾನದಿಂದ ನಾವು permanent ಆಗಿ ಅವಕಾಶ ವಂಚಿತರಾಗಿಬಿಡುತ್ತೇವೆ. ನಮಗೆ ನೀವು ರಕ್ಷಣೆ ಕೊಡಲಿಕ್ಕೆ ಮುಂದೆ ಬರಬೇಕು. ಕೇಸನ್ನು ಹಾಕಲೇಬೇಕು. ಟ್ರಿಬ್ಯುನಲ್ ಮುಂದೆ ನಾವು ವಾದ ಮಾಡಬೇಕಾಗಿದೆ. ನಾವು ಇನ್ನೊಬ್ಬರನ್ನು ದೂಷಿಸುತ್ತಾ ಕುಳಿತುಕೊಳ್ಳುವುದು ನಮ್ಮ ಕರ್ತವ್ಯವಲ್ಲ. ಅವರವರದ್ದು ಅವರು ಕೇಳಿಕೊಳ್ಳುತ್ತಾರೆ. 555–566

ಟಿ.ಎಂ.ಸಿ. ನೀರಿಗೆ 419+ ಇನ್ನೊಂದು 10, 20, ಹೆಚ್ಚು ಕಡಿಮೆ 420–430 ಟಿ.ಎಂ.ಸಿ.ನೀರನ್ನು ತೆಗೆದುಕೊಂಡಿದ್ದಾರೆ. ನಾವು 53% ನೀರನ್ನು ಕಾಂಟ್ರಿಬ್ಯೂಟ್ ಮಾಡುತ್ತಿದ್ದೇವೆ. 33–34% ನಮಗೆ ಷೇರು ಕೊಟ್ಟಿದ್ದಾರೆ. ಅವರು 30% ನೀರನ್ನು ಕಾಂಟ್ರಿಬ್ಯೂಟ್ ಮಾಡಿ more than 50% water share ತೆಗೆದುಕೊಂಡಿದ್ದಾರೆ. ಹಾಗಾಗಿ ಇದು ವೈಜ್ಞಾನಿಕವೆಂದು ನಮಗೆ ಅನ್ನಿಸುವುದಿಲ್ಲ. ಇದನ್ನು ನಾವೆಲ್ಲರೂ ಚರ್ಚೆ ಮಾಡಬೇಕು. ನೀವು ಹೇಳಿದ್ದೀರಲ್ಲಾ, perspective right ಅನ್ನು maintain ಮಾಡುವುದಿಲ್ಲವೆಂದು. ಈಗ ಏರಿಯಾದು ತೆಗೆದುಕೊಳ್ಳಿ, ಕಾಂಟ್ರಿಬ್ಯೂಷನ್ಸ್ ಎಷ್ಟಿದೆ, ತೆಗೆದುಕೊಳ್ಳಿ ಎಂದು ಹೇಳಿ, ಇದೆಲ್ಲಕ್ಕಿಂತ ಪ್ರಮುಖವಾದುದು ಅಧ್ಯಕ್ಷರೇ, ನಾನೊಂದು ತಿದ್ದುಪಡಿಯನ್ನು ಕಳುಹಿಸಿದ್ದೇನೆ. ನಾವು ಅವರ ಚರ್ಚೆಯ ಜೊತೆಗೆ ನಾನು ಹಾಗೂ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಒಂದು ತಿದ್ದುಪಡಿಯನ್ನು ಕಳುಹಿಸುತ್ತಿದ್ದೇವೆ. ಇದರೊಂದಿಗೆ ಎಲ್ಲಿಯವರೆಗೆ ಈ ರಾಷ್ಟ್ರಕ್ಕೆ ಸಮಗ್ರ ಜಲ ನೀತಿಯ ಒಂದು ಕಾಯ್ದೆಯಾಗುವುದಿಲ್ಲ, ಎಲ್ಲಿಯವರೆಗೆ ಎಲ್ಲಾ ಕೊಳ್ಳಗಳ ನೀರನ್ನು ಹೇಗೆ ಹಂಚಿಕೊಳ್ಳಬೇಕೆಂದು ಹೇಳಿ ನಾವೊಂದು ಕಾನೂನು ಮಾಡುವುದಿಲ್ಲ, ಅಲ್ಲಿಯವರೆಗೆ ಈ Notification ಅನ್ನು stop ಮಾಡಿ ಎಂದು ಕೇಂದ್ರ ಸರ್ಕಾರವನ್ನು ನಾವು request ಮಾಡಿಕೊಳ್ಳಬೇಕಾಗುತ್ತದೆ. ಒಂದು ಸಲ ಇದು ಗೆಜೆಟ್ ಆದರೆ, ನಮ್ಮ ಯಾರ ಕೈಯಲ್ಲಿಯೂ ಇದು ಇರುವುದಿಲ್ಲ. ಗೆಜೆಟ್ ಆಗದಿರುವ ಹಾಗೆ ನೋಡಿಕೊಳ್ಳಬೇಕಾಗಿರುವ ಕೆಲಸವನ್ನು ನೀವು ಮಾಡಬೇಕಾಗಿದೆ. ಇವತ್ತು ನಮ್ಮ ಸಂಸದರು ನಿನ್ನೆ ಹೋಗಿ ನಮ್ಮ ಪ್ರಧಾನಿಗಳನ್ನು ಭೇಟಿ ಮಾಡಿದಾಗ, ಪ್ರಧಾನಿಗಳು ಇದನ್ನು ಪರಿಶೀಲನೆ ಮಾಡುವುದಾಗಿ ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ತಾವು ಕೂಡ ಇದರ ಬಗ್ಗೆ ಹೋರಾಟ ಮಾಡಬೇಕಾಗಿದೆ. ನೀವು ಸಹ ಅಲ್ಲಿಗೆ ಹೋಗಿ ಕುಳಿತುಕೊಂಡು ನಮಗೆ ಏನು ಅನ್ಯಾಯವಾಗಿದೆಯೆಂಬುದರ ಬಗ್ಗೆ ಮನವರಿಕೆ ಮಾಡಿಕೊಡಬೇಕಾಗಿದೆ. ಗೆಜೆಟ್ ನೋಟಿಫಿಕೇಷನ್ ಅನ್ನು ಹೇಗಾದರೂ ಮಾಡಿ ತಡೆಯುವ ಜವಾಬ್ದಾರಿಯನ್ನು ತಾವು ನಿರ್ವಹಣೆ ಮಾಡಲೇಬೇಕಾಗಿದೆ. ರಾಜ್ಯವನ್ನು ನೀವು ನಡೆಸುತ್ತಿದ್ದೀರಿ, ಒಂದು ಸಲ ಗೆಜೆಟ್ ಆದರೆ, ಆ ನಂತರ ನಮಗ್ಯಾರಿಗೂ ಇದರ ಬಗ್ಗೆ ಅಧಿಕಾರ ಉಳಿಯುವುದಿಲ್ಲ. ಗೆಜೆಟ್ ನೋಟಿಫಿಕೇಷನ್ ಅನ್ನು ಸ್ಟಾಪ್ ಮಾಡಬೇಕು. ಆ ನಂತರ ರಾಜ್ಯದೊಳಗೆ

ಒಂದು cropping pattern ಅನ್ನು ತಾವು ಡೆವಲಪ್ ಮಾಡಲೇ ಬೇಕಾಗುತ್ತದೆ. ಒಂದು ಕಡೆ ನಮಗೆ ಅಲ್ಲಿ ಅನ್ಯಾಯವಾಗಿದೆ ಎಂದು ಹೇಳುತ್ತೇವೆ. ಇನ್ನೊಂದು ಕಡೆ ಈ ರಾಜ್ಯದಲ್ಲಿ available water ಅನ್ನು ಹೇಗೆ ಬಳಸಬೇಕೆಂಬ ಬಗ್ಗೆ ನಾವು ಕೂಡ ಕುಳಿತುಕೊಂಡು ಚರ್ಚೆ ಮಾಡುವ ಕಾಲಕ್ಕೂ ನಾವು ಈಗ ಬಂದು ಬಿಟ್ಟಿದ್ದೇವೆ. ಅಕಸ್ಮಾತ್ ನಮಗೆ 10, 20, 40 ಟಿ.ಎಂ.ಸಿ. ಜಾಸ್ತಿ ನೀರು ಸಿಗುವುದು ಒಂದಾದರೆ, ನೀರನ್ನು ಹೇಗೆ ಬಳಸಬೇಕು? ಇದಕ್ಕೆ ನಾವು ಕೂಡ ಮುಂದೆ ಒಂದು water policy ಅನ್ನು ಮಾಡಬೇಕಾಗುತ್ತದೆ, cropping pattern ಅನ್ನು ಇಲ್ಲಿ ಮಾಡಿಕೊಳ್ಳಬೇಕಾಗುತ್ತದೆ. ಇಲ್ಲದೇ ಹೋದರೆ, ಈ ರಾಜ್ಯವನ್ನು ದಟ್ಟ ದರಿದ್ರ ರಾಜ್ಯವನ್ನಾಗಿ ನಾವು ಮಾಡುತ್ತೇವೆ. ಒಂದು ಕಡೆ ಅನವಶ್ಯಕವಾಗಿ ನೀರನ್ನು waste ಮಾಡುವುದು, ಇನ್ನೊಂದು ಕಡೆ ನೀರೇ ಇಲ್ಲದೆ ನಾಶವಾಗುವುದು, ಮತ್ತೊಂದು ಕಡೆ ನಿಮ್ಮದೇನು ಪ್ರಮುಖವಾದ ಕಮರ್ಷಿಯಲ್ ಕ್ರಾಪ್ಸ್ ನೀರಿಲ್ಲದೇ ಹಾಳಾಗುವುದು, ನಿಮ್ಮ ರಾಜ್ಯಕ್ಕೆ ರೆವಿನ್ಯೂ ಬರುವುದು, ತಪ್ಪಿ ಹೋಗುತ್ತದೆ, ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಹೆಚ್ಚು ಆಸಕ್ತಿಯಿಂದ ಇದನ್ನು ನೋಡಬೇಕು. ಇವತ್ತೇನು ನಿರ್ಣಯವನ್ನು ತಂದಿದ್ದಾರೆ ಬಹುಶಃ ಕೆಲವು ಕಡೆ, ನಾನು ಒಂದೊ ಎರಡೋ ಕಡೆ ಟ್ರಿಬ್ಯುನಲ್‌ನವರು ನಮಗೇನು advantage ಆಗಿ ಮಾತನಾಡಿದ್ದಾರೆ, ಅದನ್ನೂ ಕೂಡ ಒಪ್ಪಬೇಕಾಗುತ್ತದೆ. ಇವತ್ತು ಅವರು 1990ನೇ ಇಸವಿಯಿಂದ ಈಚೆಗೆ ಮಾತ್ರ ನಾನು ತೆಗೆದುಕೊಳ್ಳುತ್ತೇನೆ. 1974ರಿಂದ 1990 ರವರೆಗೆ ಏನು ಡ್ಯಾಮ್‌ಗಳಾಗಿತ್ತು, ಅದನ್ನು on going projects ಎಂದು consider ಮಾಡುತ್ತೇವೆಂದು ಹೇಳಿದ್ದಾರೆ, ಅದು ನಮಗೆ advantage ಆಗಿದೆ. ಇಲ್ಲವೇ ಇಲ್ಲವೆಂದು ಅವರೇನು ಹೇಳಿಲ್ಲ, ನಿಮ್ಮದು 11.5 ಲಕ್ಷ ಎಕರೆಗೆ consideration ಕೊಡಬೇಕಾದರೆ ಅದಕ್ಕೆ 7 ಲಕ್ಷ ಎಕರೆ ಸೇರಿಸಿ ಕೊಡಬೇಕಾದರೆ 1974 ರಿಂದೀಚೆಗೆ ನಾವೇನು ಪ್ರಾಜೆಕ್ಟ್ಸ್ ಅನ್ನು ಶುರು ಮಾಡಿದ್ದೇವೆ, ನಾವು ಎಲ್ಲಿಯೂ distribution ಕೊಟ್ಟಿರಲಿಲ್ಲ. ಕೊಡಲು ತಮಿಳುನಾಡಿನವರು ನಮಗೆ ಬಿಟ್ಟಿರಲಿಲ್ಲ, ಆದರೂ ನಾವು ಡ್ಯಾಂ ಮಾಡಿಕೊಂಡೆವು. ಅದೆಲ್ಲಾ ನೀರಾವರಿಯಾಗಬೇಕಾಗಿರುವ ಪ್ರದೇಶವೆಂದು ನಮ್ಮ ಪುಣ್ಯಕ್ಕೆ ಅವರು ಇವತ್ತು ಒಪ್ಪಿಕೊಂಡಿದ್ದಾರೆ, ಅದನ್ನು ನಾವು ಅಲ್ಲಗಳೆಯಲಿಕ್ಕಾಗುವುದಿಲ್ಲ. ಅದರ ಜೊತೆಗೆ ನಮ್ಮ ಆರು ಜಿಲ್ಲೆ severely drought hit area ಎಂದು

ಅವರು ಒಪ್ಪಿಕೊಂಡಿದ್ದಾರೆ. ನಮ್ಮ ಎಲ್ಲಾ statistics ಅನ್ನು ತರಿಸಿಕೊಂಡು ಈ ಭಾಗ ಕಾವೇರಿ ಹರಿಯುವ ಕಡೆ ಆರು ಜಿಲ್ಲೆಗಳು ತೀವ್ರವಾಗಿ ಬರಗಾಲಕ್ಕೆ ತುತ್ತಾಗಿರುವ ಪ್ರದೇಶ. ಇದಕ್ಕೆ ಏನಾದರೂ ಮಾಡಲೇಬೇಕು ಎಂದು ಒಪ್ಪುತ್ತಾರೆ. ಇನ್ನೊಂದು ಕಡೆ ತಮಿಳುನಾಡಿನವರಿಗೆ ಮೂರನೇ ಬೆಳೆ ಬೆಳೆಯುತ್ತಿದ್ದೀರಿ ಇದರ ಅಗತ್ಯವಿರಲಿಲ್ಲ, ನೀರನ್ನು ಹಾಳು ಮಾಡುತ್ತಿದ್ದೀರೆಂದು ಅವರು ಒಪ್ಪಿಕೊಳ್ಳುತ್ತಾರೆ. ಇದನ್ನು ನಾವು advantage ಆಗಿ ತೆಗೆದುಕೊಳ್ಳಬೇಕಾಗಿದೆ. ಏನು operative part ನಲ್ಲಿ ನೀವು ಮಾತನಾಡುತ್ತಿದ್ದೀರಿ, ತೀರ್ಮಾನ ಕೊಡಬೇಕಾದರೆ ಏರುಪೇರಾಗಿದೆ ಎಂದು ಅವರ ಗಮನಕ್ಕೆ ತೆಗೆದುಕೊಂಡು ಹೋಗಬೇಕಾಗಿದೆ. ಪ್ರಮುಖವಾಗಿ ಬೆಂಗಳೂರಿನ ಕುಡಿಯುವ ನೀರಿಗಾಗಿ ಹೋರಾಟಕ್ಕೆ ಇಟ್ಟುಕೊಳ್ಳಲೇಬೇಕಾಗಿದೆ. ಬೆಂಗಳೂರಿಗೆ 2011 ಅಥವಾ 2020 ನೇ ಇಸವಿಗೆ ಕನಿಷ್ಠ 20 ರಿಂದ 22 ಟಿ.ಎಂ.ಸಿ.ನೀರು ಬರದೇ ಹೋದರೆ ಬೆಂಗಳೂರು ಏನಾಗುತ್ತದೆಂದು ಯಾರು ನಿರೀಕ್ಷೆ ಮಾಡಲಿಕ್ಕಾಗುವುದಿಲ್ಲ. 1.7 ಟಿ.ಎಂ.ಸಿ.ನೀರನ್ನು ಬೆಂಗಳೂರು ಸಿಟಿಗೆ ಕುಡಿಯುವ ನೀರಿಗಾಗಿ ಇಟ್ಟುಕೊಂಡು ಎಲ್ಲಿಗೆ ಹೋಗುತ್ತೀರಿ ಎಂದು ನಮಗೆ ಅರ್ಥವಾಗುವುದಿಲ್ಲ. 1.7. ಟಿ.ಎಂ.ಸಿ. ನೀರನ್ನು ಬೆಂಗಳೂರಿಗೆ ಅವರು ಅಲಾಟ್ ಮಾಡಿದ್ದಾರೆ. ನಮ್ಮ requirement, 30 T.M.C. ನೀರು ಬೇಕೆಂದು ನಾವು ಕೇಳಿರುವುದು. ಮೂರನೇ ಒಂದು ಭಾಗ ಬೆಂಗಳೂರು ಎಂದು ಏನು ಮಾಡಿದ್ದಾರೆ, ಅದು ಯಾವುದೇ ತರ್ಕಬದ್ಧವಾದ ನಿರ್ಣಯವಲ್ಲ. Bangalore is Bangalore. ಬೆಂಗಳೂರಿಗೆ ಕುಡಿಯುವ ನೀರನ್ನು ಕೊಡಲೇಬೇಕು. ಮೂರನೇ ಒಂದು ಭಾಗವೆಂದು ಇಲ್ಲಿಗೆ ಗೆರೆ ಹಾಕಲಿಕ್ಕಾಗುವುದಿಲ್ಲ. ಇಲ್ಲಿಯತನಕ ಕಾವೇರಿ ಬೇಸಿನ್ ಇದೆ, ಇಲ್ಲಿಂದ ಮುಂದಕ್ಕೆ ಬೇರೆ ಬೇಸಿನ್ ಪ್ರಾರಂಭವಾಗುತ್ತದೆಂದು ಬೆಂಗಳೂರಿನಲ್ಲಿ ಗೆರೆ ಹಾಕುವಿರಾ ಮಾನ್ಯ ಈಶ್ವರಪ್ಪನವರೇ? ಬೆಂಗಳೂರು ಕುಡಿಯುವ ನೀರಿಗೆ ಆದ್ಯತೆ, ನಾಲ್ಕನೆಯದು ನೀವು ಇವತ್ತು trans–basin ದು ಕಡ್ಡಾಯವಾಗಿ ಹೇಳಬೇಕು. ನಾವೆಲ್ಲಾ ಅವತ್ತು ಬಹಳ ಅಂದುಕೊಂಡಿದ್ದೆವು. 700 ಟಿ.ಎಂ.ಸಿ. ಆದಮೇಲೆ ಉಳಿಯುವ ನೀರೆಲ್ಲಾ ಕರ್ನಾಟಕಕ್ಕೆ ಉಳಿಯುತ್ತದೆಂದು ಭಾವಿಸಿಕೊಂಡಿದ್ದೆವು ಮಾನ್ಯ ಚೆಲುವರಾಯಸ್ವಾಮಿಯವರೆ, ವಾಸ್ತವವಾಗಿ ಜಡ್ಜಮೆಂಟ್ ಆ ರೀತಿ ಇಲ್ಲ. Reserve it for next season ಎಂದು ಅವರು ಹೇಳುತ್ತಾರೆ. We are under wrong impression. 740

ಟಿ.ಎಂ.ಸಿ. ನೀರು ಆದಮೇಲೆ ಹೆಚ್ಚು ಬರುವ ನೀರೆಲ್ಲಾ ನಾವು ಬಳಸಿಕೊಳ್ಳಲಿಕ್ಕೆ ಈ ವರ್ಷ ಟ್ರಿಬ್ಯುನಲ್ ಅವಕಾಶ ಕೊಟ್ಟುಬಿಟ್ಟಿದೆ ಎಂದು, ಎಲ್ಲೋ ಮನಸ್ಸಿನ ಒಂದು ಕಡೆ ನಮಗೆ ಸಮಾಧಾನವಾಗಿತ್ತು. Average yearsನಲ್ಲಿ 740 ಟಿ.ಎಂ.ಸಿ. ನೀರು ಬರುತ್ತದೆ. ಜಾಸ್ತಿ ಬಂದಾಗ ನಾವು ಬಳಸಬಹುದೆಂದು. But he has told a word, 'reserve it for the next season'. ಡ್ಯಾಂಗಳಲ್ಲಿ ನಾವು ರಿಸರ್ವ್ ಮಾಡಬೇಕಾಗುತ್ತದೆ. ಅದನ್ನು ಏಕಾಏಕಿ ನಮಗೆ 740 ಟಿ.ಎಂ.ಸಿ. ನೀರಿನಲ್ಲಿ ನಿನಗೆ 300 ಚಿಲ್ಲರೆ ಟಿಎಂಸಿ ನೀರು ಬಿಟ್ಟು ಉಳಿದದ್ದನ್ನು ನಾನು ಬಳಸುತ್ತೇನೆ ಎಂದು ಹೇಳಿಲಿಕ್ಕಾಗುವುದಿಲ್ಲ. You cannot say, 419 ಟಿ.ಎಂ.ಸಿ. ನೀರು ಬಿಟ್ಟು ಬಿಟ್ಟಿದ್ದೇವೆ, ಉಳಿದದ್ದು ನೀರು ನಮ್ಮದು ಎಂದು ಮಾಡಲಿಕ್ಕೆ ಇಲ್ಲಿ ಅವಕಾಶ ಕೊಟ್ಟಿಲ್ಲ. ಅದನ್ನೂ ಕೂಡ ಇವತ್ತು ಸ್ಪಷ್ಟೀಕರಣ ಕೇಳಬೇಕಾಗಿದೆ. 740 ಟಿ.ಎಂ.ಸಿ. ನೀರು 50% dependability ನಲ್ಲಿ ಏನು ಲೆಕ್ಕ ಮಾಡಿದ್ದೀರಿ, ಹೆಚ್ಚಿನ ನೀರು ನಮ್ಮದು ಎಂದು ಹೇಳಪ್ಪಾ ಎಂದಾದರೂ ನಾವು ಕೇಳಬೇಕಾಗುತ್ತದೆ. ನಾವು ಇವತ್ತು ರಿಸರ್ವ್ ಮಾಡಲಿಕ್ಕಾಗುವುದಿಲ್ಲ. ತಮಿಳುನಾಡಿಗೆ ಕೆ.ಆರ್.ಎಸ್.ನಿಂದ ಹೇಮಾವತಿ ಡ್ಯಾಂ ನಿಂದ 300 ಟಿ.ಎಂ.ಸಿ. ನೀರು ಬಿಡುತ್ತೇವೆಂದು ಈ ವರ್ಷವೇ ರಿಸರ್ವ್ ಮಾಡಲಿಕ್ಕಾಗುವುದಿಲ್ಲ. ಇದು ಅವೈಜ್ಞಾನಿಕವಾಗಿದೆ. ಇವೆಲ್ಲಾ ಅಂಶಗಳ ಮೇಲೆ ತಾವು ಕಾನೂನಿನ ಸಮರವನ್ನು ಮತ್ತೊಂದು ಸಲ ಸಾರಬೇಕಾಗಿದೆ. ಏಕೆಂದರೆ ಇಡೀ ರಾಜ್ಯ ಎಲ್ಲಾ ಕಡೆ ಸ್ಟ್ರೈಕ್ ಆಗುತ್ತಿದ್ದರೆ ಶಾಸನ ಸಭೆಯಲ್ಲಿ ಎಂ.ಎಲ್.ಎ.ಗಳಿಗೆ ಇದರ ಬಗ್ಗೆ ಆಸಕ್ತಿಯಿಲ್ಲವೇನು ಎಂದು ರಾಜ್ಯದ ಜನ ನಮ್ಮನ್ನು ತಪ್ಪು ತಿಳಿದುಕೊಂಡುಬಿಟ್ಟಿದ್ದಾರೆ. ನಿಜ, ನಾವೆಲ್ಲಾ ಒಂದು consensusಗೆ ಬಂದಿದ್ದೆವು. ನಾವು ಪಕ್ಷ ರಾಜಕಾರಣ ಮಾಡಬಾರದು, ಒಬ್ಬರನ್ನೊಬ್ಬರನ್ನು ದೂರಿಕೊಂಡು ರಾಜ್ಯದ ಐಕ್ಯತೆಯನ್ನು ಹಾಳು ಮಾಡಬಾರದು ಎಂದು. ಆದರೂ ಈ ಕೆಲಸವನ್ನು ನಾವು ಮೊದಲೇ ಮಾಡಬೇಕಾಗಿತ್ತು. ಪಾಪ ಮಾನ್ಯ ವಾಟಾಳ್ ನಾಗರಾಜ್‌ರವರು ಐದಾರು ದಿವಸ ಶಾಸನ ಸಭೆಯಲ್ಲಿ ಕುಳಿತು ಎದ್ದು ಹೋಗುವ ಸ್ಥಿತಿಯನ್ನು ನಿರ್ಮಾಣ ನಾವು ಮಾಡಿದೆವು, ಬೆಳಿಗ್ಗೆ ಬರುತ್ತಿದ್ದರು, ಕಾವೇರಿ ನಿರ್ಣಯವನ್ನು ಏನು ಮಾಡಿದಿರಿ ಎಂದು ಕೇಳುತ್ತಿದ್ದರು, ಮಾಡಲಿಕ್ಕಾಗುವುದಿಲ್ಲವೆಂದು ಹೋಗಿ ಎಂದು ಹೇಳುತ್ತಿದ್ದೆವು, ಅವರು ಹೋಗಿ ಬಿಡುತ್ತಿದ್ದರು.

ಶ್ರೀ ಎನ್.ಚೆಲುವರಾಯಸ್ವಾಮಿ:- ನಾವು ಯಾವಾಗಲೂ ಹೋಗಿ ಎಂದು ಹೇಳಿಯೇ ಇಲ್ಲ ಸರ್.

ಶ್ರೀ ಜೆ.ಸಿ.ಮಾಧುಸ್ವಾಮಿ:- ನಾವು ಹೇಳುತ್ತಿದ್ದೆವೆಲ್ಲಾ, ಈಗಲಾದರೂ ಈ ನಿರ್ಣಯ ಇವತ್ತು ಪಕ್ಷಾತೀತವಾಗಿ ಆಗಬೇಕಾಗಿದೆ. ನಾನು ನ್ಯಾಯಧೀಶರ, ನ್ಯಾಯಾಧಿಕರಣ, ಸುಪ್ರೀಂ ಕೋರ್ಟ್ ಬಗ್ಗೆ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. ಆದರೆ ದುರ್ದೈವ, ಈಗಲೂ ನಾವು ಕೆಲವರು ಮಾತನಾಡ ಬೇಕಾದರೆ, ಆ ಸರ್ಕಾರ ಹೀಗೆ ಮಾಡಿತು, ವಿ.ಪಿ.ಸಿಂಗ್ ಹಾಗೆ ಮಾಡಿದರು, ರಾಮಕೃಷ್ಣ ಹೆಗಡೆಯವರು ಹೀಗೆ ಮಾಡಿದರು, ದೇವೇಗೌಡರು ಹೀಗೆ ಮಾಡಿದರು ಎನ್ನುವ ಈ ಚಪಲದ ಮಾತುಗಳೇನಿವೆ, ಸ್ವಲ್ಪಮಟ್ಟಿಗೆ ನಿಲ್ಲಿಸಬೇಕು. Everyone knows that it is a reference of the Supreme Court. ಯಾರಿದ್ದರೇನು ಮಾಡಲಿಕ್ಕಾಗುತ್ತದೆ: ಮಾನ್ಯ ಪ್ರಕಾಶ್‌ರವರು ಪ್ರಧಾನಿಗಳಾಗಿದ್ದರೆ ಏನು ಮಾಡುತ್ತಿದ್ದರು? ಇನ್ನೊಬ್ಬರಾಗಿದ್ದರೆ ಏನು ಮಾಡುತ್ತಿದ್ದರು? ಯಾವಾಗ ಸುಪ್ರೀಂ ಕೋರ್ಟ್‌ನಿಂದ ರೆಫರೆನ್ಸ್ ಬಂದು ಟ್ರಿಬ್ಯುನಲ್ constitute ಮಾಡಿ ಎಂದು ಹೇಳಿದಾಗ ವಿ.ಪಿ.ಸಿಂಗ್ ಆದರೂ ಮಾಡಲೇಬೇಕು, ನೀವಾದರೂ ಮಾಡಲೇಬೇಕು, ಯಾರಾದರೂ ಮಾಡಲೇಬೇಕು.

ಶ್ರೀ ಎನ್.ಚೆಲುವರಾಯಸ್ವಾಮಿ:- ಮಧ್ಯಸ್ಥಿಕೆಯಲ್ಲಿ ತೀರ್ಮಾನ ಮಾಡಲಿಕ್ಕಾಗುವುದಿಲ್ಲ ಎಂದಾಗ ಅದಕ್ಕೆ ...

ಶ್ರೀ ಜೆ.ಸಿ.ಮಾಧುಸ್ವಾಮಿ:- ಇಲ್ಲ, ನಮ್ಮದು ಅಗ್ರಿಮೆಂಟ್ violate ಆಗಿದೆ ಎಂದು ಹೇಳಿ ತಮಿಳುನಾಡಿನವರು ರಾಷ್ಟ್ರಪತಿಯವರನ್ನು ಭೇಟಿ ಮಾಡಿ, ಅರ್ಜಿ ಕೊಟ್ಟು ರಾಷ್ಟ್ರಪತಿಯವರು ಸುಪ್ರೀಂ ಕೋರ್ಟ್‌ಗೆ ಹೇಳಿ, ಸುಪ್ರೀಂ ಕೋರ್ಟ್ ಎರಡು ಸಲ ನಿಮಗೆ ಹೇಳಿ, ಕೇಂದ್ರ ಸರ್ಕಾರ ಏನು ಮಾಡದಿದ್ದುದಕ್ಕೆ ಡೈರೆಕ್ಟಿವ್ ಇಸ್ಯೂ ಮಾಡಿತು. ಟ್ರಿಬ್ಯುನಲ್ ಮಾಡಿ ಎಂದು ಸ್ಪಷ್ಟವಾಗಿ ಹೇಳಿತು. ಹಾಗಾದರೆ 1990 ರಲ್ಲಿ ಮುಖ್ಯಮಂತ್ರಿಗಳಾಗಿದ್ದವರು ಯಾರು? ನಾವೆಲ್ಲಾ ಎಂ.ಎಲ್.ಎ.ಗಳು ನಾವು ಮಾತನಾಡುವುದಿಲ್ಲ. ನಾವು ಈ ಕಡೆ ಕುಳಿತುಕೊಂಡು ಆ ಮಾತು ಆಡಬಾರದು. 1990ರ ಜೂನ್‌ನಲ್ಲಿ ರಾಜ್ಯ ಸರ್ಕಾರದಲ್ಲಿದ್ದವರು ಯಾರು ಎಂದರೆ? ಈ ರಾಜ್ಯದ ಮಟ್ಟಿಗೆ ಅದಾಗಬಾರದು. ಹಾಗೆ, ನನಗೆ ಅನ್ನಿಸಿಲ್ಲ. ನಾನು honest ಆಗಿ ಹೇಳುತ್ತಿದ್ದೇನೆ, ಈ ರಾಜ್ಯದಲ್ಲಿ ಯಾರೂ ಕಾವೇರಿ ನೀರಿನ ವಿಷಯದಲ್ಲಿ

ಉದಾಸೀನ ಮಾಡುವುದೇ ಆಗಲಿ, ನಮಗೆ ಅನಾಸಕ್ತಿ ತೋರಿಸುವುದೇ ಆಗಲಿ ಮಾಡಿದ್ದಾರೆಂದು ನಮಗೆ ಅನ್ನಿಸಿಲ್ಲ, ಶಕ್ತಿಮೀರಿ ಅವರವರ ವ್ಯಾಪ್ತಿಯಲ್ಲಿ ಅವತ್ತೇನು ಕಾನೂನು ತಜ್ಞರು ಸಲಹೆ ಕೊಟ್ಟಿದ್ದಾರೆ, ಅದರಂತೆ ಹೋಗಿದ್ದಾರೆ. ಈಗ ನಾವು ಒಂದು ಒಳ್ಳೆಯ ಕಾಲಕ್ಕೆ ಅಥವಾ ಇತ್ಯರ್ಥವಾಗಲಿಕ್ಕೆ ಬಂದು ನಿಂತಿದ್ದೇವೆ. ನನಗೆ ಅನ್ನಿಸುತ್ತದೆ, ಈಗಲೂ ನೀವು ಹೋರಾಟವನ್ನು ಚೆನ್ನಾಗಿ ಮಾಡಿದರೆ, ನಿಮ್ಮ ವಾದವನ್ನು ಪುಷ್ಠಿಯಾಗಿಟ್ಟುಕೊಂಡು ತೋರಿಸಿದರೆ ನಮಗೆ ಇನ್ನೂ 50–60 ಟಿ.ಎಂ.ಸಿ. ನೀರು ದೊರೆಯಬಹುದು, ಅದೇನು ಬಹಳವಿಲ್ಲ, ನಾವು convince ಮಾಡಬಹುದು ಸರ್, ನಾನು ನಿನ್ನೆ ಪರಮಶಿವಯ್ಯನವರಿಗೆ ಕೇಳಿದೆ, ಇಂಡಿಯಾ ದೇಶ ಬಿಟ್ಟು ಆಚೆ ಎಲ್ಲಾದರೂ underground water levelನ capability ಅನ್ನು measure ಮಾಡಿ ಬಳಕೆ ಮಾಡಲಿಕ್ಕೆ ಸಾಧನಗಳು ಅಥವಾ ತೀರ್ಮಾನಗಳು ಇವೆಯೇ ಎಂದಾಗ, 7–8 ತೀರ್ಮಾನಗಳು ಇವೆಯೆಂದು ಹೇಳಿ ನಿನ್ನೆ ಅವರು ನನಗೆ ಕೊಟ್ಟರು. ನಾನು ಏತಕ್ಕೆ ಕೇಳಿದೆನೆಂದರೆ, ಟ್ರಿಬ್ಯುನಲ್ "I have no judgment, nor there is a standard fixed for the measurement of underground water" ಎಂದು ಸ್ಪಷ್ಟವಾಗಿ ಹೇಳುತ್ತದೆ. ನಾವು ಅದನ್ನು ಇವತ್ತು ಕೊಡಬಹುದು, ನೋಡಿ ಇಂತಹ ಕಡೆ ಈ underground water ಅನ್ನು ಇವರು ತೆಗೆದುಕೊಂಡಿದ್ದಾರೆ. ಮತ್ತೆ ಅವರಿಗೆ ಏನು ಅನ್ಯಾಯವಾಗುವುದಿಲ್ಲ, next seasonಗೆ ಅದು recharge ಆಗುತ್ತದೆ. ನಾವು next ನೀರು ಬಿಟ್ಟ ತಕ್ಷಣ ಆ ನೀರು recharge ಆಗುವುದರಿಂದ ಆ ನೀರನ್ನು ಕನಿಷ್ಠ 40 ಟಿ.ಎಂ.ಸಿ. ನೀರೇನು ಅವರಿಗಿದೆ ಅದನ್ನು ನಾವು ಪ್ರೂವ್ ಮಾಡಬಹುದು, ಹಾಗೆ ಮಾಡಬೇಕೆಂದು ಹೇಳಿ, ಮಾನ್ಯ ಈಶ್ವರಪ್ಪನವರು ನೀವೆಲ್ಲಾ ಸಮರ್ಥರಿದ್ದೀರಿ, ಹೇಗಾದರೂ ಮಾಡಿ ಈ ನೀರನ್ನು ಹೆಚ್ಚಾಗಿ ನಮಗೆ ಉಳಿಸಿಕೊಡಬೇಕು. ಈಗ ನಮಗೆ ಏನು ಅನ್ಯಾಯವಾಗಿದೆ ಇದರ ವಿರುದ್ಧವಾಗಿ ನಾವು ಸಾರ್ವಜನಿಕವಾಗಿ ಒಂದು ಹೋರಾಟ ಮಾಡುವುದರ ಜೊತೆಗೆ, ಕಾನೂನು ಹೋರಾಟವನ್ನು ಮುಂದುವರೆಸಬೇಕು. ನೀವು ಏನಾದರೂ ಮಾಡಿ ಕೇಂದ್ರ ಸರ್ಕಾರಕ್ಕೆ ನಿಯೋಗ ತೆಗೆದುಕೊಂಡು ಹೋಗುವಿರೋ, ನೀವು ಹೋಗುವಿರೋ ಅಥವಾ ಅಲ್ಲಿರುವ ನಿಮ್ಮ ಪಕ್ಷದ ನಾಯಕರುಗಳನ್ನು ಸಮರ್ಥವಾಗಿ ಬಳಸಿಕೊಳ್ಳುವಿರೋ, ಇವತ್ತು convince ಮಾಡಬೇಕಾಗಿದೆ. ಒಂದು, ನೋಟಿಫಿಕೇಷನ್ ಅನ್ನು ಇಸ್ಯೂ

ಮಾಡುವುದನ್ನು ತಕ್ಷಣ ತಡೆಯಬೇಕಾಗಿದೆ. ಏಕೆಂದರೆ ಇವತ್ತು ಅವರ ಮೇಲೆ ತಮಿಳುನಾಡಿನವರ ಒತ್ತಡ ಬೀಳಬಹುದು. ನಮ್ಮ ದೌರ್ಭಾಗ್ಯ. ಅವತ್ತು ಇಂಗ್ಲಿಷ್‌ನವರ ಕಾಲದಲ್ಲಿಯೂ ತಮಿಳುನಾಡಿನವರೇ powerful, ಇವತ್ತು ಅವರೇ powerful, ನಾವಲ್ಲ. ಕೇಂದ್ರ ಸರ್ಕಾರದಲ್ಲಿ ನಾವು ಬಹಳ ಪ್ರಭಾವವನ್ನು ಇಟ್ಟುಕೊಂಡಿಲ್ಲ. ನಾನು ನಿನ್ನೆ ಯಾರಿಗೋ ಒಬ್ಬರಿಗೆ request ಮಾಡಿಕೊಂಡೆ, ನಾನು ಸಾರ್ವಜನಿಕವಾಗಿ ಅವರ ಹೆಸರು ಹೇಳಲಿಕ್ಕೆ ಇಷ್ಟಪಡುವುದಿಲ್ಲ. ಕೇಂದ್ರದಲ್ಲಿರುವ ನಮ್ಮ ರಾಜ್ಯದ ಎಲ್ಲಾ ಮಂತ್ರಿಗಳು ರಾಜೀನಾಮೆ ಕೊಟ್ಟುಬಿಟ್ಟು ಒಬ್ಬರನ್ನಾದರೂ ಕ್ಯಾಬಿನೆಟ್ ಮಿನಿಸ್ಟರ್ ಮಾಡಿ ಎಂದು ಕೇಳಿಕೊಳ್ಳಿ ಎಂದು. ಒಬ್ಬರಾದರೂ ಕರ್ನಾಟಕದಿಂದ ಕೇಂದ್ರ ಸಚಿವ ಸಂಪುಟದಲ್ಲಿ ಕುಳಿತುಕೊಳ್ಳಲು ಒಬ್ಬ ಮಂತ್ರಿ ಮಾಡಿ ಸಾಕು ನಮಗೆ. ಆಮೇಲೆ ನಮ್ಮ ಹೋರಾಟ ಜೀವಂತ ಮಾಡೋಣವೆಂದು. ನಾವೆಲ್ಲಾ ಆಟಕ್ಕೆ ಉಂಟು, ಲೆಕ್ಕಕ್ಕಿಲ್ಲ. ಆದರೆ ಇವತ್ತು ತಮಿಳುನಾಡಿನವರು ರೆಫರಿಗಳು ಇದ್ದಾರೆ. ಅವರೇ ಪಾಯಿಂಟ್ ಕೊಡುವುದು, ಅವರೇ ಸೋತಿರಿ, ಗೆದ್ದಿರಿ ಎಂದು ಹೇಳುವ ಸ್ಥಿತಿಯಲ್ಲಿ ಕುಳಿತಿದ್ದಾರೆ. ಅದಕ್ಕೋಸ್ಕರ ನಾವೆಲ್ಲಾ ಇವತ್ತು ಐಕ್ಯಮತ್ಯದಿಂದ ಹೋರಾಟ ಮಾಡಬೇಕಾಗಿದೆ. ಅದನ್ನು ತಾವು ಜೀವಂತವಾಗಿಡಬೇಕು. ಈ ರಾಜ್ಯಕ್ಕೆ ನ್ಯಾಯವನ್ನು ತಾವು ದೊರಕಿಸಿಕೊಡಬೇಕು. ಅಕಸ್ಮಾತ್ ನಮಗೆ ಮತ್ತೆ ಅನ್ಯಾಯ ಆಗುತ್ತದೆಯೆಂದರೆ ....

ಶ್ರೀ ಎಂ.ಪಿ.ಪ್ರಕಾಶ್ (ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ತಾವೊಂದು ಒಳ್ಳೆಯ ವಾದವನ್ನು ಇಟ್ಟಿರಿ. ಅದನ್ನು ಸ್ವಲ್ಪ ವಿಸ್ತರಿಸಿದ್ದರೆ ಚೆನ್ನಾಗಿತ್ತು. Trans basin water ವಿಚಾರದಲ್ಲಿ ಅವರೇನು ಹೇಳಿದ್ದಾರೆ, ಬರೀ ಒಂದು ಬೇಸಿನ್‌ಗೆ proximity ಕೂಡ ನೋಡಬೇಕು. ಕಳ್ಳಂಬೆಳ್ಳ, ಚಿಕ್ಕನಾಯ್ಕನಹಳ್ಳಿಯನ್ನು ನಮ್ಮ ಕೃಷ್ಣ ಕಣಿವೆಯ ಭಾಗ ಎಂದು ಹೇಳಿದರೆ ಹೇಗೆ? ಅದರ ದೂರವೇನು, ಅದರ ವ್ಯತ್ಯಾಸವೇನು, ನೀವು ಕಾವೇರಿಗೆ ಹತ್ತಿರ ಇರತಕ್ಕಂಥವರು, ಅದು ಹೇಗೆ ಎಂದು ನೋಡಬೇಕಾಗುತ್ತದೆ. ಆಮೇಲೆ 1/3 ಎಂದು ಬೆಂಗಳೂರನ್ನು ಮಾಡಿ ಇನ್ನು ಉಳಿದ ಭಾಗ ಈ ಕಡೆ ಬೇಸಿನ್‌ನಲ್ಲಿ ಇಲ್ಲ ಎನ್ನುವುದು ಅವೈಜ್ಞಾನಿಕವಾಗಿದೆ ಎಂದು ತಾವು ಹೇಳಿದಿರಿ. ಇದಕ್ಕೆ ಇನ್ನೇನಾದರೂ ಬೇರೆ ಕಡೆಗೆ ಉದಾಹರಣೆ ಇರತಕ್ಕದ್ದು ಏನಾದರೂ ಇದೆಯೇ? ಈ ರೀತಿ

ಬೇಸಿನ್‌ನ್ನು consider ಮಾಡದೇ ಇರತಕ್ಕಂಥದ್ದು. ಅದರ ಬಗ್ಗೆ ತಾವು ಸ್ವಲ್ಪ ನೋಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಈವರೆಗೆ trans basin ಪ್ರಶ್ನೆಯೇ ಚರ್ಚೆಯಾಗಿಲ್ಲ. ಅವರು because of depth of basin, ಒಂದೇ ಒಂದು ಕೇಸನ್ನು ತೆಗೆದುಕೊಂಡು ಅವರು ವ್ಯಾಖ್ಯಾನಿಸುತ್ತಾರೆ. I am not allowing ಎಂದು ಹೇಳುವುದನ್ನು ಬಿಟ್ಟರೆ, ಅಲ್ಲೇನು narrated decisions ಆಗಲಿ, fix ಆದ ಕಾನೂನಾಗಲೀ ಎಲ್ಲಿಯೂ ಇಲ್ಲ. We have gone through. ನನ್ನ ಹತ್ತಿರ ಕಾವೇರಿಯಲ್ಲಿ ನೀರಿಲ್ಲ ಅಂದಾಗ, ಬೇರೆ ಬೇಸಿನ್‌ಗೆ ಕೊಡುವುದಕ್ಕಾಗುವುದಿಲ್ಲ. You are very much right. Trans basin ಕೇವಲ ಎರಡು ಕಿಲೋ ಮೀಟರ್ ದೂರದಲ್ಲಿ ಜೆ.ಸಿ.ಪುರ ಬರುತ್ತದೆ. ಚಿಕ್ಕನಾಯ್ಕನಹಳ್ಳಿ town ಅನ್ನು ಕೃಷ್ಣಾದಿಂದ ಕುಡಿಯುವ ನೀರನ್ನು ತೆಗೆದುಕೊಂಡು ಹೋಗಿದ್ದೀರಿ, ಅದು trans basin ಆಗುತ್ತೆ ಎಂದಾದರೆ, ಹೇಗೆ ಜೀವನವನ್ನು ಮಾಡುವುದು? ನಾವೆಲ್ಲ ತಿಳಿದುಕೊಂಡಿದ್ದೆವು, ಈಗ multi village drinking water concept ಅನ್ನು ಇಟ್ಟುಕೊಂಡಾಗ basin cross ಮಾಡಬೇಡಿ ಎಂದರೆ you are very much right, ನಿಮಗೆಲ್ಲಿ ಬಾಗಲಕೋಟೆ, ಎಲ್ಲಿ ಚಿಕ್ಕನಾಯ್ಕನಹಳ್ಳಿ, ಎಲ್ಲಿ ತಿಪಟೂರು, ಎಲ್ಲಿ ಚಿಕ್ಕಮಗಳೂರು,? ಇಲ್ಲಿ ಕೃಷ್ಣ ನದಿ ಹುಟ್ಟುತ್ತೆ ಎಂದು ಹೇಳಿ, ನೀವು ಇವತ್ತು ಕಡೂರು, ಬೀರೂರು ಎಲ್ಲ ಕೃಷ್ಣ ಬೇಸಿನ್ ಎಂದು treat ಮಾಡಿ ಕುಳಿತುಕೊಂಡರೆ, ಚಿಕ್ಕನಾಯ್ಕನಹಳ್ಳಿಯನ್ನು ಕೃಷ್ಣ ಬೇಸಿನ್ ಎಂದು treat ಮಾಡಿದರೆ ಕುಡಿಯುವುದಕ್ಕೆ ನೀರೂ ನಮಗೆ ಸಿಗುವುದಿಲ್ಲ, ಏನೂ ಸಿಗುವುದಿಲ್ಲ. ಇದು ಅವೈಜ್ಞಾನಿಕ. ಅವರಿಗೆ when water is allocated ಮಿಕ್ಕಿದ್ದು ಮಾತನಾಡಬಾರದಾಗಿತ್ತೆಂದು ನನ್ನ ಭಾವನೆ. ನಿಮಗೆ 270 TMC ನೀರನ್ನು ಕೊಡುತ್ತೇವೆಂದರೆ ಅಲ್ಲಿಗೆ stop ಮಾಡಿಬಿಡಬೇಕಾಗಿತ್ತು. Trans basin ಮಾಡಬೇಡಿ, lift ಮಾಡಬೇಡಿ, ಇಂಥ crop ಅನ್ನೇ ಹಾಕಿ, it must be outside their purview. I personally feel. allocation ಆಗುವವರೆಗೆ ಅವರು restrict ಮಾಡಿದ್ದು ಸರಿ. ಬಳಸಿಬಿಡುತ್ತೀರಿ, perspective right ಅನ್ನು claim ಮಾಡುತ್ತೀರಿ ಅಂಥ. ಈಗ ಕೂಡ ಅವರು ವ್ಯಾಖ್ಯಾನವನ್ನು ಮಾಡುತ್ತಾರೆ. ಹೀಗೆ ಮಾಡಬೇಡಿ, ಹೀಗೆ

ಮಾಡಬೇಡಿ ಎಂದು. ನಮ್ಮ ನೀರನ್ನು ನಮಗೆ ಕೊಟ್ಟಿದ್ದ ಕಡೆ ಅವರು ಸುಮ್ಮನಾಗಿಬಿಡಬೇಕಾಗಿತ್ತು, ನಾನು ಅಂದುಕೊಂಡಿರುವುದು. "ನಿಮಗೆ 270 TMC ನೀರನ್ನು ಕೊಡುತ್ತೇವೆ, ನೀವು ಏನು ಮಾಡುತ್ತೀರೋ, ನೀವು project ಮಾಡಿಕೊಂಡು ಕರ್ನಾಟಕವರು ಬಳಸಿಕೊಳ್ಳಿ" ಎಂದು ಅವರು ಹೇಳಬಹುದಾಗಿತ್ತು. ಒಂದು ಕಡೆ water allocate ಮಾಡುತ್ತಾರೆ, ಇನ್ನೊಂದು ಕಡೆ ಈ ನಿಬಂಧನೆಗಳನ್ನು ಹಾಕಿಕೊಂಡು ಬರುತ್ತಾರೆ. ಇದು ತರ್ಕಬದ್ಧವಾದುದಲ್ಲ. 270 TMC water ಅನ್ನು ನಮಗೆ ಕೊಟ್ಟಾಗ ನಾವು ಕುಡಿಯುವ ನೀರಿಗೆ, industrial purposeಗೆ, ಇನ್ನೊಂದು purposeಗೆ ನೀರನ್ನು ನಾವು ಆ ಕಡೆ ಈ ಕಡೆ ಮಾಡಿಕೊಂಡರೆ Tribunal has nothing to say about that. ಅವರು ಹೇಳಬಾರದಾಗಿತ್ತೆಂದು ನಾನು ತಿಳಿದುಕೊಂಡಿದ್ದೇನೆ. ಅದನ್ನು ತಾವು ಸ್ವಲ್ಪ ಸಮರ್ಥವಾಗಿ ಮಾಡಬೇಕು. ಈಗ ನಾನು resolution ಅನ್ನು ಕಳುಹಿಸುತ್ತಿದ್ದೇನೆ, ಎಲ್ಲಿಯವರೆಗೆ ನಾವು ಜಲ ನೀತಿಯನ್ನು ರಾಷ್ಟ್ರಮಟ್ಟದ ನೀತಿಯನ್ನು ನಿರೂಪಣೆ ಮಾಡುವುದಿಲ್ಲ, ಅಲ್ಲಿಯವರೆಗೆ ದಯಮಾಡಿ ಈ tribunal decision ಅನ್ನು notify ಮಾಡಬಾರದು, ಇದರಿಂದ ಅನ್ಯಾಯವಾಗುತ್ತೆ. ಹೇಗಾದರೂ ಮಾಡಿ ಕೇಂದ್ರ ಸರ್ಕಾರ ಪರಸ್ಪರ ರಾಜಿಯೋ compromise, ಅಥವಾ ಚರ್ಚೆಯನ್ನು ಮಾಡಿಸಿ ತಾತ್ಕಾಲಿಕವಾಗಿ ಈ ಸಮಸ್ಯೆಯನ್ನು ಹಾಗೆಯೇ ಬಗೆಹರಿಸಿಕೊಳ್ಳಿ ಎಂದು ನಾವು ಕೇಂದ್ರ ಸರ್ಕಾರವನ್ನು ಈ ಶಾಸನ ಸಭೆಯ ಮೂಲಕ ಕೇಳಿಕೊಳ್ಳುತ್ತೇವೆಂದು ಹೇಳಿ ಒಂದು resolution ಅನ್ನು ಕಳುಹಿಸುತ್ತಿದ್ದೇನೆ. ಮಾನ್ಯ ಅಧ್ಯಕ್ಷರು ಅದನ್ನು adopt ಮಾಡಬೇಕೆಂದು ಕೇಳಿಕೊಂಡು, ನಾವೂ ಕೂಡ ರಾಜ್ಯದ ಜೊತೆ ರಾಜ್ಯದ ಜನರ ಜೊತೆ, ಯಾವುದೇ ಹೋರಾಟಕ್ಕೆ ನಮ್ಮ ನೀರಿನ ಹಕ್ಕಿಗಾಗಿ ನಾವು ತಯಾರಿದ್ದೇವೆ. ನಾವ್ಯಾಕೆ ಬೀದಿಗೆ ಇಳಿದಿಲ್ಲ, ನಾವ್ಯಾಕೆ ಇದನ್ನು ಇನ್ನು ರಾಜಕೀಯ issue ಮಾಡಿಲ್ಲವೆಂದರೆ ನಮಗೆ ನಿಜವಾಗಿ ನಂಬಿಕೆ ಇದೆ. ಇದರಲ್ಲಿ ಯಾರು ಪಾತ್ರವಹಿಸುತ್ತಿಲ್ಲ, ಇದರಲ್ಲಿ ಯಾರು ಉದಾಸೀನ ಮಾಡುತ್ತಿಲ್ಲವೆಂದು ಹೇಳಿ ನಂಬಿಕೆ ಇದೆ. ಆ ನಂಬಿಕೆಯನ್ನು ಸರ್ಕಾರ ಉಳಿಸಿಕೊಳ್ಳಬೇಕಾಗುತ್ತದೆ. ನೀವು ಹೇಗಾದರೂ ಮಾಡಿ ಇವತ್ತು ಈ ರಾಜ್ಯಕ್ಕೆ ದಕ್ಕಬೇಕಾದ ನೀರನ್ನು ಉಳಿಸಿ ಕೊಡಿ ಎಂದು ಕೇಳಿಕೊಂಡು ಮತ್ತೊಂದು ಸಲ ನಮ್ಮ ನಾಯಕರು ಮಾನ್ಯ ವಾಟಾಳ್ ಅವರನ್ನು ನಾನು ಅಭಿನಂದಿಸುತ್ತೇನೆ. ಪಾಪ, ನಾವು ಅವರ ಜೊತೆ

ಸಕ್ರಿಯವಾಗಿ ಸೇರುವುದಕ್ಕಾಗಲಿಲ್ಲ. ಅನ್ಯಾಯವನ್ನು ಅವರಿಗೆ ಮಾಡಿಬಿಟ್ಟಿದ್ದೇವೆ. ಅದಕ್ಕಾಗಿ ಕ್ಷಮಿಸಬೇಕು. ಈ ರಾಜ್ಯದಲ್ಲಿ ಏನೊಂದು ಹಿತರಕ್ಷಣ ಸಮಿತಿಯನ್ನು ಮಾಡಿ ಹೋರಾಟವನ್ನು ಮಾಡಿದಿರಿ, ನಿಜವಾಗಿ ಒಳ್ಳೆಯ ಕೆಲಸವನ್ನು ಮಾಡಿ ಇವತ್ತು ತಾವು ರಾಜ್ಯದ ಜನತೆಯನ್ನು ಎಚ್ಚರ ಮಾಡಿದ್ದೀರಿ, ಬೆಳಕು ಚೆಲ್ಲಿದ್ದೀರಿ ಎಂದು ಹೇಳಿ ಅದರ ಜೊತೆಗೆ ಮಂಡ್ಯದ ಜನರು ಏನು ಇವತ್ತು ಶಾಂತಿಯುತವಾಗಿ ಹೋರಾಟ ಮಾಡಿ ದಿನನಿತ್ಯ ಇವತ್ತು ಕರ್ನಾಟಕದಲ್ಲಿ issue ಇನ್ನು ಜೀವಂತವಾಗಿದೆ ಎಂದು ಹೇಳಿ ಚಿತ್ರಿಸಿಕೊಂಡು ಬರುತ್ತಿದ್ದಾರೆ, ಇದು ನಿಜವಾಗಿ ಒಳ್ಳೆಯ strategy ಎಂದು ಹೇಳಿ ನನ್ನ ಭಾವನೆ. ಅದಕ್ಕೋಸ್ಕರ ಅವರನ್ನು ಅಭಿನಂದಿಸುತ್ತೇವೆ. ನಾವು ಕೂಡ ತುಮಕೂರಿನಲ್ಲಿ ಅದನ್ನೇ ಮಾಡುತ್ತಿದ್ದೇವೆ. ನಮಗೇನು ಅನ್ಯಾಯವಾಗಿದೆ, ಸಮಾಧಾನವಾಗಿ ನಿಂತುಕೊಂಡು ಹೇಳುತ್ತಿದ್ದೇನೆ. ನೋಡಿ, ನಮಗೆ ಅನ್ಯಾಯವಾಗುತ್ತಿದೆ, ನೋಡಿ ನೋಡಿ ಎಂದು. ಇದು ಜಾಸ್ತಿಯಾಗುವವರೆಗೆ ಬಿಡದ ಹಾಗೆ ಕೇಂದ್ರ ಸರ್ಕಾರ ಮತ್ತು ನೀವು ಕುಳಿತುಕೊಂಡು ಏನಾದರೂ ಒಂದು ಚರ್ಚೆಯನ್ನು ಮಾಡಿ ಬಗೆಹರಿಸಬೇಕು. ಎಲ್ಲದಕ್ಕೂ ಒಂದು ಮಿತಿ ಇರುತ್ತೆ. ಸಮಾಧಾನವಾಗಿ 15 ದಿವಸ, ಒಂದು ತಿಂಗಳು ನಾವು strike ಮಾಡಿ ಎಂದು ಕೇಳಿಕೊಳ್ಳಬಹುದು. ಯಾವತ್ತಾದರೂ ಸಿಟ್ಟೆದ್ದು ಯಾರಾದರೂ ಕಲ್ಲನ್ನು ಹೊಡೆದುಬಿಟ್ಟರೆ ಏನು ಮಾಡುವುದು? ಏನು ದಿವಸ ಇದೇ ಆಯಿತು ಎಂದು ಹೇಳಿ. ಅಲ್ಲಿಗೆ ಬರುವವರೆಗೆ ದಯಮಾಡಿ ಬಿಡಬಾರದು ಎಂದು ಕೇಳಿಕೊಂಡು ಈ ಭಾಷಣದಲ್ಲಿ ಭಾಗವಹಿಸಲು ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಹೆಗ್ಡೆಯವರೇ, ತಾವು ಮಾತನಾಡಿ.

ಶ್ರೀ ಜಯಪ್ರಕಾಶ್ ಹೆಗ್ಡೆ: ಪ್ರತಿ ಸಲ ಕಾವೇರಿ ಬೇಸಿನ್‌ನಿಂದ ಬರುವವರಿಗೆ ಮಾತನಾಡಲು ಅವಕಾಶ ಕೊಟ್ಟಿಲ್ಲ ಎಂಬ ಮಾತು ಬಂತು. ಅವರಿಗೆ ಕೊಟ್ಟುಬಿಡಿ. ಅವರು ಮಾತನಾಡಲಿ. ಹಿಂದೆ ಇರುವವರಿಗೆ ಅವಕಾಶ ಕೊಡಿ. ಅವರುಗಳು ಮಾತನಾಡಲಿ. ಆಮೇಲೆ ನಾನು ಮಾತನಾಡುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಹೆಗ್ಡೆಯವರಿಗೆ ಯಾವುದೋ ಒಂದು information ಬೇಕಂತೆ. ಆ information ಇನ್ನೂ ಬಂದಿಲ್ಲ. ಮಾನ್ಯ ಸಿದ್ದರಾಮಯ್ಯನವರೇ ತಾವು ಮಾತನಾಡಿ.

ಶ್ರೀ ಕೆ.ಎನ್. ರಾಜಣ್ಣ : ಮಾನ್ಯ ವಾಟಾಳ್ ಅವರು ದಿವಸ ಮಾತನಾಡಿ ಮಾತನಾಡಿ, ಬೇರೆಯವರು ಏನು ಮಾತನಾಡುತ್ತಾರೋ ನೋಡೋಣ ಎಂದು ಸುಮ್ಮನೆ ಇದ್ದಾರೆ ಅಷ್ಟೆ.

ಶ್ರೀ ಸಿದ್ದರಾಮಯ್ಯ (ಚಾಮುಂಡೇಶ್ವರಿ): ಮಾನ್ಯ ಉಪಾಧ್ಯಕ್ಷರೇ, ಕಾವೇರಿ tribunalನ ಅಂತಿಮ ತೀರ್ಪು ಏನು ಫೆಬ್ರವರಿ 5ನೇ ತಾರೀಖು ಹೊರ ಬಂತು, ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಇವತ್ತು ತಾವು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಅದಕ್ಕಾಗಿ ನಿಮಗೆ ಧನ್ಯವಾದಗಳನ್ನು ಹೇಳುತ್ತೇನೆ, ಸರ್ಕಾರ ಕೂಡ ಚರ್ಚೆಗೆ ಒಪ್ಪಿಕೊಂಡಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಇವತ್ತು ಇದರ ಬಗ್ಗೆ ಚರ್ಚೆ ಆಗಬೇಕು ಎಂದು ಹೇಳಿ ಒಂದು ನಿರ್ಣಯವನ್ನು ಈ ಸದನದಲ್ಲಿ ಮಂಡಿಸಿದರು. ನಾನು ಕೂಡ ಅದಕ್ಕೆ ಅನುಮೋದನೆ ಮಾಡಿದೆ. ಎಲ್ಲ ವಿರೋಧ ಪಕ್ಷದವರು ಕೂಡ ಒಪ್ಪಿಕೊಂಡಿದ್ದಾರೆ. ಸರ್ಕಾರ ಕೂಡ ಒಪ್ಪಿಕೊಂಡಿದೆ. ಇದು ತತ್‌ಕ್ಷಣದಲ್ಲಿ ಚರ್ಚೆ ಆಗಿದ್ದರೆ ಚೆನ್ನಾಗಿತ್ತು. ತೀರ್ಪು ಬಂದ ತಕ್ಷಣವೇ ಚರ್ಚೆಯಾಗಿದ್ದರೆ ಇನ್ನು ಹೆಚ್ಚು ಭರವಸೆ ಬರುತ್ತಿತ್ತು. ಹೆಚ್ಚು ಮಹತ್ವ ಬರುತ್ತಿತ್ತು. ಹೆಚ್ಚು ಗಂಭೀರತೆ ಬರುತ್ತಿತ್ತು. ಅದು ಆಗಲಿಲ್ಲ. ನಾವು ಅವತ್ತು ಅಲ್ಲಿ ಚರ್ಚೆ ಮಾಡಬೇಕೆಂದಾಗ ಇನ್ನು judgment ಬಂದಿಲ್ಲ, ಜಡ್ಜ್ ಮೆಂಟಿನ ಪೂರ್ಣ ಪಾಠ ಸರಿಯಾಗಿ ಸಿಕ್ಕಿಲ್ಲ. ಹಾಗಾಗಿ ಕೆಲವು ದಿನಗಳು ಬೇಕಾಗುತ್ತವೆ ಎಂದು ಹೇಳಿ ಸರ್ಕಾರ ಕೂಡ ಹೇಳಿತು. ಆಮೇಲೆ ಸದನದಲ್ಲಿ ಬೇರೆ ಬೇರೆ ಬೆಳವಣಿಗೆಗಳೆಲ್ಲ ಆದವು. ಚರ್ಚೆ ಕೂಡ ಮಾಡುವುದಕ್ಕಾಗಲಿಲ್ಲ. ಆದರೆ ಸ್ವಲ್ಪ ಸ್ಥೂಲವಾಗಿ ಚರ್ಚೆ ಮಾಡಿದ್ದೆವು. ಈ ತೀರ್ಪಿನಿಂದ ಕರ್ನಾಟಕ ರಾಜ್ಯಕ್ಕೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಬರತಕ್ಕಂಥ ರೈತರಿಗೆ ಮತ್ತೆ ಆ ಭಾಗದಲ್ಲಿ ಬರತಕ್ಕ ಜನರು, ವಾಸ ಮಾಡತಕ್ಕ ಜನರು, ನಗರ ಪ್ರದೇಶಗಳು ಮತ್ತು ಹಳ್ಳಿಗಾಡು. ಅವರಿಗೆ ಕುಡಿಯಲಿಕ್ಕೆ ನೀರಿಗೆ, ನೀರಾವರಿಗೆ, ಕೈಗಾರಿಕೆಗಳಿಗೆ ಎಷ್ಟು ಅನ್ಯಾಯಗಳಾಗಿದ್ದಾವೆ, ಈ ಅನ್ಯಾಯವನ್ನು ನಾವು ನಿರೀಕ್ಷೆ ಮಾಡಿರಲಿಲ್ಲ. ಇಷ್ಟೊಂದು ಅನ್ಯಾಯವಾಗುತ್ತದೆ ಎಂದು ನಾವು ನಿರೀಕ್ಷೆ ಮಾಡಿರಲಿಲ್ಲ. ನಮಗೆ ಒಳ್ಳೆಯ ಕೇಸ್ ಇದೆ, ನಮಗೆ ನ್ಯಾಯ ಸಿಗುತ್ತದೆ ಎಂದು ಹೇಳಿ ಸಂಪೂರ್ಣ ಭರವಸೆಯನ್ನು ನಾವು

ಇಟ್ಟುಕೊಂಡಿದ್ದೆವು. ನಮ್ಮ ಭರವಸೆ ಇವತ್ತು ಈ ತೀರ್ಪಿನಿಂದ ಹುಸಿಯಾಗಿದೆ ಎಂದು ಹೇಳಬೇಕಾಗುತ್ತದೆ. ಇವತ್ತು ನಾವು ಇಷ್ಟು ನೀರು ನಮಗೆ, ನಮ್ಮ ನೀರಾವರಿ ಪ್ರದೇಶಕ್ಕೆ, ನಮ್ಮ ಭಾಗಕ್ಕೆ, ನಮ್ಮ ಭಾಗದಲ್ಲಿ ನಮ್ಮ ಕರ್ನಾಟಕದಲ್ಲಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಎಂದು ನಾವೇನು ಬಹಳ ದೊಡ್ಡ demand ಏನೂ ಮಾಡಿರಲಿಲ್ಲ. ಅಥವಾ ನಮ್ಮ demand un-reasonable ಆಗಿ ಕೂಡ ಇರಲಿಲ್ಲ. ನಾನು ಜಡ್ಜ್‌ಮೆಂಟನ್ನು ಓದಿದ, ಪ್ರಕಾರ. ನಾವು ಡಿಮ್ಯಾಂಡ್ ಮಾಡಿರುವ ಪ್ರಕಾರ ನಮ್ಮ ಡಿಮ್ಯಾಂಡ್ ರೀಸನಬಲ್ ಆಗಿಯೇ ಇದೆ. 408 ಟಿ.ಎಂ.ಸಿ ಕೇಳಿದ್ದೇವೆ. ಅದು ಕುಡಿಯುವ ನೀರು ಕೈಗಾರಿಕೆಗಳಿಗೆ, ಬೇರೆ ಬೇರೆಯದಕ್ಕೆಲ್ಲಾ ಸೇರಿ 465 ಟಿ.ಎಂ.ಸಿ ನೀರು ಬೇಕು ಎಂದು ಟ್ರಿಬ್ಯೂನಲ್ ಮುಂದೆ ನಮ್ಮ ವಾದವನ್ನು ಮಂಡಿಸಿದ್ದೇವೆ. 408 ಟಿ.ಎಂ.ಸಿ. ನೀರಾವರಿಗೆ ಕೊಟ್ಟರೆ, ಇವತ್ತು on going projects ಗಳು ಮೊದಲು ಇದ್ದಂತಹ ಅಚ್ಚುಕಟ್ಟು ಪ್ರದೇಶಗಳು, ಇವಕ್ಕೆಲ್ಲಾ ನೀರು ಸಾಕಾಗುತ್ತದೆ. ಅಷ್ಟನ್ನು ಕೊಡಬೇಕೆಂದು ಹೇಳುವುದು most reasonable and just demand. ಆ ತರಹ ನಾವು ನಮ್ಮ ಪರವಾಗಿ ವಾದ ಮಾಡತಕ್ಕಂಥ ವಕೀಲರುಗಳು, ಚೆನ್ನಾಗಿಯೇ ವಾದ ಮಾಡಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಜಡ್ಜಮೆಂಟ್ ಎಲ್ಲಾ ಓದಿದ ಮೇಲೆ, ವಾದ ಚೆನ್ನಾಗಿ ಮಾಡಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಇವತ್ತು ನಮ್ಮ ವಾದವನ್ನು ಟ್ರಿಬ್ಯೂನಲ್‌ನಲ್ಲಿ ಪರಿಗಣಿಸಿಲ್ಲ. ನಾವು ಕೊಟ್ಟಿರತಕ್ಕಂಥ ಎವಿಡೆನ್ಸ್‌ನ್ನು ಕೂಡ ಸರಿಯಾದ ರೀತಿಯಲ್ಲಿ ಅಪ್ರಿಷಿಯೇಟ್ ಮಾಡಿಲ್ಲ. The Tribunal has failed to appreciate the evidence adduced by Government of Karnataka. ಅದನ್ನೆಲ್ಲಾ ಸರಿಯಾದ ರೀತಿಯಲ್ಲಿ ಪರಿಗಣಿಸಿದ್ದರೆ, ಸರಿಯಾದ ರೀತಿಯಲ್ಲಿ ಅಪ್ರಿಷಿಯೇಟ್ ಮಾಡಿದ್ದರೆ, ಕನ್ಸಿಡರ್ ಮಾಡಿದ್ದರೆ, ನಮಗೆ ನ್ಯಾಯ ಸಿಗುತ್ತಿತ್ತು ಎಂದು ಹೇಳಿ ನನಗೆ ಅನಿಸುತ್ತದೆ. ನಾನು ಸಹ ಸ್ವಲ್ಪ ದಿನ ಲಾಯರ್‌ಆಗಿ ಕೆಲಸ ಮಾಡಿದ್ದೇನೆ. ಬಹಳ ದಿನ ಏನು ಲಾಯರ್ ಕೆಲಸ ಮಾಡಲು ಆಗಲಿಲ್ಲ. ಸ್ವಲ್ಪ ದಿನ ಲಾಯರ್ ಆಗಿ ಕೆಲಸ ಮಾಡಿದ್ದೆ. ಅದರ ಆಧಾರದ ಮೇಲೆ ಹೇಳುವುದಾದರೆ ಇಲ್ಲಿರತಕ್ಕಂಥ ಕಾನೂನು ನಮ್ಮ

ಪರವಾಗಿ ಇರತಕ್ಕಂದ್ದು, faqt ನಮ್ಮ ಪರವಾಗಿ ಇರತಕ್ಕದ್ದು, ಎವಿಡೆನ್ಸ್ ನಾವು ಕೊಟ್ಟಿರತಕ್ಕಂಥದ್ದು ಇದೆಲ್ಲವನ್ನೂ ಕೂಡ ತೂಕ ಮಾಡಿ ನೋಡಿದಾಗ ನಮಗೆ ಹೆಚ್ಚು ಪ್ರಮಾಣದ ನೀರು ಬರಬೇಕಾಗಿತ್ತು. ಇವತ್ತು ನಮಗೆ ಕೊಟ್ಟಿರತಕ್ಕಂಥದ್ದು ಬರೇ 270 tmcft., ನೀರು. ಅದರಲ್ಲಿ ಎಲ್ಲವೂ ಸೇರಿಕೊಂಡು ಬಿಟ್ಟಿದೆ. ಕುಡಿಯುವ ನೀರು, ಕೈಗಾರಿಕೆಗಳಿಗೆ, ಮುಂದೆ ನಗರಗಳು ಬೆಳೆದರೆ, ಅದಕ್ಕೆ ಕುಡಿಯುವ ನೀರು. ನಾವು ಏನೇನು ಮಾಡುತ್ತೇವೋ ಅದೆಲ್ಲವೂ ಸೇರಿದೆ. ನೀವು ಏನೇನು ಮಾಡಿಕೊಳ್ಳುತ್ತೀರೋ ಅವೆಲ್ಲಾ ಮಾಡಿಕೊಳ್ಳಿ ಎಂದು ಹೇಳಿದ್ದಾರೆ. "18 ಲಕ್ಷ 85 ಸಾವಿರ ಎಕರೆಗೆ 270 tmcft ನೀರು ಸಾಕಾಗುತ್ತದೆ. ನಾವು ಇಷ್ಟನ್ನು ಅಲೊಕೇಟ್ ಮಾಡಿದ್ದೇವೆ. ಅದರಲ್ಲಿ ನೀವು 18 ಲಕ್ಷವನ್ನಾದರೂ ಮಾಡಿಕೊಳ್ಳಿ, 12 ಲಕ್ಷವನ್ನಾದರೂ ಮಾಡಿಕೊಳ್ಳಿ ಅಥವಾ 20 ಲಕ್ಷವನ್ನಾದರೂ ಮಾಡಿಕೊಳ್ಳಿ. 270 tmcft ನೀರನ್ನು ಕೊಟ್ಟಿದ್ದೇವೆ." ಇದು ಟ್ರಿಬ್ಯೂನಲ್ ನವರು ಕೊಟ್ಟಿರತಕ್ಕಂಥ ತೀರ್ಪು. ಈ ಅಲೋಕೇಶನ್ ಎಷ್ಟು ಅವೈಜ್ಞಾನಿಕವಾಗಿದೆ ಮತ್ತು ಆಧಾರ ರಹಿತವಾಗಿದೆ ಎನ್ನತಕ್ಕದ್ದನ್ನು ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಕರ್ನಾಟಕದಲ್ಲಿ ಮಳೆ ಬಿದ್ದು ನೀರು ಶೇಖರಣೆ ಆಗತಕ್ಕದ್ದು ಇಡೀ ಕರ್ನಾಟಕದ ಉದ್ದಗಲಕ್ಕೂ ಒಟ್ಟು ನೀರಿನ ಪ್ರಮಾಣ 50% dependability ತೆಗೆದುಕೊಂಡು, ಏನು 740 tmcft. ಸಿಗುತ್ತದೆ. ಕಾವೇರಿ ಪೂರಾ ಬೇಸಿನ್‌ನಲ್ಲಿ ಏನು ಲೆಕ್ಕಾಚಾರ ಹಾಕಿದ್ದಾರೆ, ಅದರಲ್ಲಿ ಶೇ. 53% ಅಂದರೆ 392 tmcft ನೀರು ನಮ್ಮಲ್ಲೇ ಮಳೆ ನೀರಿನಿಂದ ಆಗುತ್ತದೆ. ಆ 740 tmcft ಗೆ 392 tmcft ನೀರು ನಮ್ಮಿಂದ ಹೋಗುತ್ತದೆ. ಅದು ಕರ್ನಾಟಕದ್ದೇ. ಆದರೆ ನಮಗೆ ಕೊಟ್ಟಿರುವುದು ಎಷ್ಟು? 392 tmcft ವಾಟರ್ ನಮ್ಮಲ್ಲೇ ಕರ್ನಾಟಕದಲ್ಲೇ ಮಳೆ ಬಿದ್ದು ನೀರು ಲಭ್ಯ ಆಗುತ್ತಿದ್ದರೂ ಸಹ, ನಮಗೆ 270 tmcft ಕೊಡುತ್ತಾರೆ. ಅವರಿಗೆ 770 tmcft ಒಳಗೆ ಅವರದ್ದು ಕೇವಲ 36% ಅಷ್ಟೇ ಮಳೆ ನೀರು ಅವರಿಗೆ ಆಗುವುದು. 36% ಮಾತ್ರ, ಅಂದರೆ ಸುಮಾರು 222 tmcft of water. ಅವರ delta area ದಲ್ಲಿ ತಮಿಳುನಾಡಿನಲ್ಲಿ ಏನು ಕಾವೇರಿ ಹರಿಯುತ್ತದಲ್ಲಾ ಟ್ರಿಬ್ಯುಟರೀಸ್‌ಗಳು,

ಮಳೆ ನೀರು ಎಲ್ಲಾ ಸೇರಿಕೊಂಡು, ಅವರಿಗೆ ಸಿಗತಕ್ಕದ್ದು ಅಲ್ಲಿ ಉತ್ಪನ್ನ ಆಗತಕ್ಕದ್ದು ಕೇವಲ 222 tmcft water. ಎಲ್ಲಿ 222 tmcft water ಮಳೆ ನೀರಲ್ಲಿ ಲಭ್ಯ ಆಗುತ್ತದೆ? ಅಲ್ಲಿ 419 tmcft ಕೊಟ್ಟಿರುವುದು. ಅವರಿಗೆ ಅಲೋಕೇಶನ್ ಮಾಡಿರುವುದು. ಅದಲ್ಲದೇ 10 tmcft water environmental protection ಗೆ ಎಂದು ಕೊಡುತ್ತಾರೆ. 429 ಆಯಿತು. ಸೀಪೇಜ್ ವಾಟರ್ ಎಂದು ಹೇಳಿ 4ಣಟಛಿಜಿಣ ತಿಚಿಣಜಡಿ ಕೊಡುತ್ತಾರೆ. 433 tmcft ಆಯಿತು. ಕಬಿನಿಯಿಂದ ಕೇರಳಕ್ಕೆ ಕೊಡತಕ್ಕ ಪಾಲಿನಲ್ಲಿ 21 tmcft ಯನ್ನು ಅವರೇ ಬಳಸಿಕೊಳ್ಳಬಹುದು. ಅದನ್ನು ಕಬಿನಿಯಿಂದ ಬಿಡಬೇಕು. ಕೇರಳದವರು ಅದನ್ನು ಈಗ ಉಪಯೋಗಿಸಿಕೊಳ್ಳಲು ಆಗುವುದಿಲ್ಲ. ಅಲ್ಲಿ reservoirs ಇಲ್ಲ. ಅಲ್ಲಿಯವರೆಗೆ ನೀವು 21 tmcft ಯನ್ನು ಬಳಸಿಕೊಳ್ಳಿ ಎಂದು ಕೂಡ ಹೇಳುತ್ತಾರೆ, 33+21 ಎಷ್ಟಾಯಿತು? 54 ಆಯಿತು. ಅಂದರೆ 454 tmcft water ಆಯಿತು. ಅದರ ಜೊತೆಗೆ ಅಲ್ಲಿ under ground water ಇದೆಯಲ್ಲಾ? ಗಿಓಆಕ ಅವರು ಹೇಳುತ್ತಾರೆ. ಇದನ್ನು ನಾವು ಹೇಳುವುದಲ್ಲ. United Nations ನವರು ಅವರ ಒಂದು ಟೀಮ್ ಕಳುಹಿಸಿ ಅಲ್ಲಿ under ground water ಎಷ್ಟು ಸಿಗುತ್ತದೆ, ಎಂದು ಹೇಳಿ ಅದನ್ನೆಲ್ಲಾ ಲೆಕ್ಕ ಹಾಕಿಸಿದ್ದಾರೆ, ಅವರು ಕೊಟ್ಟಿರುವುದು impartial report. ನಾವೇನೂ ಕೊಟ್ಟಿರುವುದಲ್ಲ, ಅಥವಾ ಬೇರೆ ರಾಜ್ಯದವರು ಕೊಟ್ಟಿರುವುದಲ್ಲ, ಕೇಂದ್ರ ಸರ್ಕಾರದವರೂ ಕೊಟ್ಟಿರುವುದಲ್ಲ. United Nations ನವರು ಕೊಟ್ಟಿರುವಂತಹದು. ಅವರು ಕೊಟ್ಟಿರುವಂತಹ ರಿಪೋರ್ಟ್ ಪ್ರಕಾರ 129 tmcft water ಸಿಗುತ್ತದೆ ಎಂದು ಹೇಳಿದ್ದಾರೆ. ಇದು ಒಂದು ಭಾಗ, ಅವರು ಹೇಳಿರುವಂತಹದು. UNDP ಕೊಟ್ಟಿರತಕ್ಕಂಥ ರಿಪೋರ್ಟ್. ಇನ್ನೊಂದು ಅವರೇ ಒಪ್ಪಿಕೊಂಡಿರತಕ್ಕಂತಹದು 47 tmcft water. ಅವರೇ ಒಪ್ಪಿಕೊಂಡಿರುವುದು. Some of the averments have been admitted by the Government of Tamil Nadu. It is an admitted fact. Under the Evidence Act, admitted facts need not be proved. This is the basic principle under the Evidence Act. It is specifically, categorically

admitted by the Tamil Nadu Government. ಇದು admit ಆಗಿದ್ದರೂ ಕೂಡ ಅದನ್ನು ಏನು ಹೇಳುತ್ತಾರೆ? ಲೆಕ್ಕಾಚಾರದ ಪ್ರಕಾರ ನೀರಾವರಿ ತಜ್ಞರು, technical persons ಏನು ಹೇಳುತ್ತಾರೆ ಎಂದರೆ 47 tmcft under ground water ಇದೆಯಲ್ಲಾ, that is equivalent to 72 tmcft of surface water ಎಂದು ಹೇಳುತ್ತಾರೆ. "47 tmcft water available in the under ground is equivalent to 72 tmcft of surface water." ಅವರೇ ಒಪ್ಪಿಕೊಂಡಿರುವುದು, ಅವರು ಅನಲೈಸ್ ಮಾಡುತ್ತಾ technical report ನಲ್ಲಿ ಹೇಳಿದ್ದಾರೆ. 47 tmcft water under ground ನಲ್ಲಿ ಸಿಗುತ್ತದಲ್ಲಾ, ಆ ನೀರು 72 tmcft water, surface water ಇರುತ್ತದಲ್ಲಾ, ಆ ಕ್ವಾಂಟಿಟಿಗೆ ಸಮ ಎಂದು ಹೇಳುತ್ತಾರೆ. ಅದು ಇನ್ನೂ 454ಕ್ಕೆ 72 ಸೇರಿಸಿದರೆ ಎಷ್ಟಾಗುತ್ತದೆ? 454 + 72. ಸುಮಾರು 526 tmcft water ಆಗುತ್ತದೆ. ಆದರೆ ಅವರಿಗೆ ಟ್ರಿಬ್ಯೂನಲ್ ನವರು ಹೇಳಿರುವುದು 24 ಲಕ್ಷ 71 ಸಾವಿರ ಎಕರೆಗೆ ನೀರು ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ನಮಗೆ 18 ಲಕ್ಷದ 85 ಸಾವಿರ ಎಕರೆಗೆ ನೀರು ಕೊಡಬೇಕೆಂದು ಹೇಳಿದ್ದಾರೆ. ನೋಡಿ ನಮಗೆ 270, ಅವರಿಗೆ ವಾಸ್ತವಿಕವಾಗಿ ಈಗ ಸಿಗತಕ್ಕ ನೀರು, ಈ ತೀರ್ಪಿನ ಪ್ರಕಾರ, 526 tmcft water. ಇದರಿಂದ ಕರ್ನಾಟಕ್ಕೆ ಅನ್ಯಾಯ ಆಗಿಲ್ಲ ಎಂದು ಹೇಗೆ ಹೇಳಲಿಕ್ಕೆ ಸಾಧ್ಯವಾಗುತ್ತದೆ? ಇದಕ್ಕಿಂತ ದೊಡ್ಡ ಅನ್ಯಾಯ ಬೇರೆ ಯಾವುದೂ ಆಗಲಿಕ್ಕೆ ಸಾಧ್ಯ ಇಲ್ಲ. ಬಹಳ ಸ್ಪಷ್ಟವಾಗಿದೆ. ಮೊನ್ನೆ 30 tmcft ಕೇರಳಕ್ಕೆ ಅಲಾಟ್ ಮಾಡಿದ್ದಾರೆ. ಅವರು 99tmcft ಕೇಳಿದ್ದರು. 30tmcft ನೀರನ್ನು ಅವರಿಗೆ ಕೊಟ್ಟಿದ್ದಾರೆ. ಆ 30 tmc ft. water ಅನ್ನು ಏನು ಮಾಡಿದ್ದಾರೆಂದರೆ, 6 tmc ft. water ಭವಾನಿಯಿಂದ ಹೋಗಬೇಕು, 3 tmc ft. water ಅಮರಾವತಿಯಿಂದ ಹೋಗಬೇಕು. ಒಟ್ಟು 9 tmc ft. water ತಮಿಳುನಾಡಿನಿಂದ ಕೇರಳಕ್ಕೆ ಹೋಗಬೇಕು. ಅವರಿಗೆ 21 tmcಯಷ್ಟೇ ಉಪಯೋಗವಾಗುವುದು. ಕೇರಳದವರು ಆ 9 tmc ನೀರನ್ನು ಉಪಯೋಗಿಸಿಕೊಳ್ಳುತ್ತಾರೋ, ಏನೋ ಗೊತ್ತಿಲ್ಲ. ಕೇರಳದವರು 9 tmc ft. water ಉಪಯೋಗಿಸಿಕೊಳ್ಳುವುದು. ಕಬಿನಿಯಿಂದ ನೀವು 21 tmc ನೀರನ್ನು

ಬಿಡಿ. ಆ ರೀತಿ ಬಿಟ್ಟ ನೀರನ್ನು ಕೇರಳದವರು ಬಳಸಿಕೊಳ್ಳುವಂತಿಲ್ಲ. ಈ ತೀರ್ಪಿನ ಪ್ರಕಾರ ಕೇರಳದವರು ಅದನ್ನು ಬಳಸಿಕೊಳ್ಳುವಂತಿಲ್ಲ. ಏಕೆಂದರೆ, ಅವರಿಗೆ ನೀರು ಶೇಖರಣೆ ಮಾಡಿಕೊಳ್ಳುವುದಕ್ಕೆ reservoirs ಇಲ್ಲ ಮತ್ತು ನೀರು ಬಳಸಿಕೊಳ್ಳುವುದಕ್ಕೆ ಶಕ್ತಿ ಇಲ್ಲ, ಸಾಮರ್ಥ್ಯವಿಲ್ಲ. ಈ ಸಾಮರ್ಥ್ಯವಿಲ್ಲದಿರುವಾಗ, ಅವರಿಗೆ ಆ ಸಾಮರ್ಥ್ಯ ಬರುವವರೆಗೆ ತಮಿಳುನಾಡಿನವರಾದ ನೀವೇ ನೀರನ್ನು ಉಪಯೋಗಿಸಿಕೊಳ್ಳುತ್ತಿರಿ! ಎಂದರೆ ಇದರಲ್ಲಿ ನ್ಯಾಯವಿದೆಯೇ? ಎಲ್ಲಿಯಾದರೂ ಇದನ್ನು ನ್ಯಾಯವೆಂದು ಹೇಳುವುದಕ್ಕೆ ಬರುತ್ತದೆಯೇ? ಅಥವಾ ಇದು ವೈಜ್ಞಾನಿಕವಾಗಿ ಇದೆಯೆಂದು ಏನಾದರೂ ಹೇಳುವುದಕ್ಕೆ ಬರುತ್ತದೆಯೇ? ಇದರಲ್ಲೇನಾದರೂ rationality ಇದೆಯೇ? ಇದರಲ್ಲಿ legality ಇದೆಯೇ? ಈ ತೀರ್ಪು ಸರಿಯಿಲ್ಲ ಎನ್ನುವುದಕ್ಕೆ ಬಹಳ ಸ್ಪಷ್ಟವಾಗಿ ಮೇಲ್ನೋಟಕ್ಕೇ ಅರ್ಥವಾಗುತ್ತದೆ. ನೀರು ಶೇಖರಣೆ ಮಾಡುವವರು ನಾವು, ಕಬಿನಿಯಲ್ಲಿ ನೀರು ಶೇಖರಿಸುವವರು ನಾವು, reservoir ಕಟ್ಟಿರುವವರು ನಾವು, ನೀರನ್ನು ಶೇಖರಣೆ ಮಾಡಿ, ಹಣ ಖರ್ಚು ಮಾಡಿ ಅಣೆಕಟ್ಟು ಕಟ್ಟಿದವರಾದ ನಾವು ತಮಿಳುನಾಡಿಗೆ ಬಳಸಿಕೊಳ್ಳಿ ಎಂದು ನೀರನ್ನು ಬಿಡಬೇಕು! ಇದನ್ನು ಯಾರಾದರೂ ನ್ಯಾಯವೆಂದು ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ? ಇದರಲ್ಲಿ ಸ್ವಲ್ಪವಾದರೂ ಕೂಡ justification ಇದೆಯೇ? 'ನೀವು ಕಷ್ಟಪಟ್ಟು ಕಬಿನಿ dam ಕಟ್ಟಿಕೊಂಡಿದ್ದೀರಿ, ನಿಮ್ಮ ಹತ್ತಿರ reservoir ಇದೆ, ಕೇರಳದವರಿಗೆ ಈಗ ಬಳಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ, ನೀವು ಬಂಡವಾಳ ಹಾಕಿದ್ದೀರಿ, ದುಡ್ಡು ಖರ್ಚು ಮಾಡಿದ್ದೀರಿ, ಪಾಪ! ಬಹಳ ಕಷ್ಟಪಟ್ಟು ಮಾಡಿಕೊಂಡಿದ್ದೀರಿ' ಎಂದು ನಮಗೆ ಹೇಳಬಹುದಾಗಿತ್ತಲ್ಲ. State fundನಲ್ಲಿ non-planನಲ್ಲಿ ಖರ್ಚು ಮಾಡಿ ನಾವು ಕಷ್ಟಪಟ್ಟು ಇದೆಲ್ಲವನ್ನು ಮಾಡಿದರೂ ಕೂಡ ಅದನ್ನು ಗಣನೆಗೆ ತೆಗೆದುಕೊಳ್ಳದೇ ತಮಿಳುನಾಡಿಗೆ ನೀರನ್ನು ಉಪಯೋಗಿಸಿಕೊಳ್ಳಿ ಎಂದು ಹೇಳಿದ್ದಾರೆ. tribulನವರು ನಮಗೆ ಹೇಳಬಹುದಾಗಿತ್ತಲ್ಲ? ಕೇರಳದವರು ಎಲ್ಲಿಯವರೆಗೆ ಉಪಯೋಗಿಸಿಕೊಳ್ಳವುದಕ್ಕೆ ಸಾಮರ್ಥ್ಯ ಬರುತ್ತದೋ, ಅಲ್ಲಿಯವರೆಗೆ ಕರ್ನಾಟಕದವರು 21 tmc ನೀರನ್ನು ಉಪಯೋಗಿಸಿಕೊಳ್ಳಿ

ಎಂದು ಹೇಳಬಹುದಿತಲ್ಲ? ಇದು ನ್ಯಾಯವಲ್ಲವೇ? ನಮ್ಮ ಪರವಾಗಿ ಕೇಳುವುದಕ್ಕೆ ನ್ಯಾಯ ಇಲ್ಲವೇ? ಇದನ್ನು ಕೊಟ್ಟಿದ್ದರೆ ನ್ಯಾಯ ಇರುತ್ತಿರಲಿಲ್ಲವೇ? ಇದನ್ನು ಕೊಟ್ಟಿದ್ದರೆ, justification ಇರುತ್ತಿರಲಿಲ್ಲವೇ? ಹಾಗಾಗಿ, ಕರ್ನಾಟಕಕ್ಕೆ ಇದೊಂದೇ pointನಿಂದ ಇವತ್ತು ದೊಡ್ಡ ಅನ್ಯಾಯವಾಗಿರುವುದನ್ನು ನಾವು ನೋಡುವುದಕ್ಕೆ ಸಾಧ್ಯ. ಅದರ ಜೊತೆಗೆ, ನಮ್ಮಲ್ಲಿರತಕ್ಕಂಥ ಬರಗಾಲ ತಮಿಳುನಾಡಿನಲ್ಲಿಲ್ಲ. ನಮ್ಮದು drought prone area. ಯಾವಾಗಲೂ ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಿರುತ್ತದೆ. ಇವತ್ತು ಅದನ್ನು ಮಾಡಿದ್ದರಿಂದ ಮಾನ್ಯ ವಾಟಾಳ್ ನಾಗರಾಜ್‌ರವರೆ, ನಿಮಗೆ ಕಬಿನಿ 2ನೇ stage ಮಾಡುವಂತಿಲ್ಲ. ಯಾವುದೇ lift irrigation ಇಲ್ಲ, ಏನೂ ಇಲ್ಲ. ನಾವು ನಾಲ್ಕೂವರೆ ಲಕ್ಷ ಎಕರೆ ಕಬಿನಿಯಲ್ಲಿ ನೀರಾವರಿ ಮಾಡಬೇಕೆಂದು ಎಲ್ಲಾ ಯೋಜನೆಗಳನ್ನೂ ಹಾಕಿಕೊಂಡು ಹಣ ಖರ್ಚು ಮಾಡಿಕೊಂಡು ತಯಾರು ಮಾಡಿಕೊಂಡಿದ್ದೇವೆ. ಇವತ್ತು ಆ ಭಾಗದ ರೈತರ ಗತಿ ಏನಾಗಬೇಕು? ಇವತ್ತು ನಾವು ಯಾವ್ಯಾವ lift irrigation projects ಪ್ರಾರಂಭ ಮಾಡಿದ್ದೇವೋ, ಯಾವ್ಯಾವುದು ಕೆಲಸ ಮಾಡುತ್ತಿವೆಯೋ, ಆ ಯಾವುದೇ lift irrigationಗೂ ನೀರು ಕೊಡಬೇಕೆಂದು ಪರಿಗಣಿಸಿಲ್ಲ.

Exisiting lift irrigations, on going lift irrigations, already functioning lift irrigations, ಇವ್ಯಾವುದಕ್ಕೂ ನೀರು ಕೊಡುವುದಕ್ಕಾಗುವುದಿಲ್ಲವೆಂದು tribulನವರು ಹೇಳುತ್ತಿದ್ದಾರಲ್ಲ. Tribunalನವರು ಈ ರೀತಿ ಹೇಳಿದರೆ, ಇದನ್ನು ನ್ಯಾಯವೆಂದು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ? ಈ ತರಹದ ಅನ್ಯಾಯಗಳು ತೀರ್ಪಿನಲ್ಲಿ ಪ್ರತಿಯೊಂದು ಹೆಜ್ಜೆ ಹೆಜ್ಜೆಯಲ್ಲಿಯೂ ನೋಡುವುದಕ್ಕೆ ಸಾಧ್ಯವಾಗುತ್ತದೆ. ನೀವು ತೀರ್ಪು ಓದುತ್ತಾ ಹೋದರೆ, ತಮಿಳುನಾಡಿನಲ್ಲಿ ನಮ್ಮ ತರಹ ಬರಗಾಲ ಏನಿಲ್ಲ. ನೀವು underground water ಅನ್ನು ಏಕೆ ಪರಿಗಣಿಸುವುದಿಲ್ಲವೆಂದರೆ, ಇಲ್ಲ, ಇಲ್ಲ, underground water ಅನ್ನು ಪರಿಗಣಿಸುವುದಕ್ಕೆ ಬರುವುದಿಲ್ಲ, Surface waterಗೆ ಅದನ್ನು ನಾವು equate ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿಬಿಟ್ಟರೆ ಹೇಗೆ? ಅದಕ್ಕೋಸ್ಕರ, ಸಂಬಂಧಪಟ್ಟ ಕಾನೂನು ಇಲ್ಲವೆಂತಲೂ ಹೇಳುತ್ತಾರೆ.

ಆದರೆ, ಕುಡಿಯುವ ನೀರಿಗೇಕೆ ಲೆಕ್ಕ ಹೇಳಿದ್ದೀರಿ? ಕಾವೇರಿ ಕುಡಿಯುವ ನೀರಿಗೆ 50% underground water ತೆಗೆದುಕೊಳ್ಳಿ ಎಂದು ಹೇಳಿದ್ದೀರಲ್ಲ, ತಮಿಳುನಾಡಿಗೂ ಹೇಳಿದ್ದೀರಲ್ಲ, why not for irrigation purposes? Is it not a clear case of erring on the part of the tribunal? The tribunal has totally erred. ಈ facts ಅನ್ನು consider ಮಾಡುವುದರಲ್ಲಿ tribunal has totally erred. ನಾನು Tribunal ಮೇಲೆ ಯಾವುದೇ ಆಕ್ಷೇಪಣೆ ಮಾಡುತ್ತಿದ್ದೇನೆಂದಲ್ಲ. With due respect to Tribunal, it is a clear case of erring. ಕುಡಿಯುವ ನೀರಿಗೆ ಬೆಂಗಳೂರಿನಲ್ಲಿ ಏನು ಹೇಳುತ್ತಾರೆಂದರೆ, 1/3 ಮಾತ್ರ basinನಲ್ಲಿ ಬರುತ್ತದೆ. ಆದರೆ, 2/3, basinನಲ್ಲಿ ಬರುವುದಿಲ್ಲವಂತೆ! ಬೆಂಗಳೂರನ್ನ divide ಮಾಡಿಬಿಟ್ಟಿದ್ದಾರೆ! ಹಾಗಾದರೆ, ತಮಿಳುನಾಡಿಗೆ 5 tmc ಕೃಷ್ಣಾ ನೀರು ಹೋಯಿತಲ್ಲ, ತೆಲುಗು ಗಂಗಾ ಯೋಜನೆ, ಅದು ಯಾವ ಬೇಸಿನ್‌ನಲ್ಲಿ ಬರುತ್ತದೆ? ಹೇಳಿ ನೋಡೋಣ. ಅದರಲ್ಲಿ ಯಾವ principle ಅಡಕವಾಗಿದೆ? ಇಲ್ಲಿ 1/3 ಮಾತ್ರ ಕಾವೇರಿ ಬೇಸಿನ್‌ಗೆ ಬರುತ್ತದೆಯಂತೆ! 2/3 ಬರುವುದಿಲ್ಲವಂತೆ.

ಶ್ರೀ ಎಂ.ಪಿ.ಪ್ರಕಾಶ್: ಅದು agreement ಮಾಡಿಕೊಂಡು, ಅದನ್ನು ನಮ್ಮ ಉದಾರ ನೀತಿಯಿಂದ ಕೊಟ್ಟದ್ದು.

ಶ್ರೀ ಸಿದ್ದರಾಮಯ್ಯ: ಅದೇನೆ ಇರಲಿ, agreementಗೂ ಬರುತ್ತೇನೆ. ಆ agreementಗೆ ನಾನಿನ್ನೂ ಬಂದಿಲ್ಲ. ಆ agreement ಒಪ್ಪಿಕೊಂಡೇ ನಮಗೆ ಈ ಗತಿ ಬಂದಿರುವುದು. ಸ್ವಾತಂತ್ರ್ಯ ಬಂದ ನಂತರ ನಾವೇನು agreement ಅನ್ನು ಒಪ್ಪಿಕೊಂಡಿದ್ದೇವೆಯೇ? Drinking water has priority over any other project. ಅದು ಬಿಟ್ಟು 2/3ಗೆ ಕುಡಿಯುವುದಕ್ಕೆ ನೀರು ಕೊಡುವುದಕ್ಕಾಗುವುದಿಲ್ಲ, 1/3 ಮಾತ್ರ ಮಾಡಿ ಎಂದು ಹೇಳಿದರೆ, ಇದನ್ನು ನ್ಯಾಯವೆಂದು ಒಪ್ಪಿಕೊಳ್ಳಲು ಸಾಧ್ಯವೇ? ನನಗಂತೂ ಇದರ ಬಗ್ಗೆ ಯಾವ ತರಹ evidence ಅನ್ನು weigh ಮಾಡಿದರೋ ಗೊತ್ತಿಲ್ಲ, analyse ಮಾಡಿದರೋ ಗೊತ್ತಿಲ್ಲ. ಆ ಪದಗಳನ್ನು ಅರ್ಥವಾಗದಂತೆ ಬರೆದಿದ್ದಾರೆ. ಅದು ಯಾವ ಪದಗಳು? ಏಕೆಂದರೆ, ನಾನು ಈ ಪದಗಳನ್ನೆಲ್ಲಾ ಓದಿರಲಿಲ್ಲ.

Technical persons ಇದ್ದಾರಲ್ಲ, ಅವರ ಹತ್ತಿರವೇ ಅದನ್ನೆಲ್ಲಾ ತಿಳಿದುಕೊಳ್ಳಬೇಕು.

ಶ್ರೀ ಎಂ.ಪಿ.ಪ್ರಕಾಶ್: ಅಂತರ್ ಕಣಿವೆಯ ನೀರನ್ನು ಪರಸ್ಪರ ವರ್ಗಾವಣೆ ಮಾಡಬಾರದೆಂದು ಅಂದುಕೊಳ್ಳಬಹುದು.

ಶ್ರೀ ಸಿದ್ದರಾಮಯ್ಯ: ನಾವು ಈ ತರಹ ಅಂದುಕೊಳ್ಳಬೇಕು. ಬಹಳ ಮುಖ್ಯವಾಗಿ ಮಾನವೀಯತೆ ದೃಷ್ಟಿಯಿಂದ ಕೊಡಬೇಕಾದದ್ದು, ಬೆಂಗಳೂರು ನಗರದ ಜನರಿಗೆ 30 tmc ನೀರನ್ನು ನಾವು ಕೇಳಿದ್ದೇವೆ, ಹಳ್ಳಿಗಳಿಗೆ ಕೇಳಿದ್ದೇವೆ, ಬರ ಪಟ್ಟಣಗಳಿಗೆ ಕೇಳಿದ್ದೇವೆ. ಬೆಂಗಳೂರಿಗೆ 30 tmc ಬೇಕಾಗುತ್ತದೆ. ಇವರು 1991ರ ಜನಸಂಖ್ಯೆಯ base ತೆಗೆದುಕೊಂಡು 2011ನೇ ಇಸವಿಯವರೆಗೆ ಮಾತ್ರ ಲೆಕ್ಕ ಹಾಕಿಕೊಂಡು ಅದರಲ್ಲಿ ಇಷ್ಟು ನೀರು ಕೊಟ್ಟಿದ್ದಾರೆ. ಈಗ ನಾವು ಇಲ್ಲಿ ರೈತರಿಗೆ ಪಾಪ, ಅವರ ಹೊಟ್ಟೆ ಮೇಲೆ ಹೊಡೆದು ಈ judgement ಅನ್ನು implement ಮಾಡುವುದಕ್ಕೆ ಹೋದರೆ, irrigationಗೆ ಕೊಡುತ್ತಿದ್ದ ನೀರನ್ನು ಕುಡಿಯುವ ನೀರಿಗೆ ಕೊಡಲೇಬೇಕಾಗುತ್ತದೆ. We cannot say 'No'. ಬೆಂಗಳೂರು ನಗರಕ್ಕೆ ಅಥವಾ ಬೇರೆ ಪಟ್ಟಣಗಳಿಗೆ ಕುಡಿಯುವ ನೀರನ್ನು ಕೊಡಲೇಬೇಕು. Tribunal ಹೇಳಿರುವ ರೀತಿಯಲ್ಲಿ ಸರ್ಕಾರ ಮಾಡುವುದಕ್ಕಾಗುವುದಿಲ್ಲ. Irrigation ಮತ್ತೆ ಕಟ್ ಆಗುತ್ತದೆ. Irrigationಗೆ ಸಿಕ್ಕಿರುವ ನೀರಿನಲ್ಲಿ ಮತ್ತೆ ಕಟ್ ಆಗುತ್ತದೆ, ಕಡಿಮೆಯಾಗುತ್ತದೆ. ಉಪಾಧ್ಯಕ್ಷರೆ, ಇದು ಯಾವ ಲೆಕ್ಕಾಚಾರವೆಂದು ನನಗಂತೂ ಅರ್ಥವಾಗುವುದಿಲ್ಲ. ಆದರೆ, ಮುಂದೆ ಹೋದರೆ, environment protectionಗೆ ತಮಿಳುನಾಡಿಗೆ 10 tmc ನೀರನ್ನು ಕೊಡಿ ಎಂದು ಹೇಳುತ್ತಾರೆ. ಇಲ್ಲಿ ಏನು ಮಾಡಬೇಕು? ಒಂದು ಸಲ ಕಬಿನಿಯಲ್ಲಿ ನೀರು ಎಲ್ಲವೂ ಖಾಲಿಯಾಗಿ ಆನೆಗಳು ಸಿಕ್ಕಿಹಾಕಿಕೊಂಡಿದ್ದವು. ಅದು ನಿಮಗೆ ಗೊತ್ತೇ? ಇಲ್ಲೇನು ಮಾಡಬೇಕು? ಇಲ್ಲಿರುವ ಆನೆಗಳು, ಪಕ್ಷಿಗಳು, ಬೇರೆ ಪ್ರಾಣಿಗಳು, ಹಂದಿಗಳು, ಮನುಷ್ಯರು ಏನು ಮಾಡಬೇಕು? ನನಗೆ ಗೊತ್ತಾಗಲಿಲ್ಲ. ಒಂದು ಸಾರಿ ಕಬಿನಿ ನೀರು ಬತ್ತಿ ಹೋಯಿತು, ಆನೆಗಳು ಕುಡಿಯುವ ನೀರನ್ನು ಕುಡಿಯುವುದಕ್ಕೆ ಹೋಗಿ ಬದಿಯಲ್ಲಿ ಹೂತುಕೊಂಡಿದ್ದವು. ಅವುಗಳನ್ನು

ಒಂದು ಸಲ ಎಳೆಸಿದೆವು. ಇಲ್ಲಿ environment protectionಗೆ ನೀರು ಬೇಡವೇ? ಅದ್ಯಾವ scientific approach ಎಂದು ನನಗಂತೂ ಅರ್ಥವಾಗಲಿಲ್ಲ. ಅಲ್ಲಿಗಿಂತಲೂ ನಮ್ಮಲ್ಲಿ ಕಾಡು ಪ್ರಾಣಿಗಳು ಜಾಸ್ತಿ ಇವೆ. ಇಲ್ಲಿ ಕಾಡನ್ನು ರಕ್ಷಣೆ ಮಾಡಬೇಕಾಗಿರುವುದು ಪ್ರಾಣಿಗಳನ್ನು ರಕ್ಷಿಸಬೇಕಾಗಿರುವುದು ಇಲ್ಲಿ. ಕರ್ನಾಟಕದ ಬಗ್ಗೆ environment protection ಗೆ ನೀರು ಕೊಡಲಿಲ್ಲ. ಆ 10 ಟಿ.ಎಂ.ಸಿ ನೀರನ್ನಾದರೂ ನಮಗೆ ಕೊಡಬಹುದಾಗಿತ್ತು. 4 ಟಿ.ಎಂ.ಸಿ. ನೀರು ಸಮುದ್ರಕ್ಕೆ ಹರಿದು ಹೋಗುತ್ತದೆ. ಅದನ್ನೂ ಅವರ ಲೆಕ್ಕಕ್ಕೆ ಸೇರಿಸಿ ಕೊಟ್ಟುಬಿಡಬೇಕು. ಇದೆಲ್ಲಾ ಯಾವ ಲೆಕ್ಕಾಚಾರ? ಇವೆಲ್ಲಾ ಲೆಕ್ಕಾಚಾರ ಮಾಡಿ ಮಾಡಿ, ಅವರು ಏನೇನು prayer, ಏನೇನು argument ಮಾಡಿದ್ದಾರೆ, ಅದೆಲ್ಲವೂ ಕೂಡ ಅವರ ಪರವಾಗಿ judgement ಹೋದ ರೀತಿಯಲ್ಲಿ judgementನ್ನು ಓದಿಕೊಂಡು ಹೋದರೆ ಗೊತ್ತಾಗುತ್ತದೆ. ಅವರಿಗೇ ಅನುಕೂಲವಾಗುವ ರೀತಿಯಲ್ಲಿ ಎಲ್ಲಾ ಹೋಗುತ್ತದೆ. 14 ಟಿ.ಎಂ.ಸಿ ಅವರಿಗೇ ಹೋಗುತ್ತದೆ. ನಾವು ಬಿಳಿಗೊಂಡ್ಲುವಿನ ಹತ್ತಿರ ಗೇಜ್ ಇರಬೇಕೆಂದು argument ಮಾಡಿದ್ದು ನಿಜ. 192 ಟಿ.ಎಂ.ಸಿ. ನೀರನ್ನು ಬಿಳಿಗೊಂಡ್ಲುವಿನ ಹತ್ತಿರ ನಾವು ensure ಮಾಡಬೇಕೆಂದು ಹೇಳುತ್ತಾರೆ. Alright. ಮೊದಲು ಏನೆಂದು ಹೇಳಿದ್ದರು? 250 ಟಿ.ಎಂ.ಸಿ. feet of water at Mettur damನಲ್ಲಿ ಮಾಡಬೇಕೆಂದು ಹೇಳಿದ್ದರು. ಆದ್ದರಿಂದ ಮಧ್ಯಂತರ ಆದೇಶದಲ್ಲಿ 205 ಟಿ.ಎಂ.ಸಿ. ಎಂದು ಏನು ಹೇಳಿದ್ದಾರೆ ಅದು ನೋಡಲು 205 ಎಂದು ಕಾಣಿಸುತ್ತದೆ. ಮೆಟ್ಟೂರಿನಲ್ಲಿ 192 ಟಿ.ಎಂ.ಸಿ ಎಂದು ಕಾಣಿಸಿದರೂ ಕೂಡ ಇನ್ನೂ 12 ಟಿ.ಎಂ.ಸಿ. ನೀರು 205 ಟಿ.ಎಂ.ಸಿ.ಗಿಂತ ಜಾಸ್ತಿಯಾಗುತ್ತದೆ. Still 25 tmc ft water is available in Mettur and Biligundlu. ಆ 25 ಟಿ.ಎಂ.ಸಿ. ನೀರು ಸೇರಿಸಿದರೆ 217 ಟಿ.ಎಂ.ಸಿ. ಆಗುತ್ತದೆ. ಅಂದರೆ ಮಧ್ಯಂತರ ಆದೇಶಕ್ಕಿಂತ final orderನಲ್ಲಿ ಇನ್ನೂ 12 ಟಿ.ಎಂ.ಸಿ. ನೀರು ಜಾಸ್ತಿಯಾಗಿ ಬಿಡಲು ಸೂಚನೆ ಕೊಟ್ಟಿದ್ದಾರೆ. ಇದನ್ನು ಯಾವ ದೃಷ್ಟಿಕೋನದಿಂದ ನೋಡಿದರೂ, ಕರ್ನಾಟಕಕ್ಕೆ ಅನ್ಯಾಯವಾಗಿದೆಯೆಂದು ಕಾಣಿಸುತ್ತದೆಯೇ ಹೊರತು ಈ

ತೀರ್ಪಿನ ಪರಿಣಾಮ, ಕರ್ನಾಟಕಕ್ಕೆ ಎಲ್ಲೂ ಕೂಡ ನ್ಯಾಯ ಲಭ್ಯವಾದಂತೆ ಕಾಣುವುದಿಲ್ಲ. ಇದು ಮೇಲ್ನೋಟಕ್ಕೆ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಎರಡನೆಯದಾಗಿ 1892 ಮತ್ತು 1924ರ ಒಪ್ಪಂದ. ಈ ಎರಡೂ ಒಪ್ಪಂದಗಳೇನಿದೆ ಅದು ಬ್ರಿಟೀಷರ ಕಾಲದಲ್ಲಿ ಆಗಿರತಕ್ಕದ್ದು. Madras Presidency ಇದ್ದಾಗ ಕರ್ನಾಟಕ ರಾಜ್ಯ, ಕಾವೇರಿ ಬೇಸಿನ್ Princely State ಆಗಿತ್ತು. ಮೈಸೂರು ರಾಜ್ಯ, ಕೃಷ್ಣರಾಜ ಒಡೆಯರ್‌ರವರ ಕಾಲದಲ್ಲಿ ಎಲ್ಲಾ ರೀತಿಯಲ್ಲೂ ಮದ್ರಾಸ್‌ನವರು ಹೇಳಿದಂತೆ ಕೇಳಬೇಕಾಗಿದ್ದ ಪರಿಸ್ಥಿತಿ ಇತ್ತು. ಅವರು ಹೇಳಿದ್ದಕ್ಕೆ ಮೈಸೂರಿನವರು no ಎಂದು ಹೇಳುವಂತೆಯೇ ಇರಲಿಲ್ಲ. ಆ ರೀತಿ ಹೇಳಿದಮೇಲೆ ಏನು Indian Constitution Act 356 ಉಪಯೋಗ ಮಾಡುವುದಕ್ಕೆ ಅವಕಾಶ ಇದೆ, ಅದು ಮದ್ರಾಸ್‌ರವರಿಗೆ ಆಗಲೇ ಇತ್ತು, to takeover princely state by Madras Presidency. That was the power. ಅದನ್ನು ಅವರು ಆಗಲೇ enjoy ಮಾಡುತ್ತಿದ್ದರು.

ಶ್ರೀ ಎಂ.ಪಿ. ಪ್ರಕಾಶ್: ರಾಜ್ಯವನ್ನು ಕೊಟ್ಟವರೇ ಅವರು!

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ನಾವು ಗುಲಾಮರ ಗುಲಾಮರು! ಅವರು ನೇರವಾಗಿ ಗುಲಾಮರು! ನಾವು ಗುಲಾಮರಲ್ಲಿ ಗುಲಾಮರು. ಗುಲಾಮರಾಗಿದ್ದವರಿಗೆ ನ್ಯಾಯ ಸಿಕ್ಕಿದೆ, ಗುಲಾಮರಲ್ಲಿ ಗುಲಾಮರಾಗಿದ್ದವರಿಗೆ ನ್ಯಾಯ ಸಿಕ್ಕಿಲ್ಲ!

ಶ್ರೀ ಸಿದ್ದರಾಮಯ್ಯ: ಹೌದು ಗುಲಾಮರ ಗುಲಾಮರಿಗೆ ನ್ಯಾಯ ಸಿಕ್ಕಿಲ್ಲ. ಅಷ್ಟೇ ಅಲ್ಲ ಘೋರ ಅನ್ಯಾಯವಾಗಿದೆ. ಆವತ್ತು 1892ರ ಒಪ್ಪಂದದಲ್ಲೂ ಅನ್ಯಾಯವಾಯಿತು. ಅದೇನು ನ್ಯಾಯವಾಗಿರುವ ಒಪ್ಪಂದವಲ್ಲ. 1924ರ ಒಪ್ಪಂದ ಕೂಡ it is a not fair agreement. ಒಂದು ಕಡೆ ಬಲಾಢ್ಯರ ಕೈ ಕೆಳಗೆ ಇರುವಾಗ ಯಾವ equal termsನಲ್ಲಿ agreement ಆಗಲು ಸಾಧ್ಯ? ಕಾನೂನಿನ ಪ್ರಕಾರ agreement ಆಗಲು ಸಾಧ್ಯವಾಗುತ್ತದೆಯೇ? Indian contract Act ಪ್ರಕಾರ ಕೂಡ agreement ಆಗಲು ಸಾಧ್ಯವಾಗುತ್ತದೆಯೇ? ಆವತ್ತೂ contract act ಇತ್ತು. ನಾವು ಇವತ್ತು ಓದುತ್ತಿರುವ Contract Act, ಆವತ್ತೂ ಇತ್ತು ಎಂದು ಕಾಣಿಸುತ್ತದೆ. ಆವತ್ತೂ Indian Penal Code, Cr.P.C. ಇವೆಲ್ಲಾ ಇತ್ತು. ಅದೂ ಅವರದ್ದೇ

ಕಾನೂನುಗಳು. ಅದೂ ಮೆಕಾಲೆಯವರ ಕಾನೂನೇ. Indian penal codeನ್ನೆಲ್ಲಾ ರಚಿಸಿದ್ದು ಮೆಕಾಲೆನೇ. ಅವನು ರಚನೆ ಮಾಡಿದ್ದ ಕಾನೂನು ಅವರೇ ಮಾಡಿಕೊಂಡಿದ್ದ ಕಾನೂನು. ನಾವು ಅದನ್ನೇ ಇವತ್ತೂ follow ಮಾಡುತ್ತಿದ್ದೇವೆ. ಅವರು ನಮಗೆ ಹೇಳಿದಂತಹ ಷರತ್ತುಗಳನ್ನು ನಾವು ಒಪ್ಪಿಕೊಳ್ಳಬೇಕಾಗುತ್ತಿತ್ತು. ಮೈಸೂರಿನ ಕೃಷ್ಣರಾಜ ಒಡೆಯರ್‌ರವರ ಕಾಲದಲ್ಲಿ ಕನ್ನಂಬಾಡಿ ಕಟ್ಟೆ ಕಟ್ಟಲು ಹೋದಾಗ ಇದೆಲ್ಲಾ ಪ್ರಾರಂಭವಾದದ್ದು. 1924ರ ಒಪ್ಪಂದ ಬರಬೇಕಾಗಿದ್ದರೆ ಇದೇ ಕಾರಣ. 1892ರ agreementನಲ್ಲಿ without the prior consent of the Tamil Nadu Government ಏನೂ ಮಾಡಕೂಡದು. ನಿಮ್ಮ ಹತ್ತಿರ ನೀರು ಇರಲಿ, ಮಳೆಯ ನೀರೆಲ್ಲಾ ನಿಮ್ಮಲ್ಲೇ ಶೇಖರಣೆಯಾಗುತ್ತಿರಲಿ, ಆದರೆ, ಅದಕ್ಕೆ ಏನೂ ಮಾಡಕೂಡದು. ಇದು ಯಾವಾಗಲೂ ಕೂಡ ಎಂದರೆ, is it valid under law? ನನ್ನ ಪ್ರಕಾರ it is void ab-initio. ಇಷ್ಟೊಂದು void agreementನ್ನು we cannot hold it as valid agreement ಅದಕ್ಕೋಸ್ಕರ ನಮಗೆ ನೀರಿನ allocate ಮಾಡುವಾಗ ಪದ ಬಳಸಿರುವುದೇನೆಂದರೆ "equitable apportionment" ಎಂದು. Allocation of waterನ್ನು ಹೇಳುವಾಗ "equitable apportionmentನ್ನು" adopt ಮಾಡಿಕೊಂಡಿದ್ದೇವೆ. Can we call it as "equitable apportionment?" Even a layman cannot. Legal expertsನ್ನು ಬಿಡಿ even a layman cannot say it is an "equitable apportionment." ಅಂತಹ ಕೆಟ್ಟ ಅನ್ಯಾಯವಾಗಿದೆ. 1924ರ agreementನಲ್ಲಿ ತಮಿಳುನಾಡಿನವರೇನು ಬೆಳೆಗಳನ್ನು ಬೆಳೆಯುತ್ತಿದ್ದರೋ ಅವುಗಳನ್ನು ರಕ್ಷಣೆ ಮಾಡಲೇ ಬೇಕು. ಜೊತೆಗೆ 1924ರ agreement ಪ್ರಕಾರ ನಾವು 40 ಸಾವಿರ ಎಕರೆ ಮಾತ್ರ perennial crop ಬೆಳೆಯಬೇಕು ಎಂದರೆ ಹೇಗೆ ಸಾಧ್ಯ? 1924ರ agreement ಪ್ರಕಾರ ಕಬ್ಬನ್ನು ಅಂದರೆ, perennial cropನ್ನು 1 ಲಕ್ಷ 8 ಸಾವಿರ ಎಕರೆ ಬೆಳೆಯುತ್ತೇವೆಂದು ಹೇಳಿದ್ದೀರಿ, we don't allow, we don't consider, ನೀವು 40 ಸಾವಿರ ಎಕರೆ ಮಾತ್ರ ಕಬ್ಬನ್ನು ಬೆಳೆಯಬೇಕು, ಅಂದರೆ 30 ಪರ್‌ಸೆಂಟ್ ಮಾತ್ರ ಆಗುತ್ತದೆ. ಇವತ್ತು ಇದುವರೆಗೆ ಕಬ್ಬನ್ನು ಬೆಳೆಯುತ್ತಿದ್ದವರ ಗತಿಯೇನಾಗಬೇಕು? ಈ ತೀರ್ಪಿನ ಪ್ರಕಾರ 40 ಸಾವಿರ ಎಕರೆಗಿಂತ ಹೆಚ್ಚು ಕಬ್ಬನ್ನು ಬೆಳೆಯಲು ಆಗುವುದಿಲ್ಲ.

Perennial cropಗೆ ನೀರನ್ನು ಕೊಡಲು ಆಗುವುದಿಲ್ಲವೆಂದು ಹೇಳಿಬಿಟ್ಟಿದ್ದಾರೆ. ಒಂದು ವೇಳೆ ನೀವು ಬೆಳೆದರೆ ಎಷ್ಟಾದರೂ ಬೆಳೆದುಕೊಳ್ಳಿ, ಆದರೆ, ಬೇರೆ ಬೆಳೆಯಲ್ಲಿ suffer ಮಾಡಬೇಕಾಗತ್ತದೆ. ನಾವು ನೀರು ಕೊಡುವುದು ಇಷ್ಟೇ. ಅನಂತರ ಭತ್ತ ಕೂಡ ನೀವು 7 ಲಕ್ಷ ಎಕರೆ ಮಾತ್ರ ಬೆಳೆಯಬೇಕು. ಬಾಕಿದೆಲ್ಲಾ semi–dry crop. ನಿಮಗೆ 18 ಲಕ್ಷದ 85 ಸಾವಿರ ಎಕರೆಯನ್ನು ನಾವು consider ಮಾಡಿದ್ದರೂ ಕೂಡ, ಅದೂ assessor ನವರು ಕೊಟ್ಟಿರುವ report ಪ್ರಕಾರ 18 ಲಕ್ಷದ 85 ಸಾವಿರ ಎಕರೆಯಲ್ಲಿ ನೀವು 7 ಲಕ್ಷ ಎಕರೆ ಭತ್ತ ಬೆಳೆಯಿರಿ, 40 ಸಾವಿರ ಎಕರೆಯಲ್ಲಿ ಕಬ್ಬು ಬೆಳೆಯಿರಿ ಉಳಿದುದರಲ್ಲಿ semi–dry crop ಬೆಳೆಯಿರಿ ಎಂದು ನಮಗೆ ಹೇಳಿ ಅವರಿಗೆ 22 ಲಕ್ಷ ಎಕರೆಯಲ್ಲಿ ಭತ್ತ ಬೆಳೆಯಿರಿ ಎಂದು ಕೊಡುತ್ತಾರಲ್ಲಾ ಇದು ಯಾವ ನ್ಯಾಯ? ಅವರು 22 ಲಕ್ಷ ಎಕರೆಯಲ್ಲಿ ಭತ್ತವನ್ನು ಬೆಳೆಯಬಹುದು. ಅವರಿಗೆ 24 ಲಕ್ಷ ದ 78 ಸಾವಿರ ಎಕರೆ ನೀರಾವರಿ ಅಚ್ಚುಕಟ್ಟು ಎಂದು ಲೆಕ್ಕಾಚಾರ ಮಾಡಿದ್ದಾರೆ. ಅದರಲ್ಲಿ 22 ಲಕ್ಷಕ್ಕಿಂತ ಹೆಚ್ಚು ಎಕರೆಯಲ್ಲಿ ಭತ್ತ ಬೆಳೆಯಬಹುದು ಎಂದು ಅಷ್ಟು ನೀರನ್ನು allocation ಮಾಡಿ ಕೊಟ್ಟಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್: Asian drama ದಲ್ಲಿ Gunther ಏನು ಹೇಳಿದ್ದಾರೆಂದರೆ paddy and poverty go together, because we use more than five times water where carbohydrate is available by some other cropping pattern. ಇವರಿಗೆ 22 ಲಕ್ಷ ಎಕರೆಯಲ್ಲಿ ಬೆಳೆಯಲು ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ :– ಆದರೆ ಅವರಿಗೆ ಯಾವ crop pattern ಅನ್ನೂ ಕೂಡ ಹೇಳುವುದಿಲ್ಲ. ಅವರು ಅವತ್ತಿನಿಂದ ಕುರುವೈ, ಸಂಬಾ ಹಾಗೂ ಮತ್ತೊಂದು ಬೆಳೆಯನ್ನು ಬೆಳೆಯುತ್ತಿದ್ದಾರೆ. ನೀವು ಏನು ಬೆಳೆ ಬೆಳೆಯುತ್ತಿದ್ದೀರೋ ಅದನ್ನು ಬೆಳೆದುಕೊಳ್ಳಿ, ನೀವು 22 ಲಕ್ಷ ಎಕರೆಗಳಲ್ಲಿ ಭತ್ತ ಬೆಳೆಯುವುದನ್ನು ನಾವು admit ಮಾಡಿಕೊಂಡಿದ್ದೇವೆ ಎಂದು ನ್ಯಾಯ ಮಂಡಳಿ ತಮಿಳುನಾಡಿನ ಬಗ್ಗೆ ಹೇಳಿದೆ. ಕರ್ನಾಟಕ ಏನು ಅನ್ಯಾಯ ಮಾಡಿತ್ತು? ಏನು ಪಾಪದ ಕೆಲಸ ಮಾಡಿತ್ತು? 392 TMC ft water ಇಲ್ಲೇ ಸಿಗುತ್ತದಲ್ಲಾ, ಅದಕ್ಕೋಸ್ಕರವೇ ಈ ರೀತಿ ಮಾಡಿದ್ದಾರೆಯೇ? ಕರ್ನಾಟಕದಲ್ಲಿ 392 TMC ft water ಮಳೆ ನೀರು ಸಂಗ್ರಹ ಆಗುತ್ತದಲ್ಲಾ, ಅದಕ್ಕಾಗಿ ನಮಗೆ ಈ ರೀತಿಯ gift ನೀಡಲಾಗಿದೆಯೇ? 392 TMC ft

water ಸಿಗುವವರಿಗೆ ನೀವು ಬರೀ 7 ಲಕ್ಷ ಎಕರೆಗಳಲ್ಲಿ ಮಾತ್ರ ಭತ್ತ ಬೆಳೆಯಿರಿ, 40 ಸಾವಿರ ಎಕರೆಗಳಲ್ಲಿ ಮಾತ್ರ ಕಬ್ಬು ಬೆಳೆಯಿರಿ, ಇನ್ನು ಉಳಿದಿದ್ದರಲ್ಲಿ ಅರೆ ಖುಷ್ಕಿ ಬೆಳೆ ಅಂದರೆ semi dry crop, ಬೆಳೆಯಿರಿ, ಬೆಳೆಯಬೇಕೆಂದರೆ ಬೆಳೆಯಿರಿ, ಬೇಡವೆಂದರೆ ಬಿಡಿ ಎಂದು ನ್ಯಾಯಮಂಡಳಿ ಹೇಳಿದೆ.

ಶ್ರೀ ಮಹಿಮಾ ಜೆ. ಪಟೇಲ್:- 526 TMC ನೀರಿನ ಲೆಕ್ಕವನ್ನು ಗಣನೆಗೆ ತೆಗೆದುಕೊಂಡರೆ ಅದರಿಂದ ಅವರು 37 ಲಕ್ಷ ಎಕರೆಗಳಷ್ಟು ಬೆಳೆ ಬೆಳೆಯಬಹುದು.

ಶ್ರೀ ಸಿದ್ದರಾಮಯ್ಯ:- ಹೌದು, ಅದು ನಿಜ. ಅವರಿಗೆ ಕೇವಲ 419 TMC ನೀರು ಮಾತ್ರ ಹಂಚಿಕೆಯಾಗಿಲ್ಲ 30 ಲಕ್ಷ ಎಕರೆಗಳಿಗೆ ನೀರು ಬೇಕು ಎಂದು ಅವರು ಕೇಳಿದ್ದರು.

ಶ್ರೀ ಮಹಿಮಾ ಜೆ.ಪಟೇಲ್:- ಈಗ ಕೊಟ್ಟಿರುವ ನೀರಿನಿಂದ ಅವರು 37 ಲಕ್ಷ ಎಕರೆಗಳಷ್ಟು ಬೆಳೆ ಬೆಳೆಯಬಹುದು.

ಶ್ರೀ ಸಿದ್ದರಾಮಯ್ಯ:- ನಾವು ಲೆಕ್ಕಾಚಾರ ಹಾಕಿದರೆ ಅದು ಅಷ್ಟಾಗುತ್ತದೆ. 526 TMC ft water ಅವರಿಗೆ ಸಿಗುತ್ತಿದೆ. ಒಂದು TMC ft waterಗೆ 5 ಸಾವಿರ ಎಕರೆ ಎಂದು ಲೆಕ್ಕ ಹಾಕಿಕೊಂಡರೆ, it will be more than 25 lakh acres. 526 TMC ft water ಅವರಿಗೆ ವಾಸ್ತವವಾಗಿ ಸಿಗುತ್ತಿದೆ. ಆದರೆ judgment ಪ್ರಕಾರ ಮೇಲ್ನೋಟಕ್ಕೆ, it is only 419 TMC ft water. ಆದರೆ ಅದು ವಾಸ್ತವವಾಗಿ 526 TMC ft. ಆಗುತ್ತದೆ. ಅವರು argument ಮಾಡಿದ್ದು 566 TMC ನಾವು ಮಾಡಿದ್ದು 465 TMCಗೆ ನಮಗೆ ಕೊಟ್ಟಿರುವುದು ಕೇವಲ 270 ಟಿಎಂಸಿ. ಅವರಿಗೆ ಒಟ್ಟಾರೆಯಾಗಿ ಮಳೆ ನೀರಿನಿಂದ ಸಂಗಹವಾಗುವುದು 222 TMC ft of water. ಇದನ್ನು ಯಾವ ಅಳತೆಗೋಲಿನಿಂದ ನೋಡಬೇಕು ಎಂದು ನನಗೆ ಅರ್ಥವಾಗುತ್ತಿಲ್ಲ. ಅವರು ಯಾವ ಅಳತೆಗೋಲಿನಿಂದ ನೋಡಿದರೋ ಗೊತ್ತಿಲ್ಲ. ಯಾವ ರೀತಿಯಾಗಿ ಅವರು ಈ ತೀರ್ಮಾನಕ್ಕೆ arrive ಆದರು? ಯಾವ basis ಮೇಲೆ ತೀರ್ಪು ಕೊಟ್ಟರು? ಎಂಬುದೇ ಗೊತ್ತಾಗುತ್ತಿಲ್ಲ. Neither on facts nor on law. Judgment ನಲ್ಲಿ ಒಟ್ಟಾರೆಯಾಗಿ ಬೇಕಾದಷ್ಟು errors ಕಾಣುತ್ತವೆ. 1892ರ agreement ಅನ್ನು invalid ಎಂದು ಮಾಡಬೇಕಾಗಿತ್ತು. ಬ್ರಿಟೀಷರ ಕಾಲದಲ್ಲಿ ನಮಗೆ ಸ್ವಾತಂತ್ರ್ಯ

ಬರುವುದಕ್ಕಿಂತ ಮುಂಚಿತವಾಗಿಯೇ ಈ agreement ಆಗಿತ್ತು. ಇದು ಎರಡು ಅಸಮಾನ ರಾಜ್ಯಗಳ ನಡುವೆ ಆಗಿದ್ದಂತಹ agreement ಆಗಿತ್ತು. Not between equal states. Equals ಮಧ್ಯೆ ಒಪ್ಪಂದವಾದರೆ ಮಾತ್ರ ಅದು equality ಆಗುತ್ತದೆ. Unequals ಮಧ್ಯೆ ಒಪ್ಪಂದವಾದರೆ ಅದು equality ಹೇಗೆ ಆಗುತ್ತದೆ? ಸಾಧ್ಯವೇ ಇಲ್ಲ. Unequals ಮಧ್ಯೆ agreement ಆಗಿರುವುದನ್ನು ಸ್ವಾತಂತ್ರ್ಯ ಬಂದ ಮೇಲೂ ಒಪ್ಪಿಕೊಳ್ಳಬೇಕೇ? ಜನವರಿ, 1950ರಲ್ಲಿ ನಮ್ಮ Constitution ಅಸ್ತಿತ್ವಕ್ಕೆ ಬಂದಾಗ ಅಂತಹ ಒಪ್ಪಂದಗಳ ಬಗ್ಗೆ ಹೇಳಬೇಕಾಗಿತ್ತು. ಅಂತಹ agreementಗಳಿಗೆ ನಾವು ಬೆಲೆ ಕೊಡುವುದಿಲ್ಲ, ಆ agreementಗಳು lapse ಆದವು ಎಂದು ನಮಗೆ ಸ್ವಾತಂತ್ರ್ಯ ಬಂದ ತಕ್ಷಣವೇ ಹೇಳಬೇಕಾಗಿತ್ತು. ಇದೊಂದು argument ಅನ್ನು ನಾವು ಮಾಡಬಹುದು. ಇನ್ನೊಂದು ಏನೆಂದರೆ, ಆ agreementಗೆ 50 ವರ್ಷ ಮಾತ್ರವೇ ಜೀವ ಇತ್ತು. Even after Independence, assuming for the argument sake; it is presumed to be valid ಎಂದು ಅಂದುಕೊಂಡರೂ ಕೂಡ, 1924ರ Agreement 1974ಕ್ಕೆ expire ಆಗಬೇಕು. 1924ರ Agreementನಲ್ಲಿ ಇಲ್ಲಿಯವರೆಗೆ ಆಗಿರತಕ್ಕಂಥ ಬೆಳವಣಿಗೆಗಳು, ಇರತಕ್ಕಂಥ ಪರಿಸ್ಥಿತಿಯನ್ನು ಗಮನ ದಲ್ಲಿಟ್ಟುಕೊಂಡು, 50 ವರ್ಷಗಳ ನಂತರ ಅದನ್ನು review ಮಾಡಬೇಕು ಎಂದು ಹೇಳಿದ್ದಾರೆ. These provisions are incorporated in the 1924 agreement itself. Tribunal ನವರು ಇದನ್ನೂ ಕೂಡ ಹೇಳುತ್ತಾರೆ. ಇದೆಲ್ಲಾ ಇದ್ದರೂ ಕೂಡ ನಾವು ಅದನ್ನು invalid or void ಎಂದು ಹೇಳುವುದಕ್ಕೆ ಬರುವುದಿಲ್ಲ ಎನ್ನುತ್ತಾರೆ. 1924ರ agreementಗೆ ಸ್ವಾತಂತ್ರ್ಯ ಬಂದ ಮೇಲೆ ಏನು ಕಿಮ್ಮತ್ತು ಇರುತ್ತದೆ? From the day one, 1892 agreement ಅನ್ನು base ಮಾಡಬಾರದು, 1924ರ agreement ಅನ್ನು base ಮಾಡಬಾರದು ಎಂಬುದೇ ನಮ್ಮ ವಾದ ಆಗಿತ್ತು. ಅದರಲ್ಲಿ ನಮಗೆ ಬಹಳ ಅನ್ಯಾಯವಾಗಿದೆ, ಅನ್ಯಾಯವಾಗಿರತಕ್ಕಂಥ ಆ ಒಪ್ಪಂದವನ್ನು ಆಧಾರವಾಗಿಟ್ಟುಕೊಂಡು ನೀರಿನ ಹಂಚಿಕೆ ಮಾಡತಕ್ಕಂಥದ್ದು ಇನ್ನೊಂದು ದೊಡ್ಡ ಅನ್ಯಾಯಕ್ಕೆ ಎಡೆಮಾಡಿಕೊಟ್ಟಂತಾಗುತ್ತದೆ ಎಂಬುದೇ ನಾವು ಮೊದಲಿನಿಂದಲೂ ಮಾಡಿಕೊಂಡು ಬಂದಿರತಕ್ಕಂಥ ವಾದವಾಗಿತ್ತು. ಈ ವಾದವನ್ನು ನಾವು

ಮೊದಲಿನಿಂದಲೂ ಮಾಡಿಕೊಂಡು ಬಂದಿದ್ದೇವೆ. ನನಗೆ ಗೊತ್ತಿರುವಂತೆ ಟ್ರಿಬ್ಯೂನಲ್‌ನಲ್ಲಿ ನಮ್ಮ ವಕೀಲರುಗಳು they are citing so many case laws, case laws within the country and outside the country; ಬಹಳ effective ಆಗಿ ಇದರ ಬಗ್ಗೆ argument ಮಾಡಿದ್ದಾರೆ. ಅವರು ಬಹಳಷ್ಟು ಕೇಸ್ ಲಾ ಗಳನ್ನು ಕೋಟ್ ಮಾಡಿ it is going to be invalid ಎಂಬ ವಾದವನ್ನು ಟ್ರಿಬ್ಯೂನಲ್ ಮುಂದೆ ಮಾಡಿದ್ದಾರೆ. 1892ರ agreement cannot be considered, 1924ರ agreement cannot be considered, ಇದನ್ನು ಕೈ ಬಿಟ್ಟು ನೀರನ್ನು ಹಂಚಿಕೆ ಮಾಡಬೇಕು ಎಂಬ ವಾದವನ್ನು ಅವರು ಮಾಡಿದ್ದಾರೆ. ಇವತ್ತಿನ ಪರಿಸ್ಥಿತಿ ಹೇಗಿದೆ? 1974 ಅಥವಾ 1990ರಲ್ಲಿ ಏನು ಪರಿಸ್ಥಿತಿ ಇತ್ತು? ಅವತ್ತು ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಏನು ಪರಿಸ್ಥಿತಿ ಇತ್ತು, ಇವತ್ತು ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಏನು ಪರಿಸ್ಥಿತಿ ಇದೆ? ನೀರಿನ ಒಟ್ಟು availability ಎಷ್ಟಿದೆ, ಎಂಬುದನ್ನು ನೋಡಿಕೊಂಡು, ಅದರ ಆಧಾರದ ಮೇಲೆ ನೀರಿನ ಹಂಚಿಕೆ ಮಾಡ ಬೇಕಾಗಿತ್ತು. ಅದನ್ನು ಮಾಡಿದ್ದರೆ ನಮಗೆ ನ್ಯಾಯ ಸಿಗುತ್ತಿತ್ತು, ಅನ್ಯಾಯವಾಗುತ್ತಿರಲಿಲ್ಲ. ಈ ಅನ್ಯಾಯದ agreementಗಳನ್ನು ಇಟ್ಟುಕೊಂಡು, ಈಗ ಏನು ಹೇಳುತ್ತಾರೆ, ಈ ಟ್ರಿಬ್ಯೂನಲ್ ಜಡ್ಜ್‌ಮೆಂಟ್ ಆದಮೇಲೆ ಈ agreementಗಳು ಹೋದವು ಎಂದು, On the date of implementation, all earlier agreements will go, ಅವೆಲ್ಲಾ ಹೋದವು ಎಂದು ಅವರು ಹೇಳುತ್ತಾರೆ. ಆದರೆ cropಗಳನ್ನು ತೆಗೆದುಕೊಳ್ಳುವುದಕ್ಕೆ ಎಷ್ಟು ಎಕರೆ ಅಚ್ಚುಕಟ್ಟು ಮಾಡಿಸುತ್ತಿದ್ದರು, ಆಯಕಟ್ಟು ಎಷ್ಟು ಮಾಡಿಸುತ್ತಿದ್ದರು, ಭತ್ತ ಎಷ್ಟು ಎಕರೆ ಬೆಳೆಯುತ್ತಿದ್ದರು, ಕಬ್ಬು ಎಷ್ಟು ಎಕರೆ ಬೆಳೆಯುತ್ತಿದ್ದರು, ಕರ್ನಾಟಕದಲ್ಲಿ ಎಷ್ಟು ಬೆಳೆಯುತ್ತಿದ್ದರು, ಅಲ್ಲಿ ಎಷ್ಟು ಬೆಳೆಯುತ್ತಿದ್ದರು, ಎಂಬ ನಿರ್ಬಂಧಗಳನ್ನು ನಮಗೆ ಹಾಕಿಬಿಟ್ಟು, ಕರ್ನಾಟಕದಲ್ಲಿ ಉಸಿರು ಕಟ್ಟುವಂತಹ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೆ. ಅವತ್ತು Princely States ಪಾಪ ಹೇಳಿದಂತೆ ಕೇಳುತ್ತಾರೆಂದು, ಅವರ ಮೇಲೆ ಎಲ್ಲಾ ನಿರ್ಬಂಧಗಳನ್ನು ತಮಿಳುನಾಡು ಸರ್ಕಾರದವರು agreement ಮೂಲಕ ಹಾಕಿಬಿಟ್ಟಿದ್ದಾರೆ. ಅದಕ್ಕೋಸ್ಕರವೇ ತಮಿಳುನಾಡಿನವರು ಮಾತೆತ್ತಿದರೆ 1924ರ agreement ಅನ್ನೇ ಪರಿಗಣಿಸಬೇಕೆಂದು ವಾದ ಮಾಡುತ್ತಿದ್ದರು. ಯಾವುದು invalid ಎಂದು ನಮ್ಮ ಪ್ರಕಾರ ನಾವು ಹೇಳಿಕೊಂಡು ಬಂದಿದ್ದೇವೋ, ಯಾವುದು

void ಎಂದು ಹೇಳಿಕೊಂಡು ಬಂದಿದ್ದೇವೋ, ಯಾವುದು void, offensive ಎಂದು ಹೇಳಿಕೊಂಡು ಬಂದಿದ್ದೇವೋ, ಅದನ್ನೇ ಅವರು, ನೀವು ಇದನ್ನು valid ಎಂದು declare ಮಾಡಬೇಕು, valid ಎಂದು uphold ಮಾಡಬೇಕು, valid ಎಂದು ಹೇಳಬೇಕು ಎಂದು argument ಮಾಡಿಕೊಂಡು ಬಂದರು. ಇಲ್ಲಿ ನಮಗೆ ಮೂಲಭೂತವಾಗಿ ದೊಡ್ಡ ಅನ್ಯಾಯವಾಗಿದೆ. ಆದ್ದರಿಂದ ಇವತ್ತು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳತಕ್ಕದ್ದು ಏನೆಂದರೆ, ಇದರ ಬಗ್ಗೆ ನೀವು ಗಂಭೀರವಾಗಿ, ಆಳವಾಗಿ ಅಧ್ಯಯನ ಮಾಡಬೇಕಾಗುತ್ತದೆ. ನೀವು ಮಾಡಿಲ್ಲವೆಂದು ನಾನು ಹೇಳುವುದಿಲ್ಲ. ಇನ್ನೂ ಆಳವಾಗಿ ಅಧ್ಯಯನ ಮಾಡತಕ್ಕಂಥ ಅಗತ್ಯತೆ ಇದೆ. 1892ರ agreement, 1924ರ agreement, even today there prevails the issues. ಈ agreementಗಳು ಒಂದು ಸಾರಿ invalid ಎಂದಾದರೆ, naturally we will get justice. ನಮಗೆ ಅನ್ಯಾಯ ಆಗಲಿಕ್ಕೆ ಸಾಧ್ಯವೇ ಇಲ್ಲ. ಆಗ ನಮಗೆ ಎರಡನೇ ಬೆಳೆಗೂ ಸೇರಿ ಒಟ್ಟು 27 ಲಕ್ಷ ಎಕರೆಗೆ ನೀರು ಸಿಗಲಿಕ್ಕೆ ಸಾಧ್ಯವಿದೆ. ನಮ್ಮ ಕೆಲವೊಂದು argument ಅನ್ನು ಟ್ರಿಬ್ಯೂನಲ್‌ರವರು ಹಾಗೆಯೇ ತೆಗೆದು ಎಸೆದು ಬಿಟ್ಟಿದ್ದಾರೆ, reject ಮಾಡಿದ್ದಾರೆ, not even considered. ನಮ್ಮ evidence ಅನ್ನೇ ಅವರು ಸರಿಯಾಗಿ ನೋಡಿಲ್ಲ. ನಮ್ಮ evidence ಅನ್ನು ಅವರು ಸರಿಯಾಗಿ appreciate ಮಾಡಿಲ್ಲ, ಅದನ್ನು ಅವರು ಸರಿಯಾಗಿ ತೂಕ ಮಾಡಿಲ್ಲ. ಹಾಗಾಗಿ ಅವರಿಗೆ 1892ರ agreement invalid ಎಂದು ಅವರಿಗೆ ಹೇಳಲಿಕ್ಕಾಗಿಲ್ಲ. ಅದೇ ರೀತಿ 1924ರ agreement ಕೂಡ invalid ಎಂದು ಅವರಿಗೆ ಹೇಳಲಿಕ್ಕಾಗಿಲ್ಲ. ನನ್ನ ಪ್ರಕಾರ ಇವತ್ತೂ ಕೂಡ ಅವು invalid agreements. ಕಾನೂನು ಪ್ರಕಾರವಾಗಿ ಅವು valid ಆಗಲಿಕ್ಕೆ ಸಾಧ್ಯವೇ ಇಲ್ಲ. ಅದನ್ನು ಬಿಟ್ಟು, equitable apportionment of water ಆದರೆ, allocation of water ಆದರೆ ನಮಗೆ ನ್ಯಾಯ ಸಿಕ್ಕೇಸಿಗುತ್ತದೆ. ಅದರಿಂದ ಇದು ಬಹಳ ಪ್ರಾಮುಖ್ಯವಾದಂತಹ ವಿಚಾರ. ಟ್ರಿಬ್ಯೂನಲ್‌ನವರು ಇಲ್ಲೇ ಎಡವಿರತಕ್ಕದ್ದು. ಬಹಳ ಪ್ರಮುಖವಾಗಿ ಕೋರ್ಟ್‌ನವರು, ಟ್ರಿಬ್ಯುನಲ್ ಹೇಳಿರತಕ್ಕಂತಹದ್ದು, ಇದನ್ನು ಸರಿಪಡಿಸಬೇಕೆಂದು, ನಮ್ಮ ವಾದವನ್ನು ಬಹಳ ವ್ಯವಸ್ಥಿತವಾಗಿ ನಾವೆಲ್ಲಿ ಅಪೀಲು ಹಾಕುತ್ತೇವೆ, ಅಥವಾ ತಾವು ಎಲ್ಲಿ ಅಪೀಲ್ ಹಾಕಬೇಕೆಂದು ತೀರ್ಮಾನ ಮಾಡುತ್ತೀರಿ, ಅದರಲ್ಲಿ ಮಂಡಿಸಬೇಕಾದಂತಹ

ಅಗತ್ಯವಿದೆ. ನನ್ನ ಪ್ರಕಾರ, under Section 5(3) of the Inter State Water Disputes Act yours scope is very very limited. ನಾನು ನೋಡಿದ ಪ್ರಕಾರ, under Section 5 Clause 3 of the Inter State Water Disputes Act the scope is very very limited. ಏಕೆಂದರೆ, ಅದರಲ್ಲಿ ಹೇಳಿರುವುದು, ನೀವು explanation ಕೇಳಬಹುದು, ಕ್ಲಾರಿಫಿಕೇಷನ್ ಅಥವಾ ಗೈಡೆನ್ಸ್ ಕೇಳಬಹುದು ಎಂದು ಹೇಳಿದೆ. I leave it to you. ನೀವು ಯಾವ ರೀತಿಯಾಗಿ ಪಿಟಿಷನ್ ಹಾಕಬೇಕೆನ್ನುವುದನ್ನು ಚರ್ಚೆ ಮಾಡಿ ತೀರ್ಮಾನಕ್ಕೆ ಬರಬೇಕಾದವರು, ಏಕೆಂದರೆ, ನಿಮಗೆಲ್ಲಾ ವ್ಯವಸ್ಥೆ ಇದೆ. ಈಗ ನಿಮಗೆ ಲಾ ಡಿಪಾರ್ಟ್‌ಮೆಂಟ್ ಇದೆ, ಅಡ್ವೋಕೇಟ್ ಜನರಲ್ ಇದ್ದಾರೆ, ಒಳ್ಳೆಯ ಲಾಯರ್‌ಗಳಿದ್ದಾರೆ, ನಾರಿಮನ್ ಕೂಡ ಒಬ್ಬ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿರುವ ವಕೀಲರು. ಅದರ ಬಗ್ಗೆ ನಮ್ಮದೇನು ತಕರಾರು ಇಲ್ಲ. ಆ ಬಗ್ಗೆ ನಾನು ಏನು ಮಾತನಾಡುವುದಕ್ಕೆ ಹೋಗುವುದಿಲ್ಲ. ಇನ್ನೊಂದು ಕಡೆ ಈ ಬಗ್ಗೆ ನಾನು ಏನು ಮಾಡನಾಡುವುದಕ್ಕೆ ಹೋಗುವುದಿಲ್ಲ ಇನ್ನೊಂದು ಕಡೆ ಈ ಬಗ್ಗೆ ಚರ್ಚೆ ಮಾಡಿ. ಆದರೆ ಇವತ್ತಿನವರೆಗೆ, ನೀವು ರಿವ್ಯು ಹಾಕುತ್ತಿರಾ? Original suit under Article 131 of the Constitution of India ನಲ್ಲಿ ಹಾಕುತ್ತಿರಾ ? ಅಥವಾ, Article 136 of the Constitution of India ನಲ್ಲಿ ಹಾಕುತ್ತಿರಾ ? ನಾನು ಪತ್ರಿಕೆಯಲ್ಲಿ ಏನು ಓದಿದೆ ಎಂದರೆ, ಏಕೆಂದರೆ ಇವತ್ತಿನವರೆಗೆ ನಿಮ್ಮ ನಿಲುವನ್ನು ಬಹಿರಂಗಗೊಳಿಸಿಲ್ಲ. ಸಚಿವ ಸಂಪುಟದಲ್ಲಿ ತೆಗೆದುಕೊಂಡ ನಿಮ್ಮ ನಿರ್ಣಯವನ್ನು ನೋಡಿದರೆ ಮೂರನ್ನೂ simultaneous ಆಗಿ ಮಾಡುತ್ತೇವೆನ್ನುವ ರೀತಿ ಇದೆ. I do not know. ಅದಕ್ಕೆ I want clarification from the Government on that. ಪತ್ರಿಕೆಯಲ್ಲಿ ಬಂದಿದೆ. I don't know whether it is right or wrong.

ಶ್ರೀ ಜೆ.ಸಿ. ಮಾಧುಸ್ವಾಮಿ : Supreme Court will not say, ನೀವು ಅಲ್ಲಿ ಹೋಗಿ ಎಂದು, ನೀವು ಎರಡೂ ಕಡೆ ಟ್ರೈ ಮಾಡಿದರೆ, ಸುಪ್ರೀಂ ಕೋರ್ಟ್ ಏನು ಹೇಳುತ್ತದೆಂದರೆ, You are before the tribunal, ಅಲ್ಲಿ ಎಗ್ಸಾಸ್ಟ್ ಮಾಡಿಕೊಂಡು ಬನ್ನಿ ಎಂದು ಹೇಳುವುದಿಲ್ಲವೇ ?

ಶ್ರೀ ಸಿದ್ದರಾಮಯ್ಯ : ಅಲ್ಲ, ಮೂರು simultaneous ಆಗಿ ಅಗಬೇಕೆನ್ನುವ ತರಹ ಬಂದುಬಿಟ್ಟಿದೆ. ನೀವು ಉತ್ತರ ಹೇಳುವಾಗ ಹೇಳಿ.

ನಾನು ಪತ್ರಿಕೆಯಲ್ಲಿ ಬಂದಿರುವ ಪ್ರಕಾರ, ನಾನು ಓದಿಕೊಂಡಿರುವ ಪ್ರಕಾರ, ನನಗೆ ಆ ತರಹ ಅನ್ನಿಸಿತು.

ಶ್ರೀ ಎಂ.ಪಿ. ಪ್ರಕಾಶ್ : ನಾರಿಮನ್‌ರವರ ನೇತೃತ್ವದ ತಂಡ, ನಮಗೆ ಅವರು ಕೊಟ್ಟಿರುವ ಸಲಹೆ, ನಾವು ಆರ್ಟಿಕಲ್ 131ರ ಕೆಳಗೆ ಕೂಡ ಅರ್ಜಿ ಹಾಕುತ್ತೇವೆ, 136 ಕೆಳಗೆ ಈ ತರಹದ ವಿಶೇಷ ಅರ್ಜಿ ಫಾರಂ ಅನ್ನು ಸಲ್ಲಿಸುತ್ತೇವೆ. ಆ ಎರಡೂ ಆದ ನಂತರ ನಾವು ನ್ಯಾಯಾಧೀಕರಣದ ಮುಂದೆ ಸುಪ್ರೀಂ ಕೋರ್ಟ್ ಮುಂದೆ ಸ್ಪಷ್ಟೀಕರಣ ಮತ್ತು ಮಾರ್ಗದರ್ಶನಕ್ಕಾಗಿ ಅರ್ಜಿಯನ್ನು ಹಾಕುತ್ತೇವೆಂದು ಹೇಳಿದ್ದಾರೆ. ಅದನ್ನು ನಾವು ಒಪ್ಪಿದ್ದೇವೆ. ಅಡ್ವೋಕೇಟ್ ಜನರಲ್ ಕೂಡ ಸಚಿವ ಸಂಪುಟಕ್ಕೆ ಬಂದು ಅದನ್ನೇ ಸಲಹೆ ಮಾಡಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ತಜ್ಞರ ಒಂದು ಅಭಿಪ್ರಾಯವನ್ನು ತೆಗೆದುಕೊಂಡು ಮಾಡತಕ್ಕಂತಹದ್ದು ಒಳ್ಳೆಯದು, ಪದ್ಮನಾಭನಗರದಿಂದ ಏನಾದರೂ ಬಂದರೆ ಅದನ್ನು ತೆಗೆದುಕೊಳ್ಳಬೇಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು ಬೇರೆ ವಿಷಯದಲ್ಲಿ ಮಾತನಾಡಿ, ನೀರಾವರಿ ವಿಷಯದಲ್ಲಿ ಅವರು ತಜ್ಞರೇ.

ಶ್ರೀ ಎಂ.ಪಿ. ಪ್ರಕಾಶ್ : ಸಫ್ದರ್ ಜಂಗ್ ನಿಂದ ಬರಬಾರದೇ ಎಂದು ಕೇಳಿದೆ ಅಷ್ಟೆ..

ಶ್ರೀ ಸಿದ್ದರಾಮಯ್ಯ : ಪದ್ಮನಾಭನಗರವೆಂದ ತಕ್ಷಣ ನೀವು ತಲೆಕೆಡಿಸಿಕೊಳ್ಳುವಂತಹ ಅಗತ್ಯವಿಲ್ಲ, ಪದ್ಮನಾಭನಗರದಿಂದ ಒಳ್ಳೆಯ ಸಲಹೆ ಬಂದರೆ ಏತಕ್ಕೆ ತೆಗೆದುಕೊಳ್ಳಬಾರದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪದ್ಮನಾಭನಗರದಲ್ಲಿ ಯಾರಿದ್ದಾರೆ, ನಾನು ಪದ್ಮನಾಭನಗರವೆಂದು ಹೇಳಿದೆ ಅಷ್ಟೆ.

ಶ್ರೀ ಸಿದ್ದರಾಮಯ್ಯ : ಈಗ ಒಳ್ಳೆಯ ಸಲಹೆಗಳು ಯಾವ ಕ್ವಾರ್ಟರ್‌ನಿಂದ ಬಂದರೂ ತೆಗೆದುಕೊಳ್ಳೋಣ, If it is a good suggestion, ತೆಗೆದುಕೊಳ್ಳಬಹುದು. ನಮ್ಮದೇನೂ ತಕರಾರು ಇಲ್ಲ. ಆದರೆ ತಪ್ಪಾಗಬಾರದಷ್ಟು, ತಪ್ಪಾಗದ ರೀತಿಯಲ್ಲಿ ನೋಡಿಕೊಳ್ಳಿ, ಸರ್ಕಾರ ನಡೆಸುವವರು ನೀವಾಗಿರುವುದರಿಂದ ಜವಾಬ್ದಾರಿ ನಿಮ್ಮ ಮೇಲೆ ಜಾಸ್ತಿ ಇರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮಾಧುಸ್ವಾಮಿಯವರು, ತಹಸೀಲ್ದಾರ್‌ರನ್ನು ಬೈಯ್ಯುವುದು, ಅಸ್ಸೆಸರ್‌ಅನ್ನು ಬೈಯ್ಯುವುದು, ಅವರಿಗೆ insult ಮಾಡುವುದು, ಇದೆಲ್ಲಾ ಬೇಡವೆಂದು ಹೇಳಿ ಎಂದು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಈಗ ನಾನು ಅದನ್ನೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ, ನಮ್ಮಿಬ್ಬರ ಜೊತೆ understanding ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ನಮಗೆ ಈಗ ಅರ್ಥವಾಗುತ್ತಿದೆ, ಇವರ ಇಬ್ಬರ ನಡುವೆ ಜ್ಯುಡಿಷಿಲ್ ಸಪರೇಷನ್ ಆಗಿದೆ ಹೊರತಾಗಿ, ಇನ್ನು ಡೈವರ್ಸ್ ಆಗಿಲ್ಲ.

ಶ್ರೀ ಸಿದ್ಧರಾಮಯ್ಯ : ಇಲ್ಲ ಅವರು restitution of conjugal rightsಗೆ ಅರ್ಜಿ ಹಾಕಿಕೊಂಡಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಲ್ಲಿಯವರೆಗೆ ಅಡ್ವಾಂಟೇಜ್ ಕಾಂಗ್ರೆಸ್‌ಗಾ ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ : ಈಗ ಡೈವರ್ಸ್ ಪಿಟಿಷನು ಇಲ್ಲ, restitution of conjugal rights ಉದ್ಭವವಾಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : There is no judicial separation.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಸಿದ್ಧರಾಮಯ್ಯನವರೆ, ತಮ್ಮ ಅನುಭವದ ಹಿನ್ನೆಲೆಯಲ್ಲೆ ಮಾನ್ಯ ಪ್ರಕಾಶ್ ರವರಿಗೆ ಹೇಳುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ : ನಾನು ಏನು ಹೇಳುತ್ತಿದ್ದೆ ಎಂದರೆ, ಈಗ ಕಾನೂನಿನ ಚೌಕಟ್ಟಿನ ಒಳಗಡೆ, ಒಂದು ಟ್ರಿಬ್ಯುನಲ್ ಮುಂದೆ ರಿವ್ಯು ಪಿಟಿಷನ್ ಹಾಕುವುದು, ಇನ್ನೊಂದು ಆರ್ಟಿಕಲ್ 131 ರಲ್ಲಿ ಒರಿಜಿನಲ್ ಸೂಟ್ ಹಾಕುವುದು, 136ರಲ್ಲಿ Special Leave Petition ನಲ್ಲಿ ಅಪೀಲ್ ಹಾಕುವುದು ಸೇರಿದಂತೆ ಮೂರು ಕಡೆ ಅವೆನ್ಯೂಸ್ ಇದೆ. ಆದರೆ ನನಗಿರುವ little knowledge ನಲ್ಲಿ ಅದು ಸಾಧುವೇ ಎನ್ನುವುದನ್ನು ಇನ್ನೊಂದು ಸಾರಿ re-examine ಮಾಡಬೇಕು ಎಂದು ಹೇಳುತ್ತೇನೆ, That is my suggestion. Ultimately, I leave it to you. ನಿಮಗೆ ಕಾನೂನಿನ ಪ್ರಕಾರ ಯಾವುದು ಸರಿ ಅನಿಸುತ್ತದೆ, ಯಾವುದು ಕಾನೂನು ಪ್ರಕಾರ ಸರಿ ಇದೆ, ಎಲ್ಲಿ ನಮಗೆ ನ್ಯಾಯ ಸಿಗುತ್ತದೆ, ಎಲ್ಲಿ ನಿಮಗೆ ಭರವಸೆ ಸಿಗುತ್ತದೆ ಆ ರೀತಿ ಮಾಡಿ. Because, I am not an expert in Law. ಆದರೆ, ನಮಗೆ ನೀರು ಸಿಗುವಂತೆ ಮಾಡಿ, ಬೆಂಗಳೂರಿಗೆ ನೀರು ಸಿಗುವಂತೆ ಮಾಡಿ. ತೀರ್ಪಿನಲ್ಲಿ ಬೆಂಗಳೂರಿಗೆ ನೀರೇ

ಕೊಟ್ಟಿಲ್ಲ, ಬೆಂಗಳೂರು ನಗರಕ್ಕೆ ಏನು ಮಾಡುತ್ತೀರಿ ? ನಿಮಗೆ ಕಷ್ಟ ಬಂದಿರುವುದು. ರೈತರ ನೀರನ್ನು ನಿಮಗೇ ಕೊಡಬೇಕಾಗುತ್ತದೆ, ನಾವು ಕೊಡುವುದಿಲ್ಲವೆಂದು ಬಿಟ್ಟರೆ, ಇಲ್ಲ ಕೊಡುತ್ತೇವೆ, ಕೊಡುವುದಿಲ್ಲವೆಂದು ಹೇಳುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಂಡಿಪೆಂಡೆಂಟ್ ಅಥಾರಿಟಿ ಮಾಡಿ, ಅವರೇ ನೀರು ಬಿಡಬೇಕೆಂದು ತೀರ್ಪಿನಲ್ಲೇ ಹೇಳಲಾಗಿದೆ.

ಶ್ರೀ ಸಿದ್ದರಾಮಯ್ಯ : ನೋಟಿಫಿಕೇಷನ್ ಮಾಡಿದ ಮೇಲೆ ಅಥಾರಿಟಿ ಮಾಡಬೇಕೆಂದಿದೆ, ಅದು ಇಂಡಿಪೆಂಡೆಂಟ್ ಆಗಿ ಇರಬೇಕೆಂದು ಇದೆ. ಅದು ಇಂಡಿಪೆಂಡೆಂಟ್ ಆಗಿ ಆಕ್ಟ್ ಮಾಡುವುದು, ಅದು ಯಾರ ಅಧೀನದಲ್ಲೂ ಕೆಲಸ ಮಾಡುವಂತಿಲ್ಲ, ಇಂಡಿಪೆಂಡೆಂಟ್ ಆಗಿ ಕೆಲಸ ಮಾಡುವುದು. ನೀರಾವರಿಗೆ ನೀರು ಬೇಕು. ನಿಮ್ಮ ಬೆಂಗಳೂರಿಗೆ ನೀರಿಲ್ಲವೆಂದರೆ ನಿಮಗೆ ನೀರಿಲ್ಲ.

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ತೀರ್ಪಿನಲ್ಲಿ ಬೆಂಗಳೂರಿಗೆ 20% ಮಾತ್ರ ನೀರು ಕೊಡುತ್ತೇವೆಂದು ಇದೆ, ಅಂದರೆ ಬೆಂಗಳೂರು ಸೌತ್ ಏರಿಯಾಗೆ ಮಾತ್ರ ಸಿಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಬೆಂಗಳೂರಿನ ಮೂರನೇ ಒಂದು ಭಾಗ, 8 TMC ನೀರು ಬೇಸಿನ್‌ಗೆ ವಾಪಸ್ ಬರುತ್ತದೆಂದು 1.7 TMC ನಿಗದಿ ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ : ಅವರೇನು ಮಾಡಿದ್ದಾರೆಂದರೆ, ಒಟ್ಟು 17.6 TMC ft ನೀರು ಬೇಕೆಂದು ಹೇಳುತ್ತಾರೆ, ಅದರಲ್ಲಿ 50% ಎಂದು ಹೇಳುತ್ತಾರೆ, ಅದರಲ್ಲಿ ಮೂರನೇ ಒಂದು ಭಾಗ, ಆಮೇಲೆ 20%, ಅದರಲ್ಲಿ it comes to about 1.7 TMC.

ಶ್ರೀ ಆರ್. ಅಶೋಕ್: ಈಗಾಗಲೇ 14 TMC ನೀರನ್ನು ಉಪಯೋಗ ಮಾಡುತ್ತಿದ್ದೇವೆ.

ಶ್ರೀ ಎಸ್. ಸಿದ್ದರಾಮಯ್ಯ: ನೀವು 14 TMC ನೀರು ಉಪಯೋಗ ಮಾಡುತ್ತಿದ್ದೀರಿ ಎಂದು ಇದೆ. 30 TMC ನಿಮಗೆ ಬೇಕಾಗಿರುವುದು. Plus–minus ಎಲ್ಲ ಸೇರಿಸಿ 1.75 water is withdrawn. ಇಷ್ಟು ಉಳಿದಿದೆ, ಕುಡಿದರೆ ಕುಡಿಯಿರಿ, ಏನು ಮಾಡಿಕೊಳ್ಳುತ್ತೀರೋ ಮಾಡಿಕೊಳ್ಳಿ. 130

ಲೀಟರ್ ಮಾತ್ರ ನೀರು ಇರುವುದು. ಒಂದು ಕಡೆ ಹೇಳುತ್ತಾರೆ 130 ಲೀಟರ್ ಪರ್ ಹೆಡ್ ಎಂದು, ಇನ್ನೊಬ್ಬರಿಗೆ 100 ಲೀಟರ್ ಎಂದು ಹೇಳುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಹಳ್ಳಿಯವರಿಗೆ 40+3 ಪಟ್ಟಣದವರಿಗೆ 120 TMC.

ಶ್ರೀ ಎಸ್. ಸಿದ್ದರಾಮಯ್ಯ: ಒಂದು ಕಡೆ ಒಬ್ಬರಿಗೆ 130 ಲೀಟರ್ ಕೊಡುತ್ತಾರೆ, ಇನ್ನೊಂದು ಕಡೆ 100 ಲೀಟರ್ ಕೊಡುತ್ತಾರೆ. ಒಂದು ಕಡೆಗೆ ಹಳ್ಳಿಯವರಿಗೆ 40 ಲೀಟರ್ ಕೊಡುತ್ತಾರೆ. ದನ ಸಾಕಿದ್ದರೆ 30 ಲೀಟರ್ ಕೊಡುತ್ತಾರೆ. ಇದು ವೈಜ್ಞಾನಿಕವೆಂದು ಕರೆಯಬೇಕಾ, ಅವೈಜ್ಞಾನಿಕವೆಂದು ಕರೆಯಬೇಕಾ? ಇವರು ಯಾರು ನಮಗೆ ಇಷ್ಟೇ TMC ನೀರು ಎಂದು ನಿಗದಿ ಮಾಡುವುದಕ್ಕೆ ? ಏನು jurisdiction ಇದೆ? ಇದಕ್ಕೆ ಯಾವ ಬೇಸಿಸ್ ಇದೆ? ಇದಕ್ಕಿಂತ ತಪ್ಪು ಇರತಕ್ಕಂತಹ, ನ್ಯೂನತೆ ಇರತಕ್ಕಂತಹ judgment ಇನ್ನು ಯಾವುದು ಸಿಗುತ್ತದೆ? ಹೇಳಿ ನೋಡೋಣ. ಆದ್ದರಿಂದ ನಾನು ಸರ್ಕಾರಕ್ಕೆ ಏನು ಹೇಳುವುದೇನೆಂದರೆ, ನೀವು review petition ಹಾಕುವಾಗ ಅದನ್ನೂ ಕೂಡ ಗಂಭೀರವಾಗಿ ಆಲೋಚನೆ ಮಾಡಬೇಕು. ಏಕೆಂದರೆ ಇದರಲ್ಲಿ, ಲಿಮಿಟೆಡ್ ಸ್ಕೋಪ್ ಇದೆ. That is No. (1) ನನಗಿರುವ knowledge ಪ್ರಕಾರ No. (2) ನೀವು 131ರ ಅಡಿಯಲ್ಲಿ original suit ಹಾಕಿದರೆ, ಇದು res judicata ಬರುತ್ತದಾ ಎಂದು ನೋಡಬೇಕು. ಈಗಾಗಲೇ tribunal ನಲ್ಲಿ same issueಗಳು ಇದ್ದು, ಅದು ಇತ್ಯರ್ಥ ಆಗಿ ಬಿಟ್ಟಿರುವುದರಿಂದ, again ನೀವು original suit ಹಾಕಿಕೊಂಡು ಹೋದರೆ res judicata applay ಆಗುತ್ತದಾ ಎನ್ನತಕ್ಕಂಥದ್ದು ನೋಡಬೇಕಾಗುತ್ತದೆ. ಒಂದು issue ಮೇಲೆ same facts, same law same issues ಇರುವಾಗ ಅದರ ಮೇಲೆ ಒಂದು ಸಾರಿ competent court under the law, judgement ಕೊಟ್ಟ ಮೇಲೆ ಅದೇ facts ಮೇಲೆ, ಅದೇ issue ಮೇಲೆ ಅದೇ ಲೀಗಲ್ aspect ಮೇಲೆ ಇನ್ನೊಂದು original suit ಹಾಕಿದರೆ does it stand? In the eye of law or not. That has to be seriously examine and consider. That is another point. I want to make another suggession. ನನ್ನ ಪ್ರಕಾರ, ನನಗೆ ಗೊತ್ತಿರುವ ಮಟ್ಟಿಗೆ, review petition ಹಾಕದೇ ಹೋದರೂ Supreme court ನವರು ನೀವು ಏಕೆ

ಅಲ್ಲಿಗೆ ಹೋಗಲಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. Tribunal ಮುಂದೆ ನೀವು ಏಕೆ ಹೋಗಲಿಲ್ಲವೆಂದು ಅವರು ಹೇಳುವುದಕ್ಕೆ ಬರುವುದಿಲ್ಲ. ಅಲ್ಲಿ Forum ಇದೆ, ಅಲ್ಲಿ ಹೋಗಿ exhaust ಮಾಡಿಕೊಂಡು ಬನ್ನಿ ಎಂದು ಹೇಳುವುದಕ್ಕೆ ಬರುವುದಿಲ್ಲ. ಇದು different. Review petition ಹಾಕಲೇಬೇಕೆಂದು law ನಲ್ಲಿ ಎಲ್ಲಿದೆ? You may prefer a review petition or you may prefer appeal in the higher court. i.e., the Supreme Court. ಆದ್ದರಿಂದ ನೀವೇಕೆ review petition ಹಾಕಲಿಲ್ಲ, ಇಲ್ಲಿಗೆ ಏಕೆ ಬಂದು ಬಿಟ್ಟಿರಿ, ಎಂದು Supreme court ನವರು ಹೇಳುವುದಕ್ಕೆ ಬರುವುದಿಲ್ಲ. ಆದ್ದರಿಂದ Article 136 of the Indian Constitution ಪ್ರಕಾರ, ಅದು most suitable ಎಂದು ನನಗೆ ಅಂದಾಜಿರುವುದು. ಲೆಕ್ಕಾಚಾರ ಇರುವುದು. ಅದು ನಿಮಗೆ ಬಿಡುತ್ತೇನೆ. ನೀವು ಮೂರೂ ಒಂದೇ ಸಾರಿ ಹಾಕುತ್ತೇನೆಂದು ಹೇಳಿದಾಗ ನನಗೆ ಆಶ್ಚರ್ಯವಾಯಿತು. How is it possible, simultanies ಆಗಿ ಮೂರೂ petition ಗಳನ್ನು ಒಂದೇ ಸಾರಿ ಹಾಕುತ್ತೇನೆಂದು ಹೇಳಿದಾಗ ನಾವು ಎಲ್ಲೂ ಇಲ್ಲದೆ ಇರುವ ದಾಸಯ್ಯನ ತರಹ ಆಗಬಾರದು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಕಡೆ ಹಳ್ಳಿಗಳಲ್ಲಿ ಗಾದೆ ಇದೆ. ಈ ಕಡೆಯೂ ಇಲ್ಲ, ಆ ಕಡೆಯೂ ಇಲ್ಲ. ಎಲ್ಲೂ ಇಲ್ಲದ ಹಾಗೆ ನಾವು ನಿಂತು ಬಿಟ್ಟರೆ ನಮಗೆ ಕಷ್ಟವಾಗುತ್ತದೆ. ಅದಕ್ಕೆ ಈ legal aspects ಇದೆಯಲ್ಲ, ಇದನ್ನು ಹಾಕುವುದಕ್ಕೆ ನಿಮಗೆ ಇನ್ನು 90 ದಿನಗಳ ಕಾಲಾವಕಾಶ ಇದೆ. 90 ದಿನಗಳೊಳಗೆ ಆಳವಾಗಿ ಅಧ್ಯಯನ ಮಾಡಿ legal opinion ತೆಗೆದುಕೊಂಡು ಯಾವುದು ಸೂಕ್ತ, ನಮಗೆ ನ್ಯಾಯ ಸಿಗುವ ಸಾಧ್ಯತೆಗಳು ಹೆಚ್ಚಾಗಿವೆ, ಅದನ್ನು ನೋಡಿ ಮಾಡುವುದು ಒಳ್ಳೆಯದು ಎಂದು ನನ್ನ ಸಲಹೆ. ನನಗೆ ಅನ್ನಿಸಿದ್ದನ್ನು ನಾನು ಹೇಳಿದ್ದೇನೆ. ಇದನ್ನೇ ಮಾಡಿ ಎಂದು ನಾನು ಹೇಳುತ್ತಿಲ್ಲ. I am not demanding. ನಾನು ನಿಮಗೆ ಈ ತರಹ ಸಲಹೆ ಕೊಟ್ಟಿದ್ದೇನೆ. ನನ್ನ knowledge ಪ್ರಕಾರ, ನಾನು ಕೆಲವು ಲಾಯರ್‌ಗಳ ಜೊತೆ ಮಾತನಾಡಿದ ಪ್ರಕಾರ, ನನ್ನ ಸ್ನೇಹಿತರ ಜೊತೆ ಮಾಡನಾಡಿದ ಪ್ರಕಾರ, ಈ ತರಹ ಇದೆ ಎಂದು ನಾನು ಹೇಳಿದ್ದೇನೆ. ಅದರ ಮೇಲೆ Supreme Courtನಲ್ಲಿ practice ಮಾಡತಕ್ಕಂತಹವರು, ದೇಶದ ಮಟ್ಟದಲ್ಲಿ ಮಾಡತಕ್ಕಂತಹವರು, ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಮಾಡತಕ್ಕಂತಹ ವಕೀಲರಿದ್ದಾರೆ. ನಮ್ಮ ದೇಶದಲ್ಲಿ ವಕೀಲರಿಗೇನು ಬರ ಇಲ್ಲ.

ದೊಡ್ಡ ದೊಡ್ಡ ವಕೀಲರು, ಬುದ್ಧಿವಂತ ವಕೀಲರು ಇದ್ದಾರೆ. ಅದಕ್ಕೇನು ಬರ ಇಲ್ಲ. ಫೀಸ್ ಕೊಡುವುದಕ್ಕೆ ನಾವು ತಯಾರಾಗಿದ್ದೇವೆ. ಈಗಲೇ ನಾವು 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. We don`t mind spending money. ಅದಕ್ಕೇನು ಬರ ಇಲ್ಲ. ನೀರಿಗೆ ಬರ ಆಗಿದೆ ಅಷ್ಟೆ. ದುಡ್ಡಿಗೇನು ಬರ ಇಲ್ಲ. ಇನ್ನು 10 ಕೋಟಿ ರೂಪಾಯಿಗಳು ಖರ್ಚಾದರೂ ಇಲ್ಲವೆಂದು ಹೇಳುತ್ತೀರಾ? ದುಡ್ಡಿಗೇನು ಬರ ಇಲ್ಲ. ಸಮಸ್ಯೆ ಇರುವುದು ನೀರಿನ ಬರ. ನಾವು ಇವತ್ತು ಇದನ್ನು ಸರಿಪಡಿಸಿಕೊಳ್ಳದೆ ಹೋದರೆ, ನಮಗೆ ನಮ್ಮ ಮುಂದಿನ ಪೀಳಿಗೆ ಶಾಪ ಹಾಕುತ್ತದೆ.

ಶ್ರೀ ಎಸ್. ಎಸ್. ಪಾಟೀಲ್ : Review petition ಹಾಕುವಾಗ judges ಇವರೇ ಇರುತ್ತಾರೋ ಹೇಗೆ? ಅವರೇ ಇದ್ದರೆ review petition ಹಾಕುವುದರಲ್ಲಿ ಅರ್ಥವಿಲ್ಲ. ಅವರು ಏನು ಮಾಡಬೇಕೋ ಎಲ್ಲ ಮಾಡಿ ಕೊಟ್ಟಿದ್ದಾರೆ. ಏನೂ ಬದಲಾವಣೆ ಆಗುವುದಿಲ್ಲ. ಸುಮ್ಮನೆ ಅದಕ್ಕೆ ವಕೀಲರಿಗೆ ಖರ್ಚಾಗುತ್ತದೆ ಹೊರತು ಬೇರೇನೂ ಆಗುವುದಿಲ್ಲ.

ಶ್ರೀ ಎಸ್. ಸಿದ್ದರಾಮಯ್ಯ: ಇದಕ್ಕೆ ಬೇರೆ ದಾರಿ ಇಲ್ಲ. ಅದಕ್ಕೋಸ್ಕರ ನಾನು ಅದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. Review petition ಹಾಕುತ್ತೀರೋ Article 136ರ ಕೆಳಗೆ ಹಾಕುತ್ತೀರೋ, I leave it to you totally. You are at liberty. ನಮ್ಮ ಎಲ್ಲ co–operation ಇದೆ. ಆದ್ದರಿಂದ ನೀವು ಒಂದು ತೀರ್ಮಾನಕ್ಕೆ ಬರುವುದಕ್ಕೆ ಮುಂಚಿತವಾಗಿ ಬಹಳ ಆಳವಾದ ಅಧ್ಯಯನ, ಆಳವಾದ ಚಿಂತನೆ, ಆಳವಾದ ಚರ್ಚೆ ಮಾಡಿ ಎಂದಷ್ಟೇ ನಾನು ಸರ್ಕಾರಕ್ಕೆ ಸಲಹೆ ಕೊಡುತ್ತೇನೆ. ನಮಗೆ ನೀರು ಬಿಡಬೇಕಷ್ಟೆ. ಏಕೆಂದರೆ ಮುಂದಿನ ಪೀಳಿಗೆ ನಮಗೆ ಶಾಪ ಹಾಕಬಾರದು. ಸರ್ಕಾರ ಇದ್ದಾಗ ಇವರೇನೂ ಮಾಡಲಿಲ್ಲವೆಂದು ಹೇಳಬಾರದು. ನಾವು ಒಬ್ಬರ ಮೇಲೆ ಇನ್ನೊಬ್ಬರು ಹೇಳುತ್ತಾ ಗೂಬೆ ಕೂರಿಸುವ ಕೆಲಸ ಮಾಡುತ್ತಾ ಹೋದರೆ ಆಗುವುದಿಲ್ಲ. ಕೆಲವು ಕಡೆ ಚರ್ಚೆಯಾಗುತ್ತದೆ. ಕೇಂದ್ರ ಸರ್ಕಾರ ಮಧ್ಯೆ ಬರಬೇಕು. ಕೇಂದ್ರ ಸರ್ಕಾರ ಮಧ್ಯೆ ಬರಬಾರದು, ನೆಗೋಷಿಯೇಟ್ ಮಾಡಬಾರದು ಎಂದು ನಾನು ಹೇಳುವುದಿಲ್ಲ.

ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. : ಮಾನ್ಯ ಉಪಾಧ್ಯಕ್ಷರೆ, ಕೇಂದ್ರದ ರೈಲ್ವೆ ಬಜೆಟ್ ಮಂಡನೆಯಾದಾಗ ನೀರಾವರಿ ಸಚಿವರು ಒಂದು ಹೇಳಿಕೆ ಕೊಟ್ಟರು. ನಮಗೆ ನೀರಾವರಿಯಲ್ಲಿ ಅನ್ಯಾಯ ಮಾಡಿದ ಹಾಗೆ ಇದರಲ್ಲಿಯೂ

ಅನ್ಯಾಯ ಮಾಡಿದ್ದಾರೆಂದು ಹೇಳಿದರು. ಪತ್ರಿಕೆಯಲ್ಲಿ ಬಂದಿದೆ ತಾವು ಸ್ವಲ್ಪ ನೋಡಬೇಕು. ಇದು ಮಾನ್ಯ ಈಶ್ವರಪ್ಪನವರ ಹೇಳಿಕೆ. ಕೇಂದ್ರ ಸರ್ಕಾರದವರು ಕಾವೇರಿ ನೀರಿನಲ್ಲಿ ಅನ್ಯಾಯ ಮಾಡಿದ ಹಾಗೆ ರೈಲ್ವೆ ಬಜೆಟ್‌ನಲ್ಲಿಯೂ ಅನ್ಯಾಯ ಮಾಡಿದ್ದಾರೆಂದು ತಾವು ಹೇಳಿಕೆ ಕೊಟ್ಟಿರಿ.

ಶ್ರೀ ಎಸ್. ಸಿದ್ದರಾಮಯ್ಯ: ಇಲ್ಲಿ ಕೇಂದ್ರ ಸರ್ಕಾರದ ಪಾತ್ರ ಏನೂ ಇರುವುದಿಲ್ಲ. Tribunal ಯಾರು constitute ಮಾಡಿದರು? ಯಾರ ಕಾಲದಲ್ಲಿ constitute ಆಯಿತು? ಯಾರು ಒಪ್ಪಿಗೆ ಕೊಟ್ಟರು ಅದನ್ನೆಲ್ಲಾ ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ತಪ್ಪುಗಳನ್ನು ಹುಡುಕುತ್ತಾ ಹೋದರೆ ನೋರೆಂಟು ತಪ್ಪುಗಳನ್ನು ಹುಡುಕಬೇಕಾಗುತ್ತದೆ. ಅವೆಲ್ಲಾ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ಕೇಂದ್ರ ಸರ್ಕಾರದ ಪಾತ್ರ ಏನಿರುತ್ತದೆ? Tribunal judge, judgement ಕೊಟ್ಟರೆ ನೀವು ಹೀಗೆಯೇ judgement ಕೊಡಿ ಎಂದು ಹೇಳುವುದಕ್ಕಾಗುತ್ತಾ? Can you dictate?

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಉಪಾಧ್ಯಕ್ಷರೆ, ನಾನು Tribunal judgement ಬಗ್ಗೆ ಹೇಳಿದ್ದಲ್ಲ. ನೀರಾವರಿಗೆ ಹೇಗೆ ಅನ್ಯಾಯವಾಯಿತೋ ಅದೇ ರೀತಿ ರೈಲ್ವೆ ಬಜೆಟ್‌ನಲ್ಲಿಯೂ ಅನ್ಯಾಯವಾಯಿತು ಎಂದು ಹೇಳಿದೆ. Tribunal ಬಗ್ಗೆ ಹೇಳಲಿಲ್ಲ.

ಶ್ರೀ ಎಸ್. ಸಿದ್ದರಾಮಯ್ಯ: I don`t know. ನಾನು ಓದಿಲ್ಲ. ನಾನೇನು ಹೇಳುತ್ತೇನೆಂದರೆ, ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವುದಾಗಲಿ, ಅಥವಾ ಇನ್ನೊಬ್ಬರ ಮೇಲೆ ಗೂಬೆ ಕೂರಿಸುವುದಾಗಲಿ, ಇದು ಮಾಡುವುದಕ್ಕೆ ಸಾಧ್ಯವಿಲ್ಲ. ಕೇಂದ್ರ ಸರ್ಕಾರ ಇದರ ಬಗ್ಗೆ ಏನು ಮಾಡುವುದಕ್ಕಾಗುತ್ತದೆ? You were practicing advocate. ನಾವು advocacy ಮಾಡಿದ್ದೇವೆ. Krishna Tribunal ಮಾಡಬೇಕೆಂದು ನಾವೇ ಬರೆದಿಲ್ಲವಾ? ನಾವೇ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ. Tribunal ಮಾಡಲೇಬೇಕೆಂದು ನಾವೇ ಪತ್ರ ಬರೆದಿದ್ದೇವೆ. I can agree. Inter state water policy ಆಗಬೇಕು. Even now you can demand. Water policy ಆಗಬೇಕು. Central water policy ಆಗಬೇಕು. Even today we can demand. We can plead also. We can argue also. But we can`t blame on Government of India. Government of India

ದಿಂದ ಹೀಗಾಯಿತು ಹಾಗಾಯಿತು ಎಂದು blame ಮಾಡುವುದಕ್ಕಾಗುವುದಿಲ್ಲ. MP ಗಳೆಲ್ಲಾ ಹೋಗಿ ಪ್ರಧಾನ ಮಂತ್ರಿಗಳಿಗೆ ಭೇಟಿ ಮಾಡಿದ್ದಾರೆ. ಜಲಸಂಪನ್ಮೂಲ ಸಚಿವರಿಗೆ ಭೇಟಿ ಮಾಡಿದ್ದಾರೆ. ಅವರಿಗೆಲ್ಲಾ ನೀವು ಈ judgement notify ಮಾಡಬೇಡಿ ಎಂದು ಹೇಳಿದ್ದಾರೆ. ನಮ್ಮದೂ ಕೂಡ ಒತ್ತಾಯ ಇದೆ. judgement notify ಮಾಡಬಾರದು. ನಮಗೆ ನ್ಯಾಯ ಸಿಕ್ಕಿಲ್ಲ, ಕರ್ನಾಟಕಕ್ಕೆ ಅನ್ಯಾಯವಾಗಿದೆ. ಇಷ್ಟೊಂದು ಗುರುತರವಾದ ಅನ್ಯಾಯವನ್ನು ನಾವು ಸಹಿಸುವುದಕ್ಕಾಗುವುದಿಲ್ಲ. ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಉಪಾಧ್ಯಕ್ಷರೆ, ಈ ಜಡ್ಜ್‌ಮೆಂಟ್‌ನ್ನು ಇಂಪ್ಲಿಮೆಂಟ್ ಮಾಡಿದರೆ ನಾವೇ ಅನ್ಯಾಯ ಮಾಡಿದಂತಾಗುತ್ತದೆ. ಈ ಜಡ್ಜ್‌ಮೆಂಟ್‌ನ್ನು ಒಪ್ಪಿಕೊಂಡು ಇಂಪ್ಲಿಮೆಂಟ್ ಮಾಡುವುದಕ್ಕೆ ನಾವು ಮುಂದಾದರೆ ನಾವೇ ಅನ್ಯಾಯ ಮಾಡಿದಂತಾಗುತ್ತದೆ. ಆದಕಾರಣ ಜಡ್ಜ್‌ಮೆಂಟ್ ಇಂಪ್ಲಿಮೆಂಟ್ ಮಾಡುವುದಕ್ಕೆ ಬಿಡಕೂಡದು. ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಬಿಡಕೂಡದು ಎನ್ನುವುದಕ್ಕಿಂತ, ನಾನು I don't say like that. ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವಿಲ್ಲ. We are not in a position to implement. ಅಷ್ಟೊಂದು injustice ಆಗಿರುವಾಗ ನಾವು ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ, ಅದಕ್ಕೆ ಒಪ್ಪಿಗೆ ಕೊಟ್ಟು ಸರ್ಕಾರ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ರಾಜ್ಯದ ಜನತೆಗೆ ಅನ್ಯಾಯ ಮಾಡಿದಂತಾಗುತ್ತದೆ, ಕಾವೇರಿ ಬೇಸಿನ್ನಿನ ರೈತರಿಗೆ ಅನ್ಯಾಯ ಮಾಡಿದಂತಾಗುತ್ತದೆ, ಕುಡಿಯುವ ನೀರಿಗೆ ಬಹಳ ತೊಂದರೆಯಾಗುತ್ತದೆ, ಇನ್ನು ಮುಂದೆ ಕೈಗಾರಿಕೆಗಳೇ ಆಗುವುದಿಲ್ಲ. ಕೈಗಾರಿಕೆಗಳ ಬೆಳವಣಿಗೆಯೇ ಆಗುವುದಿಲ್ಲ. ಆರ್ಥಿಕ ಬೆಳವಣಿಗೆ ಕುಂಠಿತವಾಗುತ್ತದೆ. ಆಹಾರದ ಉತ್ಪಾದನೆ ಕಡಿಮೆಯಾಗುತ್ತದೆ. ನೀವು ಕೇವಲ 7 ಲಕ್ಷ ಚಿಲ್ಲರೆ ಭತ್ತ ಬೆಳೆಯಿರಿ ಎಂದು ಹೇಳಿದರೆ, 40 ಸಾವಿರ ಎಕರೆ ಮಾತ್ರ ಕಬ್ಬು ಬೆಳೆಯಿರಿ ಎಂದು ಹೇಳಿದರೆ ರೈತರಿಗೆ ಇದರಿಂದ ಆರ್ಥಿಕವಾಗಿ ಎಷ್ಟು ಅನ್ಯಾಯವಾಗುತ್ತದೆ. ಒಂದು ಲಕ್ಷ ಎಂಟು ಸಾವಿರ ಎಕರೆಯಲ್ಲಿ ಕಬ್ಬು ಬೆಳೆಯುತ್ತಿದ್ದವರಿಗೆ ನೀನು ಕಬ್ಬು ಬೆಳೆಯಬೇಡ, ಭತ್ತ ಮಾತ್ರ ಬೆಳೆಯಬೇಕು ಎಂದು ಹೇಳಿದರೆ how much money he is going to lose ? ಭತ್ತ ಮತ್ತು ಇತರ ಫುಡ್‌ಪ್ರೊಡಕ್ಷನ್ ಬಹಳ ಕಡಿಮೆಯಾಗಿಬಿಡುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ಒಂದು ವಿಷಯ ನನಗೆ ಅರ್ಥವಾಗಲಿಲ್ಲ. ಅಸೆಸ್ ಮಾಡುವುದಕ್ಕೆ, ಅಲೊಕೇಶನ್‌ಗೆ ಅರೈವ್ ಆಗುವುದಕ್ಕೆ ಅವರು ಇಷ್ಟಿಷ್ಟು ಬೇಕಾಗುತ್ತದೆ ಎನ್ನಬಹುದು. ಪ್ಯಾಡಿಗೆ ಇಷ್ಟು, ಶುಗರ್‌ಕೇನ್‌ಗೆ ಇಷ್ಟು ಎಂದು ಹೇಳಬೇಕಾಗುತ್ತದೆ. ಆದರೆ ಮುಂದೆ ಬೆಳೆಯುವುದಕ್ಕೆ ಸಂಬಂಧಪಟ್ಟಂತೆ ಹೇಳುವುದಕ್ಕೆ ಟ್ರಿಬ್ಯುನಲ್‌ಗೆ ಜ್ಯುರಿಸ್‌ಟಿಕ್ಷನ್ ಇತ್ತೆ, ಇದರ ಬಗ್ಗೆ ಅವರಿಗೆ ರೆಫರೆನ್ಸ್ ಮಾಡಲಾಗಿತ್ತೇ ಎಂದು ಪ್ರಶ್ನೆ ಮಾಡಬೇಕಾಗುತ್ತದೆ. How can he say ? ನೀವು ಮುಂದೆ ಹೀಗೆ ಮಾಡಬೇಡಿ, ಹಾಗೆ ಮಾಡಬೇಡಿ ಎಂದು ಹೇಳಿರುವುದಡಿ ಬಗ್ಗೆ ನನಗೆ ಅರ್ಥವಾಗಲಿಲ್ಲ. While assessing ನೀರನ್ನು ಯಾರಿಗೆ ಎಷ್ಟು ಕೊಡಬೇಕು ಎನ್ನುವ ಬಗ್ಗೆ, ಪ್ಯಾಡಿಗೆ ಎಷ್ಟು ಬೇಕು, ಸಂಬಾಗೆ ಎಷ್ಟು ಬೇಕು, ಕುರುವೈಗೆ ಎಷ್ಟು ಬಏಕು ಎಂದು ಅಸೆಸ್ ಮಾಡಿ ಟ್ರಿಬ್ಯುನಲ್‌ನವರು ನಾವು ಇಷ್ಟು ನೀರು ಕೊಟ್ಟಿದ್ದೇವೆ ಎಂದು ಹೇಳಬಹುದಾಗಿತ್ತು. ನನಗೆ ಗೊತ್ತಿಲ್ಲ ಟ್ರಿಬ್ಯುನಲ್‌ನವರಿಗೆ ಇನ್ನೇನು ರೆಫರೆನ್ಸ್ ಮಾಡಿದ್ದರೆಂದು. ಏಕೆಂದರೆ ಮುಂದೆ ಏನು ಮಾಡಬೇಕು ಎಂಬುದನ್ನು ಅವರೇ ಹೇಳಿಬಿಟ್ಟಿದ್ದಾರೆ. Semi dryಯನ್ನೇ ಹಾಕಬೇಕು, ಇಷ್ಟೇ ಭತ್ತ ಬೆಳೆಯಬೇಕು, ಇಷ್ಟೇ ಕಬ್ಬನ್ನು ಬೆಳೆಯಬೇಕು ಎಂದು ಹೇಳಿದ್ದಾರೆ. ಈ ರೀತಿ ಅವರು ಹೇಗೆ ಹೇಳುವುದಕ್ಕೆ ಸಾಧ್ಯ ಎಂಬುದನ್ನು ತಾವು ಸ್ವಲ್ಪ ನೋಡಬೇಕು. ಟ್ರಿಬ್ಯುನಲ್ ಮುಂದೆ ರೆಫರೆನ್ಸ್ ಏನಿತ್ತು ಎಂಬ ಬಗ್ಗೆ ತಾವು ನೋಡಿ. ನೀರನ್ನು ಅಲೊಕೇಶನ್ ಮಾಡುವುದಕ್ಕೆ ಸೀಮಿತವಾಗಿ ಅಲೊಕೇಶನ್‌ನ್ನು ಕ್ಯಾಲುಕ್ಯುಲೇಟ್ ಮಾಡುವುದಕ್ಕೆ, ಯಾವ ಯಾವ ಬೆಳೆಗೆ ಎಷ್ಟೆಷ್ಟು ಎಕರೆಗೆ ನೀರನ್ನು ಬಿಡಬಹುದು ಎಂದು. ಆ ರೀತಿಯಾಗಿ ನೋಡಿದರೆ ಅದು ಸರಿ ಎಂದು ಹೇಳಬಹುದು. ಆದರೆ ಮುಂದೆ ಕುಡಿಯುವ ನೀರನ್ನು ಕೊಡಕೂಡದು, trans basinಗೆ ಕೊಡಕೂಡದು, ಆ ಬೆಳೆ ಹಾಕಕೂಡದು, ಈ ಬೆಳೆ ಹಾಕಕೂಡದು ಎಂದು ಹೇಳಿದ್ದಾರೆ. Who is the tribunal to say all this? ಇದರ ಬಗ್ಗೆ ತಾವು ಸ್ವಲ್ಪ ನೋಡಿ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಉಪಾಧ್ಯಕ್ಷರೆ, ಈಗಲೇ ನಮ್ಮಲ್ಲಿ ಫುಡ್ ಪ್ರೊಡಕ್ಷನ್ ಸ್ಟ್ಯಾಗ್‌ನೇಂಟ್ ಆಗಿದೆ. ನೀರಾವರಿಯನ್ನು ವಿಸ್ತರಣೆ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ, ಇರತಕ್ಕಂಥ ಪೊಟೆನ್‌ಶಿಯಲ್‌ಗೂ ಕೂಡ ಉಪಯೋಗಿಸಿಕೊಳ್ಳುವುದಕ್ಕೆ ಆಗದೇ,,,

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಸಚಿವರು):- ಮಾನ್ಯ ಸಿದ್ದರಾಮಯ್ಯ ನವರೆ, ಒಂದು ನಿಮಿಷ, ಈಗ ಬರಗಾಲ ಬಂದಿರುವುದರಿಂದ ಫುಡ್ ಪ್ರೊಡಕ್ಷನ್ 80 ಲಕ್ಷ ಟನ್‌ಗೆ ಇಳಿಯುತ್ತಿದೆ.

ಶ್ರೀ ಸಿದ್ದರಾಮಯ್ಯ:- ಹೌದು. ಈಗ 80 ಲಕ್ಷ ಟನ್ ಮಾತ್ರ ಬರುತ್ತಿದೆ. ಅವೊತ್ತು ನಮ್ಮ ಮಾನ್ಯ ಜಗದೀಶ್ ಶೆಟ್ಟರು ಉತ್ತರ ಕೊಟ್ಟರು. ಅವೊತ್ತು ಕೂಡ ನಾನು ಬರಗಾಲದ ಬಗ್ಗೆ ಮಾತನಾಡಿದ್ದೆ. ಅವೊತ್ತಿಗೂ ಇವೊತ್ತಿಗೂ ನೋಡಿದರೆ, ಇವೊತ್ತು ಬರಗಾಲ ಇನ್ನೂ ತೀವ್ರವಾಗಿದೆ.

ಶ್ರೀ ಎಂ.ಪಿ. ಪ್ರಕಾಶ್:- ಎಣ್ಣೆಬೆಳೆಯ ಉತ್ಪನ್ನ 40% ಗೆ ಇಳಿದಿದೆ.

ಶ್ರೀ ಸಿದ್ದರಾಮಯ್ಯ:- ಎಣ್ಣೆಬೆಳೆ ಉತ್ಪನ್ನ 40% ಇಲ್ಲ. ಪಲ್ಸಸ್ ಇಲ್ಲ, ಆಯಿಲ್ ಸೀಡ್ಸ್ 40% ಇಲ್ಲ, ಫುಡ್‌ಗ್ರೈನ್ಸ್‌ನ್ನು 114 ಲಕ್ಷ ಟನ್ ಬರುತ್ತದೆ ಎಂದು ಲೆಕ್ಕ ಹಾಕಲಾಗಿತ್ತು ಆದರೆ ಇವೊತ್ತು 80 ಲಕ್ಷ ಟನ್ ಕೂಡ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಇತ್ತೀಚಿನ ವರ್ಷಗಳಲ್ಲಿ ಇದು ಅತ್ಯಂತ ಲೋಯೆಸ್ಟ್ ಈಲ್ಡ್ ಆಗಿದೆ. ಇವೊತ್ತು ಇನ್‌ಫ್ಲೇಶನ್ ಏಕೆ ಜಾಸ್ತಿಯಾಗಿದೆ? ಇನ್‌ಫ್ಲೇಶನ್ ಏಕೆ ಜಾಸ್ತಿಯಾಗಿದೆಯೆಂದರೆ, ಗೋಧಿಯನ್ನು ನಾವು ಸಾಕಷ್ಟು ಬೆಳೆದುಕೊಳ್ಳುವುದಕ್ಕೆ ಆಗಲಿಲ್ಲ, ಪಲ್ಸಸ್ ಬೆಳೆದುಕೊಳ್ಳುವುದಕ್ಕೆ ಆಗಲಿಲ್ಲ, ಆಯಿಲ್ ಸೀಡ್ಸ್ ಬೆಳೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ, ಈ ಕಾರಣದಿಂದ ಇವುಗಳನ್ನು ನಾವು ಹೊರಗಡೆಯಿಂದ ತರಿಸಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇವೆಲ್ಲಾ ಫುಡ್‌ಗ್ರೈನ್ಸ್‌ನ್ನು ಹೊರಗಡೆಯಿಂದ ತರಿಸಿಕೊಂಡಿದ್ದರಿಂದ ಮಾರ್ಕೆಟ್‌ನ್ನು ನಾವು ಸರಿಯಾಗಿ ಕಂಟ್ರೋಲ್ ಮಾಡುವುದಕ್ಕೆ ಆಗಲಿಲ್ಲ. ಒಂದು ರೀತಿಯಲ್ಲಿ ಆರ್ಟಿಫಿಶಿಯಲ್ ಸ್ಕ್ಯಾರ್‌ಸಿಟಿ ಕ್ರಿಯೇಟ್ ಆಗುತ್ತದೆ. ಇನ್ನೊಂದು ಕಡೆ ಫುಡ್‌ಗ್ರೈನ್ಸ್‌ನ ಸ್ಕ್ಯಾರ್‌ಸಿಟಿ ಇರುತ್ತದೆ. ಅದನ್ನು ತರಿಸಿಕೊಳ್ಳುವುದಕ್ಕೋಸ್ಕರವಾಗಿ ಹೋಗಿದ್ದರಿಂದ ಇವೊತ್ತು ಇನ್‌ಫ್ಲೇಶನ್ 6.5% ಗಿಂತ ಜಾಸ್ತಿಯಾಗಿದೆ. ಈ ಇನ್‌ಫ್ಲೇಶನ್ ಯಾವಾಗ ಜಾಸ್ತಿಯಾಗುತ್ತದೋ, ಒಂದು ಕಡೆ ಬರಗಾಲ, ಇನ್ನೊಂದು ಕಡೆ ಇನ್‌ಫ್ಲೇಶನ್‌ನಿಂದಾಗಿ ಬಡವನಿಗೆ ಹೊಡೆತ ಬೀಳುತ್ತದೆ. ಯಾರಿಗೆ ಕೊಂಡುಕೊಳ್ಳುವುದಕ್ಕೆ ಶಕ್ತಿ ಇರುವುದಿಲ್ಲವೋ ಈ ರೀತಿಯ ಕೊಂಡು ತಿನ್ನುವವನು ಯಾರಿರುತ್ತಾನೋ ಅವನಿಗೆ ಖಂಡಿತ ಆರ್ಥಿಕವಾಗಿ ಹೊಡೆತ ಬೀಳುತ್ತದೆ. ಇದರ ಜೊತೆಗೆ ಎಕ್ಸ್‌ಚೆಕರ್ ಮೇಲೆ ಹೊಡೆತ ಬೀಳುತ್ತದೆ. ಹೀಗಾಗಿ ಕೇವಲ ನೀರು ಕಡಿಮೆಯಾಯಿತು ಎಂದು ಒಂದೇ ದೃಷ್ಟಿಕೋನದಿಂದ ನಾವು ನೋಡುವುದಕ್ಕೆ ಆಗುವುದಿಲ್ಲ. ನಾವು ಎಕನಾಮಿಕಲಿ

ಕೂಡ ನೋಡಿದಾಗ ರಾಜ್ಯಕ್ಕೆ ದೊಡ್ಡ ಹೊಡೆತವಾಗುತ್ತದೆ. ನಮ್ಮ ಕರ್ನಾಟಕದ ರೈತರು, ಕಾವೇರಿ ಜಲಾನಯನ ಪ್ರದೇಶದ ರೈತರು ಇನ್ನೂ ಬಡವರಾಗುತ್ತಾರೆ. ಇನ್ನು ಮುಂದೆ ಆ ರೈತರ ಆರ್ಥಿಕ ಪರಿಸ್ಥಿತಿ ದಾರುಣ ಪರಿಸ್ಥಿತಿಗೆ ಬರುತ್ತದೆ. ಈಗ ನಾವು ಕಬಿನಿ ಕೆಳಗಡೆ ಸೆಕೆಂಡ್ ಸ್ಟೇಜ್‌ನಲ್ಲಿ 2 ಲಕ್ಷ ಚಿಲ್ಲರೆ ಎಕರೆಗೆ ನೀರಾವರಿಯನ್ನು ಮಾಡಬೇಕಾಗಿತ್ತು. ಇವೊತ್ತು ನೀವು ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿಬಿಟ್ಟರೆ ಆ ಭಾಗದಲ್ಲಿ ಬರುವ ಬರಗಾಲ ಪ್ರದೇಶವಾದ ಚಾಮರಾಜನಗರ, ಎಳಂದೂರು, ಕೊಳ್ಳೆಗಾಲದ ಜನರುಗಳು, ರೈತರು ಏನು ಮಾಡಬೇಕು? ಇವೊತ್ತೇ ಅವರು ಬಹಳ ಕಷ್ಟದಲ್ಲಿದ್ದಾರೆ. ಇನ್ನು ತುಮಕೂರು ಭಾಗದಲ್ಲಿ 5 ಲಕ್ಷ ಎಕರೆಗೆ ನೀರಾವರಿಯಾಗಬೇಕು. ಹೀಗಿರುವಾಗ ಇದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಹೊರಟರೆ ಎಲ್ಲ ಕಡೆ ನಾವು ಭೀಕರವಾದ ಕಷ್ಟಕ್ಕೆ ಸಿಕ್ಕಿಹಾಕಿಕೊಂಡು ಬಿಡುತ್ತೇವೆ. ನಮ್ಮ ರೈತರನ್ನು ಕಾಪಾಡಬೇಕಾದಂಥ ಜವಾಬ್ದಾರಿ ನಮ್ಮ ಮೇಲಿದೆ. ಸರ್ಕಾರದ ಮೇಲೆ ಇನ್ನೂ ಹೆಚ್ಚಿದೆ. ಇವೊತ್ತಿನ ಪರಿಸ್ಥಿತಿಯಲ್ಲಿ ಈ ರೀತಿ ಇದೆ. ನಾವು ಇದನ್ನು ಬಿಟ್ಟುಕೊಡುವುದಕ್ಕೆ ಸಾಧ್ಯವೇ ಇಲ್ಲ. ಇದು ನಮ್ಮ ಹಕ್ಕು. ಯಾರಿಗಾದರೂ ಹೇಳಿದರೂ ಕೂಡ ಎಲ್ಲರಿಗೂ ಸುಲಭವಾಗಿ ಅರ್ಥವಾಗುತ್ತದೆ. ನಮ್ಮ ಹತ್ತಿರ ನೀರು ಇಷ್ಟು ಸಿಗುತ್ತದೆ, ನಮಗೆ ಕೊಟ್ಟಿರುವುದು ಇಷ್ಟು, ಇದನ್ನು ಒಪ್ಪಿಕೊಳ್ಳಬೇಕೆ? ನಮ್ಮಲ್ಲಿ 397 ಟಿ.ಎಂ.ಸಿ. ನೀರು ಮಳೆಯಲ್ಲಿ ಸಂಗ್ರಹವಾಗುತ್ತದೆ. ಅಷ್ಟನ್ನಾದರೂ ಕೊಟ್ಟಿದ್ದರೆ ನಾವು ಖುಷಿ ಪಡಬಹುದಾಗಿತ್ತು. 270 ಅಲ್ಲ, 397 ಟಿ.ಎಂ.ಸಿ. ಮಳೆಯಲ್ಲಿ ನೀರು ಸಂಗ್ರಹವಾಗುತ್ತದೆ. ಅದನ್ನು ನೀವು ತೆಗೆದುಕೊಳ್ಳಿ ಎಂದು ಅವರು ಹೇಳಬಹುದಾಗಿತ್ತು. ಅದೇ equitable distribution ಆಗುತ್ತಿತ್ತು. ಅವರಿಗೆ 222 ಟಿ.ಎಂ.ಸಿ. ಫೀಟ್ ವಾಟರ್ ಸಿಗುತ್ತದೆ, ಇವರು, ನೀವು ತೆಗೆದುಕೊಂಡು ಹೋಗಿ 576 ಟಿ.ಎಂ.ಸಿ. ವಾಟರ್ ಎಂದು ಕೊಟ್ಟರೆ, ಇದನ್ನು ಯಾವ ಕಾನೂನಿನ ದೃಷ್ಟಿಯಲ್ಲಿ ನ್ಯಾಯ ಎಂದು ಹೇಳಬಹುದು? ಆದುದರಿಂದ ಈ ತೀರ್ಪಿನಿಂದ ಆಗತಕ್ಕಂಥ ದುಷ್ಪರಿಣಾಮಗಳ ಬಗ್ಗೆ ನೋಡುವುದಕ್ಕೇ ನಮಗೆ ಭೀಕರವಾಗಿರುತ್ತದೆ. ಇನ್ನು ಅದನ್ನು ಅನುಭವಿಸುವವರಿಗೆ ಎಷ್ಟು ನೋವಾಗುತ್ತದೆ, ಎಷ್ಟು ಸಂಕಟವಾಗುತ್ತದೆ, ಎಷ್ಟು ತೊಂದರೆಯಾಗುತ್ತದೆ ಎಂಬ ಬಗ್ಗೆ ಇವೊತ್ತು ನಾವು ಊಹಿಸಿಕೊಳ್ಳುವುದಕ್ಕೇ ಸಾಧ್ಯವಾಗುವುದಿಲ್ಲ. ಆದುದರಿಂದ ಇದು ಕಾನೂನಿನ ದೃಷ್ಟಿಯಲ್ಲಿ ಅತ್ಯಂತ ಕೆಟ್ಟ ತೀರ್ಪು. ಕರ್ನಾಟಕಕ್ಕೆ ಘೋರವಾಗಿ ಅನ್ಯಾಯವಾಗತಕ್ಕಂಥ ತೀರ್ಪು. ಇದನ್ನು

ಯಾವುದೇ ಕಾರಣಕ್ಕೂ ಕೂಡ ಜಾರಿ ಮಾಡುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ಕರ್ನಾಟಕ ರಾಜ್ಯ ಇದೆ. ಕರ್ನಾಟಕ ಸರ್ಕಾರ ಇದನ್ನು ಜಾರಿ ಮಾಡುವುದಕ್ಕೆ ಸಾಧ್ಯವೇ ಇಲ್ಲ. ನಾವೇ ಕಣ್ಣಾರೆ ನಮ್ಮ ರಾಜ್ಯದ ರೈತರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಅವರಿಗೆ ವಿಷ ಕೊಟ್ಟಂತಾಗುತ್ತದೆ. ಆ ಕಾರಣದಿಂದ ಸರ್ಕಾರ ಇದನ್ನು ಗಂಭೀರವಾಗಿ ನೋಡಬೇಕು. ಇವೊತ್ತೇನು ನಾವು ನಿರ್ಣಯ ಮಾಡಿಕೊಟ್ಟಿದ್ದೇವೆ, ಅದರಲ್ಲಿ ನೀವೇನಾದರೂ ಬದಲಾವಣೆ ಮಾಡುವುದಾದರೆ ಮಾಡಿ. ಒಕ್ಕೊರಲಿನಿಂದ ಇಡೀ ಸದನ ಇವೊತ್ತು ಕಾನೂನಿನ ಹೋರಾಟ ಮಾಡಬೇಕಾಗುತ್ತದೆ. ಇವೊತ್ತು ಇಡೀ ರಾಜ್ಯದಲ್ಲಿ ಹೋರಾಟಗಳು ನಡೆಯುತ್ತಿವೆ. ಇವೊತ್ತಿಗೂ ಕೂಡ ರಾಜ್ಯದ ತುಂಬ ಚಳುವಳಿಗಳು ನಡೆಯುತ್ತಿವೆ. ಜನ ಬೀದಿಗೆ ಇಳಿದು, ಇವೊತ್ತು ಉಪವಾಸ ಸತ್ಯಾಗ್ರಹ, ಅನ್ನ ಸತ್ಯಾಗ್ರಹ, ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಬೆದರಿಕೆಗಳು ನಡೆಯುತ್ತಿವೆ. ಆದರೆ ಒಂದು ಸಮಾಧಾನವೇನೆಂದರೆ, ಇವೆಲ್ಲಾ ಚಳುವಳಿಗಳು ಬಹಳ ಶಾಂತಿಯಿಂದ ನಡೆಯುತ್ತಿವೆ. ಚಳುವಳಿ ಗಾರರೆಲ್ಲರಿಗೂ ಕೂಡ ನಾವೆಲ್ಲರೂ ಇವೊತ್ತು ಅಭಿನಂದಿಸಬೇಕಾಗುತ್ತದೆ. ಯಾರು ಯಾರು ಚಳುವಳಿಗಳನ್ನು ಮಾಡುತ್ತಿದ್ದಾರೋ ಅಲ್ಲೆಲ್ಲಾ ಇವೊತ್ತಿನವರೆಗೂ ಒಂದು ದುರ್ಘಟನೆಯೂ ನಡೆದಿಲ್ಲ, ಅಹಿತಕರವಾದಂಥ ಘಟನೆ ನಡೆದಿಲ್ಲ, ಎಲ್ಲಿಯೂ ಕೂಡ ಆಸ್ತಿಪಾಸ್ತಿಗಳಿಗೆ ತೊಂದರೆ ಯಾಗತಕ್ಕಂಥದ್ದು ಆಗಿಲ್ಲ. ಆದರೆ ಸಣ್ಣಪುಟ್ಟ ತೊಂದರೆಗಳು ಜನರಿಗೆ ಆಗಿರಬಹುದು. ಪ್ರಯಾಣ ಮಾಡುತ್ತಿದ್ದಂಥ ಜನರಿಗೆ ರಸ್ತೆ ತಡೆ, ಆ ತಡೆ ಈ ತಡೆ ಎಂದು ಮಾಡಿದ್ದರಿಂದ ಸ್ವಲ್ಪ ತೊಂದರೆಗಳಾಗಿರಬಹುದು. ಆದರೆ ಈಗ ಅವರೆಲ್ಲರೂ ಕೂಡ ಬಹಳ ಶಾಂತಿಯಿಂದ ಮಾಡುತ್ತಿದ್ದಾರೆ, ಅತ್ಯಂತ ಸಂಯಮದಿಂದ ಮಾಡುತ್ತಿದ್ದಾರೆ, ಅವರಿಗೆ ನಾನು ಈ ಸದನದ ಮೂಲಕ ಧನ್ಯವಾದಗಳನ್ನು, ಅಭಿನಂದನೆಗಳನ್ನು ಹೇಳುವುದಕ್ಕೆ ನಾನು ಇಚ್ಛೆ ಪಡುತ್ತಿದ್ದೇನೆ. ಸರ್ಕಾರದವರು ಏನು ಹೇಳುತ್ತಿದ್ದಾರೆಂದರೆ ನಾವು ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿದ್ದೇವೆ, ಕಾನೂನು ಮತ್ತು ಸುವ್ಯವಸ್ಥೆಯನ್ನು ಮೇನ್‌ಟೇನ್ ಮಾಡಿದ್ದೇವೆಂದು ಹೇಳುತ್ತಾರೆ. ಆಲ್‌ರೈಟ್, ನಾವೇನೂ ಅದನ್ನು ವಿರೋಧ ಮಾಡುವುದಕ್ಕೆ ಹೋಗುತ್ತಿಲ್ಲ. ಜನರುಗಳೇ ಇವೊತ್ತು ಶಾಂತಿಯಿಂದ ಸಂಯಮದಿಂದ ಚಳುವಳಿಯನ್ನು ಮಾಡುತ್ತಿದ್ದಾರೆ. ಕಾನೂನು ಮತ್ತು ಸುವ್ಯವಸ್ಥೆ ವಿಚಾರದಲ್ಲಿ ಸಮಸ್ಯೆ ಉದ್ಭವಿಸದಂತೆ ನೋಡಿಕೊಂಡಿದ್ದಾರೆ. ಆದುದರಿಂದ ಅವರಿಗೆ ಈ ಸದನದ ಮೂಲಕ ನನ್ನ ಧನ್ಯವಾದಗಳು.

ಮತ್ತೊಮ್ಮೆ ನನ್ನ ಒತ್ತಾಯವೇನೆಂದರೆ ರೈತರಿಗೆ, ರಾಜ್ಯದ ಜನತೆಗೆ ಇವೊತ್ತೇನು ಅನ್ಯಾಯವಾಗಿದೆ, ಇದನ್ನು ಸರಿಪಡಿಸುವುದಕ್ಕೆ ಯಾವುದೇ ಹಂತಕ್ಕಾದರೂ ಹೋಗಬೇಕಾಗುತ್ತದೆ. ಯಾವುದೇ ಮಟ್ಟಕ್ಕಾದರೂ ಹೋಗಬೇಕಾಗುತ್ತದೆ. ಅದನ್ನು ಮಾಡಬೇಕೆಂದು ತೀವ್ರವಾಗಿ ಸರ್ಕಾರಕ್ಕೆ ಒತ್ತಾಯ ಮಾಡಿ ಇವೊತ್ತೇನು ನಾವು ನಿರ್ಣಯವನ್ನು ಮಂಡಿಸಿದ್ದೇವೆ ಈ ನಿರ್ಣಯವನ್ನೇ ಸದನ ಒಪ್ಪಿಕೊಂಡು ಆ ನಿರ್ಣಯವನ್ನೇ ಪಾಸು ಮಾಡಿದರೂ ಒಳ್ಳೆಯದೇ. ಏಕೆಂದರೆ ಅದರಲ್ಲೇನೂ ಬಹಳ ಕಠಿಣವಾದಂಥ ಶಬ್ಧಗಳನ್ನು ಬಳಸಿಲ್ಲ. ಅಥವಾ ರಾಜ್ಯ ಸರ್ಕಾರವೇ ಅದರಲ್ಲಿ ಸಣ್ಣ ಪುಟ್ಟ ತಿದ್ದುಪಡಿಗಳನ್ನು ಮಾಡಿ ನಿರ್ಣಯ ಮಾಡುತ್ತೇವೆ ಎಂದು ಹೇಳಿದರೂ ಕೂಡ ನಮ್ಮದೇನೂ ತಕರಾರಿಲ್ಲ. ಒಟ್ಟಿನಲ್ಲಿ ನಿರ್ಣಯವಾಗಬೇಕು. ನನಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟ ತಮಗೂ ವಂದಿಸಿ, ಸರ್ಕಾರದವರು ಒಪ್ಪಿಕೊಂಡಿರುವುದಕ್ಕಾಗಿಯೂ ಕೂಡ ಅವರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 5 ಗಂಟೆ 19 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ದಿನಾಂಕ 15.3.2007 ರಂದು ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)